# ಸುಡುಗಾಡು ಸಿದ್ಧರು

ಸಂಪಾದಕರು :
ಗವೀಶ ಹಿರೇಮಠ



# ಸುಡುಗಾಡು ಸಿದ್ಧರು

## ಒಂದು ಚಿಂತನೆ

(ವಿಚಾರ ಸಂಕಿರಣ ಪ್ರಬಂಧಗಳು)

•

ಪ್ರಧಾನ ಸಂಪಾದಕರು

**ಕೆರೆಮನೆ ಶಂಭುಹೆಗಡೆ**

•

ಸಂಪಾದಕರು

**ಗವೀಶ ಹಿರೇಮಠ**

**ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,**

ಬೆಂಗಳೂರು-೦೨

Sudugadu Siddharu - Ondu Chintane
A collection of seminar articles

Chief Editor : Keremane Shambhu Hegde

Edited by : Sri Gavish Hiremath

Published by : B. N. Paraddi, Registrar,
Karnataka Janapada and
Yakshagana Academy,
Kannada Bhavan, J. C. Road,
Bangalore -02

Pages : 10 + 71 = 81

Price : Rs. 50-00

© : ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು

ಪ್ರಧಾನ ಸಂಪಾದಕರು : ಶ್ರೀ ಕೆರೆಮನೆ ಶಂಭುಹೆಗಡೆ

ಸಂಪಾದಕರು : ಶ್ರೀ ಗವೀಶ ಹಿರೇಮಠ

ಮೊದಲ ಮುದ್ರಣ : ೨೦೦೭

ಪುಟಗಳು : ೧೨ + ೭೧ = ೮೩

ಪ್ರತಿಗಳು : ೧೦೦೦

ಬೆಲೆ : ರೂ. ೫೦-೦೦

ಪ್ರಕಾಶಕರು : ಬಿ. ಎನ್. ಪರಡ್ಡಿ
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು - ೫೬೦೦೦೨

ಮುದ್ರಣ :
ಪ್ರಭು ಗ್ರಾಫಿಕ್ಸ್,
ತೋಂಟದಾರ್ಯ ಮಠದ ಎದುರು, ಸ್ಟೇಶನ್ ರೋಡ, ಗದಗ.
ಫೋ : [08372] 238181 ಮನೆ : 238182 ಮೊ : 9448186063, 9880904707

# ಅಕಾಡೆಮಿ ಅಧ್ಯಕ್ಷರ ನುಡಿ . . .

ರಾಷ್ಟ್ರದ ಸಾಂಸ್ಕೃತಿಕ ಇತಿಹಾಸದಲ್ಲಿ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ, ಅಧ್ಯಯನ, ಪ್ರಸಾರ, ಪ್ರಕಟಣೆ, ಕಲಾವಿದರ ಪುರಸ್ಕಾರ, ಪ್ರಶಸ್ತಿಗಾಗಿಯೇ ಒಂದು ಅಕಾಡೆಮಿ ಸ್ಥಾಪನೆಯಾಗಿರುವುದು ಕರ್ನಾಟಕದಲ್ಲಿ ಮಾತ್ರ. ಇದೊಂದು ಹೆಮ್ಮೆಯ ಸಂಗತಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಕರ್ನಾಟಕ ಸರ್ಕಾರ ಸ್ಥಾಪಿಸಿರುವುದು, ನೆಲಮೂಲ ಸಂಸ್ಕೃತಿಗೆ ನೀಡಿದ ಬಹು ದೊಡ್ಡ ಗೌರವ ಎಂದೇ ಭಾವಿಸಿದ್ದೇವೆ. ಈ ಅಕಾಡೆಮಿ ಸ್ಥಾಪನೆಯಾಗುವುದರ ಹಿಂದೆ ಹಲವರ ಶ್ರಮವಿದೆ. ಒತ್ತಾಸೆಯೂ ಇದೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇಪ್ಪತ್ತೈದು ವರ್ಷಗಳನ್ನು ಪೂರೈಸುತ್ತಿದೆ. ಒಂದು ಸಾಂಸ್ಕೃತಿಕ ಸಂಸ್ಥೆಗೆ ಈ ಅವಧಿ ಕಡಿಮೆಯೇನಲ್ಲ. ಈ ಅವಧಿ ಕರ್ನಾಟಕ ಜಾನಪದೀಯವಾಗಿ ಹಲವು ಮೈಲಿಗಲ್ಲುಗಳನ್ನು ನೆಟ್ಟಿದೆ. ಸಾಂಸ್ಕೃತಿಕ ದಾಖಲೆಯ ಭವ್ಯತೆಯನ್ನು ಮೆರೆದಿದೆ. ಜಾನಪದ ಸಂಪನ್ನ ಹೆಚ್. ಎಲ್. ನಾಗೇಗೌಡರಿಂದ ಆರಂಭಗೊಂಡು, ಈ ತನಕ ಬಂದ ಎಲ್ಲ ಅಧ್ಯಕ್ಷರು ಅವರವರ ಕೈಗೆಟಕುವ, ಸಾರ್ಥಕ ಕೆಲಸ ಮಾಡಿಹೋಗಿದ್ದಾರೆ. ಈ ಎಲ್ಲ ಮಹನೀಯರ ಸಾಧನೆ ದೊಡ್ಡದೆಂದೇ ನಾನು ಭಾವಿಸಿದ್ದೇನೆ. ಹಾದಿ ಬೀದಿಯಲ್ಲಿ ಭಿಕ್ಷಾಟನೆ ಮಾಡುವ ಕಲಾವಿದರನ್ನು ಗುರುತಿಸಿ, ಅವರವರ ಕಲಾ ಸಾಧನೆಗೆ ತಕ್ಕ ಹಾಗೆ ಗೌರವಿಸಿದೆ. ನಿರ್ಲಕ್ಷ್ಯಕ್ಕೆ ಒಳಗಾದ ಹಲವು ಕಲಾವಿದರನ್ನ ಸಾಂಸ್ಕೃತಿಕ ಗಣ್ಯರ ಸಮಕ್ಷಮದಲ್ಲಿ ಕೂಡಿಸಿ, ಹಾರ ಹಾಕಿ, ಹಣ್ಣು–ಹಣ ನೀಡಿ ಗೌರವಿಸುತ್ತಿದ್ದಾಗ, ಆ ಕಲಾವಿದ ಪಿಳಪಿಳನೆ ಕಣ್ಣು ಬಿಟ್ಟದ್ದನ್ನು, ಭಾವೋದ್ರೇಕದಿಂದ ಗಳಗಳನೆ ಅತ್ತದ್ದನ್ನು ನಾನು ಕಂಡಿದ್ದೇನೆ. ಆತನ ಕಲೆಯ ಮಹತ್ವ ಆತನಿಗೆ ಅರಿವಿಲ್ಲದಿದ್ದರೂ, ನಾಡಿನ ಸಾಂಸ್ಕೃತಿಕ ಪರಂಪರೆಯಲ್ಲಿ ಆತನ ಸ್ಥಾನ ಮಾನವೇನು ? ಎಂಬ ಅರಿವು ಅಕಾಡೆಮಿಗೆ, ಸಂಸ್ಕೃತಿ ಚಿಂತಕರಿಗೆ ಇರುತ್ತದೆ. ಹಾಗಾಗಿ ಇಲ್ಲಿ ಹಾಡುಹಾಡುತ್ತಲೇ ಮರೆಯಾಗಿ ಬಿಡುತ್ತಿದ್ದ, ಕುಣಿದು ಇಲ್ಲವಾಗುತ್ತಿದ್ದ ಕಲಾವಿದರಿಗೂ ಅಕಾಡೆಮಿಯಿಂದಾಗಿ ಸಾಂಸ್ಕೃತಿಕ ಘನತೆಯನ್ನು; ಗಾಂಭೀರ್ಯವನ್ನು ತಂದು ಕೊಡುವುದಕ್ಕೆ ಸಾಧ್ಯವಾಗುತ್ತಿದೆ. ಈ ಬಗೆಯ ಹಲವು ಯೋಜನೆಗಳನ್ನು ಅಕಾಡೆಮಿ ರೂಪಿಸಿದೆ. ಇದರ ಅರಿವು ತಮಗೂ ಇದೆ ಅಂದುಕೊಂಡಿದ್ದೇನೆ.

ಯೋಗಾಯೋಗ ಅನ್ನುವಂತೆ ಅಕಾಡೆಮಿಗೆ ಇದೀಗ ಬೆಳ್ಳಿ ಹಬ್ಬದ ವೈಭೋಗ. ಕರ್ನಾಟಕ ರಾಜ್ಯ ಸುವರ್ಣ ಮಹೋತ್ಸವ ಸಂದರ್ಭವೂ ಇದೇ ಆಗಿದೆ. ಇದನ್ನು ಸಾರ್ಥಕವಾಗಿ, ಸ್ಮರಣೀಯವಾಗಿ ಆಚರಿಸಬೇಕೆಂಬುದು ಅಕಾಡೆಮಿ ಬಳಗದ ಆಲೋಚನೆ. ಆ ಹಿನ್ನೆಲೆಯಲ್ಲಿ ರಚನಾತ್ಮಕ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಕಾರ್ಯೋನ್ಮುಖ ವಾಗುತ್ತಿರುವದನ್ನು ಇಲ್ಲಿ ದಾಖಲಿಸಲು ಹರ್ಷಿಸುತ್ತೇವೆ. ಈ ಕೆಲಸಕ್ಕೆ ನಾಡಿನ ಸಾಂಸ್ಕೃತಿಕ ಲೋಕದ ಗಣ್ಯರ, ಕಲಾವಿದರ, ವಿದ್ವಾಂಸರ ಸಾಂಸ್ಕೃತಿಕ ನೆರವನ್ನು ಅಕಾಡೆಮಿ ಬಳಗ ಎರಡೂಕೈಯೊಡ್ಡಿ ಬಯಸುತ್ತದೆ. ಕನ್ನಡ ನಾಡಿನ ಸುವರ್ಣ ಸಂಭ್ರಮ; ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬೆಳ್ಳಿ ವರ್ಷದ ಬೆಳ್ಳಿ ಬೆಡಗಿನ ಆಚರಣಾ ಸಂಭ್ರಮ; ತಮ್ಮಗಳ ಕೊಡುವಿಕೆಯಿಂದಾಗಿ ವಿಜೃಂಭಿಸಬೇಕೆಂಬುದು ನಮ್ಮ ಹಂಬಲ. ಕರ್ನಾಟಕ ಸರ್ಕಾರದ ಮಾನ್ಯ ಕಾರ್ಯದರ್ಶಿಗಳಾದ ಶ್ರೀ ಐ. ಎಂ. ವಿಠ್ಠಲಮೂರ್ತಿ ಅವರು ಇದೇ ಮಾತನ್ನು ಸಾಂಸ್ಕೃತಿಕ ಸಭೆ, ಸಮಾವೇಶಗಳಲ್ಲಿ ಹೇಳುತ್ತಿದ್ದಾರೆ. ಕಾರ್ಯಕ್ರಮ ಕಲಾವಿದರ ನಿಜವಾದ ಸಂಭ್ರಮವಾಗಿರಬೇಕು. ಅದು ಪಾರದರ್ಶಕವಾಗಿರಬೇಕು. ಆತನ ಕಲೆಗೂ ಬೆಲೆ ಇರಬೇಕು. ಕಲಾವಿದನೂ ಬದುಕಬೇಕು. ಇದೇ ಬಯಕೆ ನಮ್ಮದೂ ಆಗಿದೆ. ಇದರಲ್ಲಿ ತಮ್ಮ ಸಹಕಾರವೂ ಇರಬೇಕೆಂದು ನಾಡಿನ ಸಾಂಸ್ಕೃತಿಕ ಲೋಕದ ಗಣ್ಯರಾದ ತಮ್ಮಲ್ಲಿ ಕೋರಿಕೆ ಇಡುತ್ತಿದ್ದೇನೆ.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕಾರ್ಯಚಟುವಟಿಕೆಗಳಲ್ಲಿ ವಿಚಾರ ಸಂಕಿರಣಗಳನ್ನು ಹಮ್ಮಿಕೊಂಡು, ಈ ಕ್ಷೇತ್ರದ ಮಹತ್ವದ ಸಂಗತಿಗಳ ಬಗ್ಗೆ, ಜಾನಪದದಲ್ಲಿ ಕೆಲಸ ಮಾಡಿದ ಹಿರಿಯರ ಸೇವೆ-ಸಾಧನೆಗಳ ಬಗ್ಗೆ ಚಿಂತನೆ ಹೆಚ್ಚಿಸುವುದು ಮತ್ತು ವಿಚಾರ ಸಂಕಿರಣಗಳಲ್ಲಿ ಮಂಡಿತವಾದ ಪ್ರಬಂಧಗಳನ್ನು ಚರ್ಚಿತವಾದ ಸಂಗತಿಗಳನ್ನು ಸಂಪಾದಿಸಿ ಪುಸ್ತಕ ರೂಪದಲ್ಲಿ ದಾಖಲಿಸುವುದು ಅಕಾಡೆಮಿಯ ಉದ್ದೇಶಗಳಲ್ಲಿ ಒಂದು. ಹಾಗೆ ದಿನಾಂಕ ೦೯-೩-೨೦೦೭ ರಂದು ಸುಡುಗಾಡು ಸಿದ್ಧರ ಬಗ್ಗೆ ಒಂದು ವಿಚಾರ ಸಂಕಿರಣವನ್ನು ಕೊಪ್ಪಳದಲ್ಲಿ ನೆರವೇರಿಸ ಲಾಗಿತ್ತು. ಅಂದು ಮಂಡಿತವಾದ ಪ್ರಬಂಧಗಳನ್ನು ಮತ್ತು ವ್ಯಕ್ತವಾದ ಅಭಿಪ್ರಾಯಗಳನ್ನು ನಮ್ಮ ಅಕಾಡೆಮಿಯ ಸದಸ್ಯರಾದ ಶ್ರೀ ಗವೀಶ ಹಿರೇಮಠ ಅವರು ಸಂಪಾದಿಸಿ ಕೊಟ್ಟಿದ್ದಾರೆ. ಅದಕ್ಕಾಗಿ ಅವರನ್ನು ಗೌರವಪೂರ್ವಕವಾಗಿ ಅಭಿನಂದಿಸುತ್ತೇನೆ. ಸಾರಸ್ವತ ಪ್ರಪಂಚ ಇದನ್ನು ಆಸಕ್ತಿಯಿಂದ ಬರಮಾಡಿಕೊಳ್ಳುತ್ತದೆ ಎಂಬ ವಿಶ್ವಾಸ ನನ್ನದು.

**ಕೆರೆಮನೆ ಶಂಭು ಹೆಗಡೆ,**
ಅಧ್ಯಕ್ಷರು,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

## ಸಂಪಾದಕರ ಮಾತು . . . . . .

ದಿನಾಂಕ : ೯–೩–೨೦೦೭ ರಂದು ಕೊಪ್ಪಳದ ಸಾಹಿತ್ಯ ಭವನದಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಹಾಗೂ ಕೊಪ್ಪಳ ಸುಡುಗಾಡಸಿದ್ಧರ ಸಂಘ ಇವುಗಳ ಸಹಯೋಗದಲ್ಲಿ "ಸುಡುಗಾಡುಸಿದ್ಧರು – ಒಂದು ಚಿಂತನೆ" ವಿಚಾರ ಸಂಕಿರಣವು ಯಶಸ್ವಿಯಾಗಿ ಜರುಗಿ ಅಲ್ಲಿಯ ನಾಗರಿಕರಿಗೆ, ವಿದ್ಯಾವಂತರಿಗೆ, ಬುದ್ಧಿ ಜೀವಿಗಳಿಗೆ ಹೊಸ ಚಿಂತನೆ, ಆಲೋಚನೆಗೆ ಹುಟ್ಟು ಹಾಕಿತೆನ್ನುವುದರಲ್ಲಿ ಎರಡು ಮಾತಿಲ್ಲ. ಸುಡುಗಾಡುಸಿದ್ಧರು ಬಹುಪಾಲು ಜನರು ಕೊಪ್ಪಳ ಸುತ್ತು ಮುತ್ತಲು ಇರುವುದರಿಂದ ಕೊಪ್ಪಳದಲ್ಲಿಯೇ ಈ ವಿಚಾರ ಸಂಕಿರಣ ಜರುಗಿದ್ದು ಅರ್ಥಪೂರ್ಣ ಹಾಗೂ ಔಚಿತ್ಯಪೂರ್ಣವೆಂದು ನಾನು ಭಾವಿಸಿದ್ದೇನೆ.

ಈ ವಿಜ್ಞಾನ ಯುಗದಲ್ಲಿ, ನಾಗರಿಕತೆಯ, ಆಧುನಿಕ ಜಗತ್ತಿನಲ್ಲಿ ಮನುಷ್ಯ ಏನೆಲ್ಲ ಸೌಲಭ್ಯಗಳನ್ನು, ಸೌಕರ್ಯಗಳನ್ನು ಪಡೆದಿದ್ದಾನೆಂದರೂ ಈ ದೇಶದಲ್ಲಿ ಇನ್ನೂ ಕೋಟಿ ಕೋಟಿ ಜನರು ನಾಗರಿಕತೆಯ ಸೋಂಕಿಲ್ಲದೆ, ಶತ ಶತಮಾನಗಳಿಂದ ಹೊಟ್ಟೆಗೆ ಹಿಟ್ಟಿಲ್ಲದೆ, ಮೈಗೆ ಬಟ್ಟೆ ಇಲ್ಲದೆ, ವಾಸಿಸಲು ಮನೆ ಇಲ್ಲದೆ ನಾಡಿಂದ ನಾಡಿಗೆ, ಊರಿಂದ ಊರಿಗೆ ಅಲೆಯುತ್ತ ಬದುಕುತ್ತಿರುವುದನ್ನು ನಾವು ಕಾಣುತ್ತಿದ್ದೇವೆ.

ಈ ಬುಡಕಟ್ಟು ಜನಾಂಗಕ್ಕಾಗಿ, ಕೇಂದ್ರ ಸರಕಾರ, ರಾಜ್ಯ ಸರಕಾರ ಅನೇಕ ಯೋಜನೆಗಳನ್ನು ರೂಪಿಸುತ್ತಲೇ ಬಂದಿದೆ. ಆದರೂ ಈ ಜನಾಂಗ ಕಾಡಿನಲ್ಲಿ, ಗುಡ್ಡಗಾಡು ಪ್ರದೇಶಗಳಲ್ಲಿ ಮಳೆ–ಚಳಿ ಬಿಸಿಲು ಎನ್ನದೇ ಬದುಕುತ್ತಿದ್ದಾರೆ. ಸರಕಾರಗಳ ಯಾವ ಯೋಜನೆಗಳೂ ಅವರನ್ನು ತಲುಪುತ್ತಿಲ್ಲ. ಈ ಜನಾಂಗದಿಂದ ಸಾವಿರಕೊಬ್ಬರು ವಿದ್ಯಾವಂತರಾಗಿ ಹೊಸಗಾಳಿ, ಹೊಸಬೆಳಕು ಪಡೆದವರಾಗಿದ್ದಾರೆ.

ಇಂಥ ಅಲೆಮಾರು ಜನಾಂಗದಲ್ಲಿ ಸುಡುಗಾಡುಸಿದ್ಧರೂ ಇದ್ದಾರೆ. ಊರ ಹೊರಗೆ ಗುಡಿಸಲು ಹಾಕಿಕೊಂಡು ಊರಿಂದೂರಿಗೆ ಅಲೆಯುತ್ತ ತಮ್ಮ ಕಲೆ ಪ್ರದರ್ಶಿಸುತ್ತ ಹೊಟ್ಟೆ ತುಂಬಿಕೊಳ್ಳುವ ಈ ಜನರು ತಮ್ಮದೇ ಆದ ಕಲೆ, ಸಂಸ್ಕೃತಿ, ಪರಂಪರೆಯಲ್ಲಿ ಸಾಗಿಬಂದಿದ್ದಾರೆ. ಇವರಿಗೆ ತಮ್ಮದೇ ಆದ ನ್ಯಾಯಪಂಚಾಯತ ಇರುತ್ತದೆ. ಆರ್ಥಿಕವಾಗಿ, ಶೈಕ್ಷಣಿಕವಾಗಿ ಯಾವ ಪ್ರಗತಿಯನ್ನು ಕಾಣದ ಇವರು ಕಷ್ಟದಲ್ಲಿಯೂ

ತಮ್ಮ ಕಲೆ, ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದದು ಗಮನಾರ್ಹ ಸಂಗತಿಯಾಗಿದೆ. ತಮ್ಮ ಆಚಾರ, ವಿಚಾರ, ನಂಬಿಕೆಗಳನ್ನು ಬಿಟ್ಟುಕೊಡಲು ಈ ಜನರು ಸಿದ್ಧರಿಲ್ಲ. ತಮ್ಮದೇ ಆದ ಮದುವೆ, ಜಾತ್ರೆ, ಉತ್ಸವ ತಮ್ಮದೇ ಜಗತ್ತು.

ಈ ಜನಾಂಗ ಮೂಲತಃ ಆಂಧ್ರದಿಂದ ಬಂದವರೆಂದು ಹೇಳಿದರೂ ಕರ್ನಾಟಕದ ಬಹುಭಾಗಗಳಲ್ಲಿದ್ದಾರೆ. ವಿಶೇಷವಾಗಿ ಉತ್ತರ ಕರ್ನಾಟಕದ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಧಾರವಾಡ, ಬೆಳಗಾಂವದಲ್ಲಿ ಹೆಚ್ಚುಕಾಣಿಸಿಕೊಳ್ಳುತ್ತಿದ್ದಾರೆ. ಇವರು ಶ್ರೀಶೈಲ ಮಲ್ಲಿಕಾರ್ಜುನನ್ನು ಕೊಂಡಾಡುವುದು ನೋಡಿದಾಗ ಶೈವ ಸಂಪ್ರದಾಯದವರಾಗಿದ್ದರೆನಿಸುತ್ತೆ. ಇವರು ವಿಠೋಬನ ಭಕ್ತರೂ ಆಗಿದ್ದಾರೆ. ಸುಡುಗಾಡುಸಿದ್ಧರಲ್ಲಿಯೂ ಉಪಜಾತಿ, ಪಂಗಡಗಳು ಕಂಡರೂ ಉದ್ಯೋಗ, ಕುಲಕಸುಬು ಒಂದೇ ಆಗಿದೆ.

ಈ ಜನಾಂಗದ ಆಚಾರ-ವಿಚಾರ ಕುರಿತು, ಇವರ ರೀತಿ-ನೀತಿ ಕುರಿತು ಇವೆಲ್ಲವುಗಳಿಗಿಂತ ಇವರ ಅಭ್ಯುದಯಕ್ಕಾಗಿ ಚಿಂತನ, ಮಂಥನ ನಡೆಯಬೇಕಾಗಿದೆ. ಇವರು ಮೂಲ ಸಂಸ್ಕೃತಿಯನ್ನು ಬಿಡಬೇಕೆ ? ನಾಗರಿಕತೆಯ ಬದುಕಿನಲ್ಲಿ ಬಂದು ತಮ್ಮ ಸಂಸ್ಕೃತಿ ತಮ್ಮ ಪರಂಪರೆಗಳನ್ನು ಕಳಚಿಕೊಳ್ಳ ಬೇಕೆ ? ಬಿಡಬಾರದು ಎನ್ನುವುದಾದರೆ ಈ ಜನರು ಆಧುನಿಕ ಸೌಲಭ್ಯಗಳಿಂದ ವಂಚಿತರಾಗಬೇಕೆ ? ತಮ್ಮ ನ್ಯಾಯಾಲಯ ಕೈಬಿಟ್ಟು ಕೋರ್ಟು ಕಟ್ಟೆ ಹತ್ತಬೇಕೆ ? ಈ ಎಲ್ಲ ವಿಷಯಗಳಲ್ಲಿ ಚರ್ಚಿಸಬೇಕು. ಇವರ ಕಲೆ, ಸಂಸ್ಕೃತಿಗಳ ಉಳಿಸಿ ಬದುಕಿನ ಏರಿಳಿತಗಳಿಗಾಗಿ ಚಿಂತನೆ ನಡೆಯಬೇಕು. ಆ ನಿಟ್ಟಿನಲ್ಲಿ ಯೋಚಿಸಿ ನಮ್ಮ ಜಾನಪದ ಅಕಾಡೆಮಿ ಇಂಥ ಕಾರ್ಯ ಹಮ್ಮಿಕೊಂಡಿದೆ. ಇಡೀ ದಿನ ಅನೇಕ ವಿದ್ವಾಂಸರು ತಮ್ಮ ವಿಚಾರಗಳನ್ನು ವ್ಯಕ್ತಪಡಿಸಿ ಚಿಂತನೆಗೆ ಎಡೆಮಾಡಿಕೊಟ್ಟಿದ್ದಾರೆ. ಸುಮಾರು ೨೦೦ ಜನ ಸುಡುಗಾಡಸಿದ್ಧರು ಇದರಲ್ಲಿ ಭಾಗವಹಿಸಿ ಅವರಿಗೂ ಚಿಂತಿಸುವಂತೆ ಮಾಡಿದ್ದು ಮಹತ್ವದ್ದಾಗಿದೆ. ಇಲ್ಲಿ ಭಾಗವಹಿಸಿದ್ದ ವಿದ್ವಾಂಸರು ಬುಡಕಟ್ಟು ಜನಾಂಗದ ಮೇಲೆ, ಅಲೆಮಾರು ಜನರ ಮೇಲೆ ಅಧ್ಯಯನ ಮಾಡಿದವರು. ಅವರನ್ನು ಹತ್ತಿರದಿಂದ ಕಂಡವರು. ಅಂಥವರ ಮಧ್ಯದಿಂದಲೇ ಹುಟ್ಟಿಬೆಳೆದವರು ಆಗಿದ್ದರಿಂದ ಈ ವಿಚಾರಗೋಷ್ಠಿ ಅರ್ಥಪಡೆದಿದೆ.

ವಿಚಾರ ಸಂಕಿರಣದ ವಿಷಯ ಪ್ರಸ್ತಾಪ ಮಾಡಿ ಕಾರ್ಯರೂಪಕ್ಕೆ ಬರುವವರೆಗೂ ಹಿಂಬಾಲಿಸಿದವರು ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರೂ ಸ್ನೇಹಿತರೂ ಆದ ಡಾ. ಟಿ. ಎಂ. ಭಾಸ್ಕರ ಅವರು. ಕಾರ್ಯಕ್ರಮದ ರೂಪರೇಷೆಗಳಿಂದ ಹಿಡಿದು ಮುಗಿಯುವವರೆಗ ಜೊತೆಯಾಗಿದ್ದವರು. ಅದಕ್ಕಾಗಿ ಮೊದಲು ಅವರಿಗೆ ಕೃತಜ್ಞತೆ ಹೇಳಬೇಕಾಗಿದೆ. ಕೊಪ್ಪಳದಲ್ಲಿ ವಿಚಾರ ಸಂಕಿರಣ ಹಮ್ಮಿಕೊಂಡಿದ್ದು ನನಗೆ ಬಹಳಷ್ಟು ಖುಷಿ ತಂದಿದೆ. ಹತ್ತಿರದ ಬಿಸರಳ್ಳಿಯವನೇ ಆದ ನಾನು ಕೊಪ್ಪಳದಲ್ಲಿಯೇ ಓದಿ

ಬೆಳೆದಿದ್ದು ನನಗೆ ಇದು ಅಭಿಮಾನದ ಸಂಗತಿ, ಕೊಪ್ಪಳ ಗವಿಸಿದ್ಧೇಶ್ವರ ಕಾಲೇಜಿನ ಗ್ರಂಥಪಾಲರಾದ ಎಂ. ಎಸ್. ಘಂಟಿಯವರನ್ನು ಕಂಡು ಕಾರ್ಯಕ್ರಮದ ವಿಚಾರ ವ್ಯಕ್ತಪಡಿಸಿದೆ. ಸುಡುಗಾಡುಸಿದ್ಧರು ಜನಾಂಗದಿಂದ ಬೆಳೆದುಬಂದ ಮಾನ್ಯ ಘಂಟಿಯವರು ಅಭಿಮಾನದಿಂದ ಈ ಕಾರ್ಯ ಕೈಗೆತ್ತಿಕೊಂಡರು, ಅಲ್ಲಿಯ ಸುಡುಗಾಡುಸಿದ್ಧರ ಸಂಘದ ಅಧ್ಯಕ್ಷರಾದ ಶ್ರೀ ಸಣ್ಣ ಶಿವಪ್ಪ ಒಂಟೆತ್ತಿನವರ ಅವರನ್ನು ಸಂಪರ್ಕಿಸಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀ ಸಣ್ಣಶಿವಪ್ಪ ಅವರೂ ಕೂಡ ಸಹಕಾರ ನೀಡಿ ತಮ್ಮ ಸಂಘದ ಸಂಯುಕ್ತಾಶ್ರಯದಲ್ಲಿ ನಡೆಸಲು ಮುಂದಾದರು. ನಂತರ ಕೊಪ್ಪಳ ಅನೇಕ ಆತ್ಮೀಯರು, ಸ್ನೇಹಿತರು ನೆರವಾದರು. ಶ್ರೀ ಎಚ್. ಎಸ್. ಪಾಟೀಲ, ಡಾ. ಕೆ. ಬಿ. ಬ್ಯಾಳಿ, ಶ್ರೀ ಪ್ರಕಾಶ ಬಳ್ಳಾರಿ, ಶ್ರೀ ಎಸ್. ಎನ್. ತಿಮ್ಮನಗೌಡರ್, ಡಾ. ಗವಿಸಿದ್ಧಪ್ಪ ಪಾಟೀಲ, ಹನುಮಂತಪ್ಪ ಅಂಡಗಿ, ಶ್ರೀಮತಿ ಸಾವಿತ್ರಿ ರವಿಕಾಂತನ್ನವರ, ಶ್ರೀಮತಿ ಜಂಗುಲಕ್ಷ್ಮಿ ಲಿಂಗಯ್ಯ ಹಿರೇಮಠ ಅವರ ಸಹಾಯ ಸಹಕಾರ ಮರೆಯುವಂತಿಲ್ಲ.

ಈ ವಿಚಾರ ಸಂಕಿರಣದಲ್ಲಿ ತಮ್ಮ ಮಹತ್ವ ಪೂರ್ಣ ಪ್ರಬಂಧ ಮಂಡಿಸಿ ಅವುಗಳನ್ನು ಪ್ರಕಟಣೆಗೆ ಸಿದ್ಧಪಡಿಸಿಕೊಟ್ಟ ಡಾ. ಟಿ. ಎಂ. ಭಾಸ್ಕರ, ಡಾ. ವಿ. ಎಲ್. ಪಾಟೀಲ, ಡಾ. ಹರಶ್ಚಂದ್ರ ದಿಗ್ಗಂಗಿಕರ್, ಶ್ರೀ ಎಂ. ಎಸ್. ಘಂಟಿ ಅವರಿಗೆ ಕೃತಜ್ಞತೆಗಳು, ಇದರಲ್ಲಿ ಡಾ. ಎನ್. ಎಂ. ಪಾಟೀಲ, ಡಾ. ಬಾಲಗುರುಮೂರ್ತಿ ಆಕಸ್ಮಿಕ ಅನುಪಸ್ಥಿತರಾದರು. ಆದರೂ ಪ್ರಬಂಧ ಸಿದ್ಧಪಡಿಸಿ ಕಳುಹಿದ್ದರು, ಗೋಷ್ಠಿಯ ಅಧ್ಯಕ್ಷತೆ ವಹಿಸಿ ಪ್ರಬಂಧಕಾರರ ವಿಚಾರ ವಿನಿಮಯದ ಜೊತೆ ತಮ್ಮ ಮಹತ್ವ ಪೂರ್ಣ ಅನಿಸಿಕೆಗಳನ್ನು ವ್ಯಕ್ತಪಡಿಸಿದ ಕೊಪ್ಪಳದ ಹಿರಿಯ ಸಾಹಿತಿ ಶ್ರೀ ಎಚ್. ಎಸ್. ಪಾಟೀಲರಿಗೆ, ಅತಿಥಿಗಳಾಗಿ ಆಗಮಿಸಿದ ಡಾ. ಕೆ. ಬಿ. ಬ್ಯಾಳಿ, ಶ್ರೀ ಶೇಖರಗೌಡ ಮಾಲೀ ಪಾಟೀಲ ಹಾಗೂ ಉಳಿದೆಲ್ಲ ಗಣ್ಯರನ್ನು ನಾನಿಲ್ಲಿ ಸ್ಮರಿಸಿಕೊಳ್ಳುತ್ತೇನೆ.

ಸದಾ ನನ್ನ ಜಾನಪದ ಕಾರ್ಯಚಟುವಟಿಕೆಗಳನ್ನು, ಸಾಹಿತ್ಯ ಕೃತಿಗಳನ್ನು ಗಮನಿಸುತ್ತ ಸಂತೋಷ ವ್ಯಕ್ತಪಡಿಸುತ್ತ ಬಂದ ಸಹೋದರಿ ಶ್ರೀಮತಿ ಸರಿತಾ ಕುಸುಮಾಕರ್ ದೇಸಾಯಿ ಅವರನ್ನು ನಾನಿಲ್ಲಿ ಸ್ಮರಿಸಲೇಬೇಕು.

ಕೊನೆಯದಾಗಿ ನಮ್ಮ ಅಕಾಡೆಮಿಯ ಅಧ್ಯಕ್ಷರಾದ ಮಾನ್ಯ ಶ್ರೀ ಕೆರೆಮನೆ ಶಂಭು ಹೆಗಡೆ, ಅಂದಿನ ರಜಿಸ್ಟ್ರಾರ ಮುನಿರಾಜು, ಇಂದಿನ ರಜಿಸ್ಟ್ರಾರ ಶ್ರೀ ನಾರಾಯಣ ಸ್ವಾಮಿ ಹಾಗೂ ಸದಸ್ಯರನ್ನೆಲ್ಲ ಮೌನವಾಗಿ ವಂದಿಸುತ್ತೇನೆ. ಮಾನ್ಯ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆ ಅವರು ನನ್ನ ಮೇಲೆ ಹೆಚ್ಚಿನ ಪ್ರೀತಿ ಜವಾಬ್ದಾರಿ ನೀಡಿದ್ದಕ್ಕಾಗಿ ಕೃತಜ್ಞತೆಗಳು. ಅಕಾಡೆಮಿಯ ಸಿಬ್ಬಂದಿಗಳಾದ ಶ್ರೀ ಪ್ರಕಾಶ, ಶ್ರೀ ಶಿವಲಿಂಗಯ್ಯ, ಶ್ರೀಮತಿ ಎಂ. ನಾಗರತ್ನಮ್ಮಾ ಇವರೆಲ್ಲರೂ ತಮ್ಮ ತಮ್ಮ ಜವಾಬ್ದಾರಿಗಳ ಜೊತೆ, ಪ್ರೀತಿ, ವಿಶ್ವಾಸ

ತೋರಿಸುತ್ತ ನನ್ನ ಕೆಲಸ ಕಾರ್ಯಗಳಲ್ಲಿ, ಸಹಕರಿಸುತ್ತ ಬಂದವರು, ಅವರನ್ನು ಇಲ್ಲಿ ಸ್ಮರಿಸದಿರಲಾರೆ.

ಕೊನೆಯದಾಗಿ ಪ್ರಭು ಗ್ರಾಫಿಕ್ಸ ಮಾಲೀಕರಾದ ಶ್ರೀ ಶಾಂತವೀರ ಜಂಗಮನಿ ಅವರು ಈ ಕೃತಿ ಸುಂದರವಾಗಿ ಮುದ್ರಿಸಿ ಮುಖಪುಟದ ವಿನ್ಯಾಸ ರಚಿಸಿದ್ದಾರೆ. ಅವರಿಗೂ ನನ್ನ ಅನಂತ ಕೃತಜ್ಞತೆಗಳು.

**ಗವೀಶ ಹಿರೇಮಠ**

ಸದಸ್ಯರು,
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
'ಮಾತೋಶ್ರೀ', ಮಹಾತ್ಮ ಬಸವೇಶ್ವರ ನಗರ,
ಶ್ರೀ ರಾಘವೇಂದ್ರ ಸ್ವಾಮಿ ಮಠದ ಹಿಂದೆ, ಗುಲಬರ್ಗಾ.
ಫೋ : ೦೮೪೭೨ – ೨೪೮೯೦೪ ಮೊ : ೯೪೪೮೬೫೧೬೩೪

## ಪರಿವಿಡಿ

೧. ಅಕಾಡೆಮಿ ಅಧ್ಯಕ್ಷರ ನುಡಿ : ಶ್ರೀ ಕೆರೆಮನೆ ಶಂಭು ಹೆಗಡೆ iii

೨. ಸಂಪಾದಕರ ಮಾತು : ಶ್ರೀ ಗವೀಶ ಹಿರೇಮಠ vii

ಉದ್ಘಾಟನಾ ಸಮಾರಂಭ

೧. ಉದ್ಘಾಟನಾ ಭಾಷಣ : ಶ್ರೀ ಕೆರೆಮನೆ ಶಂಭು ಹೆಗಡೆ ೧
ಅಧ್ಯಕ್ಷರು, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೨. ಮುಖ್ಯ ಅತಿಥಿಗಳ ಭಾಷಣ : ಡಾ. ಕೆ. ಬಿ. ಬ್ಯಾಳಿ ೪

೩. ಅಧ್ಯಕ್ಷೀಯ ಭಾಷಣ : ಡಾ. ಬಸವರಾಜ ಮಲಶೆಟ್ಟಿ ೬
ಕನ್ನಡ ಪ್ರಾಧ್ಯಾಪಕರು, ವಿಜಯನಗರ ಮಹಾವಿದ್ಯಾಲಯ, ಹೊಸಪೇಟೆ

ಗೋಷ್ಠಿ – ೧

೧. ಸುಡುಗಾಡ ಸಿದ್ಧರ ಜೀವನ ಧರ್ಮ : ಡಾ. ಬಸವರಾಜ ನೆಲ್ಲಿಸರ ೧೧

೨. ಸುಡುಗಾಡ ಸಿದ್ಧರ ವೃತ್ತಿ ಮತ್ತು ಕುಲಕಸಬುಗಳು : ಡಾ. ವಿ. ಎಲ್. ಪಾಟೀಲ ೧೭

ಗೋಷ್ಠಿ – ೨

೧. ಸುಡುಗಾಡ ಸಿದ್ಧರ ಮಹಿಳಾ ಸಂವೇದನೆಗಳು : ಡಾ. ಟಿ. ಎಂ. ಭಾಸ್ಕರ್ ೨೭

೨. ಸುಡುಗಾಡು ಸಿದ್ಧರ ಜನಪದ ಪ್ರದರ್ಶನ ಕಲೆಗಳು : ಡಾ. ಹರಿಶ್ಚಂದ್ರ ದಿಕ್ಸಂಗೀಕರ ೪೫

೩. ಸುಡುಗಾಡ ಸಿದ್ಧರ ನ್ಯಾಯಪಂಚಾಯತಿ ವ್ಯವಸ್ಥೆ : ಶ್ರೀ ಎಮ್. ಎಸ್. ಗಂಟಿ ೫೫

೪. ಅಧ್ಯಕ್ಷರ ಭಾಷಣ : ಶ್ರೀ ಎಚ್. ಎಸ್. ಪಾಟೀಲ ೬೭

# ಉದ್ಘಾಟನಾ ಭಾಷಣ

ಕೆರೆಮನೆ ಶಂಭು ಹೆಗಡೆ

ಸುಡುಗಾಡು ಸಿದ್ಧರ ವಿಷಯದಲ್ಲಿಯೇ ಚಿಂತನೆಯೊಂದು ನಡೆಯುತ್ತಿರುವುದು ತುಂಬಾ ಆರೋಗ್ಯಕರವಾದ ಸಂಗತಿ. ಈ ಆಧುನಿಕವಾದ ಜೀವನ ಪ್ರಕಾರಗಳ ನಡುವೆ ಇಂಥ ಒಂದು ಜನಾಂಗ ಈಗಲೂ ಅಸ್ತಿತ್ವದಲ್ಲಿದೆ ಎಂಬುದನ್ನು ಊಹಿಸುವುದೂ ಕಷ್ಟಸಾಧ್ಯ. ಇಂದಿಗೂ ಅವರು ತಮ್ಮ ಪ್ರತ್ಯೇಕತೆಯನ್ನು ಕಾಪಾಡಿಕೊಂಡು ಬಂದಿದ್ದಾರೆಂಬುದು ವಿಸ್ಮಯದ ಸಂಗತಿ. ಅವರನ್ನೂ ಅವರ ಜೀವನ ಶೈಲಿಯನ್ನೂ ಹತ್ತಿರದಿಂದ ಮೊಟ್ಟಮೊದಲು ನೋಡುವ ಸಂದರ್ಭ ಬಂದುದು ನನ್ನ ಮಟ್ಟಿಗೆ ವಿಶೇಷವೆ.

ಸುಡುಗಾಡು ಸಿದ್ಧರೆಂದು ಕರೆಸಿಕೊಳ್ಳುವ ಈ ಜನಾಂಗ ಪ್ರಧಾನವಾಗಿ ಒಂದು ಅಲೆಮಾರಿ ಜನಾಂಗ. ಉತ್ತರ ಕರ್ನಾಟಕದಲ್ಲಿ ಕಂಡುಬರುವಂತಹುದು. ಮೂಲತಃ ಆಂಧ್ರದ ಶ್ರೀಶೈಲವನ್ನು ಮೂಲ ಮಾಡಿಕೊಂಡು ಆಹಾರವನ್ನು ಹುಡುಕಿಕೊಂಡು ಕರ್ನಾಟಕಕ್ಕೆ ಬಂದವರಾಗಿರಬೇಕೆಂಬ ಊಹೆಯಿದೆ. ಹಾಗೆ ನೋಡಿದರೆ ಜಗತ್ತಿನ ಪ್ರತಿಯೊಂದು ಜನಾಂಗವೂ ಪ್ರಾರಂಭಿಕ ಹಂತದಲ್ಲಿ ಅಲೆಮಾರಿಯದೇ. ಕ್ರಮೇಣ ಅರೆ ಅಲೆಮಾರಿಗಳಾಗಿ ಆಯತಹೊತ್ತಿನಲ್ಲಿ ಎಚ್ಚತ್ತುಕೊಂಡು ಮುಖ್ಯವಾಹಿನಿಯೊಂದಿಗೆ ಒಂದಾಗಿದ್ದಾರೆ. ಈ ಜನಾಂಗ ಇಂದಿಗೂ ಪ್ರತ್ಯೇಕವಾದ ಅಸ್ತಿತ್ವ ಇಟ್ಟುಕೊಂಡು ಬಂದುದು ವಿಶೇಷವೇ. ಇವತ್ತಿಗೂ ಅವರ ಬಣ್ಣ ಬಣ್ಣದ ಅಂಗಿ. ಧೋತಿ, ಜೋಳಿಗೆ, ತಲೆಗೊಂದು ರುಮಾಲು ಮಾಡುವ ಜಾದು, ಗುಂಡು ನುಂಗುವುದು ಎಲ್ಲ ಇಂದಿಗೂ ಅವರವೇ. ವೇಷ-ಭೂಷಣ, ಕಸುಬು, ಜೀವನಶೈಲಿ, ಆಹಾರ ಪದ್ಧತಿ, ಕಲೆ ನ್ಯಾಯ ಪಂಚಾಯ್ತಿ, ಬದುಕಿನ ಕಟ್ಟು ಕಟ್ಟಳೆ, ನೈತಿಕತೆ ಎಲ್ಲದರಲ್ಲಿ ಅವರತನ ಇಂದಿಗೂ ಎದ್ದು ಕಾಣುತ್ತದೆ.

ಯಾಕಾಗಿ ಇವು ವಿಶೇಷ ? ಇವತ್ತು ನಾವು ಜಾಗತೀಕರಣದ ಅಪಾಯದಲ್ಲಿದ್ದೇವೆ. ಸ್ಥಳೀಯವಾದ ಜೀವನ ವಿಧಾನಗಳೆಲ್ಲವೂ ಜಗತ್ತಿನ ಜೀವನ ವಿಧಾನದೊಂದಿಗೆ ವಿಲೀನವಾಗುತ್ತಿದೆ. ಸಾಮಾಜಿಕವಾಗಿ ಸಂಕ್ರಮಣ ಸ್ಥಿತಿಯಲ್ಲಿದ್ದೇವೆ. ಹಳೆಯದನ್ನೆಲ್ಲ ಬಿಟ್ಟು

ಹೊಸದನ್ನು ಆಲಂಗಿಸಿಕೊಳ್ಳುವ ಉತ್ಸಾಹದಲ್ಲಿದ್ದೇವೆ. ಅನೇಕ ಮಾಧ್ಯಮಗಳು ಪರಸ್ಪರ ಪೈಪೋಟಿಯಿಂದ ಪ್ರಭಾವ, ಪರಿಣಾಮಗಳನ್ನು ಉಂಟುಮಾಡುತ್ತಿವೆ. ಇವೆಲ್ಲವುಗಳ ನಡುವೆಯೂ ಸುಡುಗಾಡು ಸಿದ್ಧರು ತಮ್ಮತನ ಉಳಿಸಿಕೊಂಡು ಬಂದಿದ್ದಾರೆಂಬುದು ನಮಗೆ ಆದರ್ಶ. ಅವರ ಜಿಗುಟುತನ ನಮಗೆ ಅನುಕರಣೀಯ.

ಇಂದು ಬಹುಮಟ್ಟಿಗೆ ನಾಗರಿಕ ಜನಸಮೂಹ ಎನ್ನಿಸಿಕೊಳ್ಳುವವರು ತಮ್ಮತನಕ್ಕೆ ಕಚ್ಚಿಕೊಂಡಿರುವ ನಿಷ್ಠೆ ತೀರ ವಿರಳ. ಬದುಕಿನ ಯಾವ ಹಂತದಲ್ಲಿಯೂ ನಮಗೆ ನಮ್ಮತನದ ಬಗ್ಗೆ ಅರಿವೂ ಇರುವುದಿಲ್ಲ. ಅಭಿಮಾನವೂ ಇರುವುದಿಲ್ಲ. ನಮ್ಮ ಉಡುಗೆ-ತೊಡುಗೆ, ಆಹಾರ-ವಿಹಾರ, ಅಭಿರುಚಿ ಮುಂತಾದ ವಿಷಯಗಳಲ್ಲಿ ನಾವು ಅಭಿಮಾನ ಶೂನ್ಯರೇ. ಒಂದು ಊರಿನಿಂದ ಇನ್ನೊಂದು ಊರಿಗೆ ಹೋದರೆ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದರೆ ಮೂಲವನ್ನು ಮರೆತು ಅಲ್ಲಿಯದನ್ನೇ ಅನುಕರಿಸಿ ಬಿಡುತ್ತೇವೆ. ಅದು ನಮ್ಮ ಗುಣ. ದೊಡ್ಡಸ್ತಿಕೆ ಎಂದು ಭಾವಿಸುತ್ತೇವೆ. ಇನ್ನೊಬ್ಬರೊಂದಿಗೆ ಒಂದಾಗುವುದು ಬೇಡವೆಂದಲ್ಲ. ಆದರೆ ವಿವೇಚನಾ ರಹಿತ ಪರಾನುಕರಣ ತಮ್ಮತನದ ನಾಶಕ್ಕೆ ಕಾರಣವಾಗುತ್ತದೆಯೆಂಬ ಎಚ್ಚರ ಅಗತ್ಯ. ಇದು ಒಟ್ಟಾರೆಯಾಗಿ ನಮ್ಮ ಸಂಸ್ಕೃತಿಯ ಅಳಿವಿಗೇ ಕಾರಣವಾಗುತ್ತದೆಯೆಂಬ ಎಚ್ಚರ ಅಗತ್ಯ. ಇದು ಒಟ್ಟಾರೆಯಾಗಿ ನಮ್ಮ ಸಂಸ್ಕೃತಿಯ ಅಳಿವಿಗೇ ಕಾರಣವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಸುಡುಗಾಡು ಸಿದ್ಧರ ವೀರ ಮಡಿವಂತಿಕೆ ಶ್ಲಾಘನೀಯ.

ವಿದ್ವಾಂಸರೂ, ನಾಗರಿಕರೂ ಎನ್ನಿಸಿಕೊಂಡ ನಾವು ಇಂದು ಅವರ ಜೀವನ ಶೈಲಿಗಳಿಗೆ ವಿಧಾನಗಳಿಗೆ ಅರ್ಥ ಹಚ್ಚುತ್ತೇವೆ, ವಿವರಿಸುತ್ತೇವೆ, ವ್ಯಾಖ್ಯಾನಿಸುತ್ತೇವೆ. ದಾಖಲೀಕರಣವನ್ನು ಮಾಡುತ್ತೇವೆ. ಅವರು ಈ ಯಾವುದನ್ನೂ ಮಾಡುವುದಿಲ್ಲ. ಅವರು ಪ್ರಜ್ಞಾಪೂರ್ವಕವಾಗಿ ತಮ್ಮತನವನ್ನು ಉಳಿಸಿಕೊಳ್ಳಲು ಹೆಣಗಾಡುವುದಿಲ್ಲ. ಅವರಿಗೆ ಅದು ರಕ್ತಗತವಾಗಿ ಬಂದುದು. ನೈಸರ್ಗಿಕವಾಗಿ ಬಂದುದು. ಜನ್ಮಜಾತವಾಗಿ ಬಂದುದು.

ಒಂದು ವಿಷಯವನ್ನು ನಾವು ನೆನಪಿನಲ್ಲಿಟ್ಟುಕೊಳ್ಳುವುದು ಒಳ್ಳೆಯದು. ಸುಡುಗಾಡು ಸಿದ್ಧರ ಜೀವನ ಕ್ರಮದ ಬಗ್ಗೆ ಅದರ ವಿಶೇಷತೆಯ ಬಗ್ಗೆ ರಮ್ಯಾದ್ಭುತವಾದ ಪ್ರಶಂಸನಾ ಮಾತುಗಳನ್ನು ಉತ್ಸಾಹದಿಂದ ಆಡಬಹುದು. ಆದರೆ ಈ ಜನಾಂಗ ಇದೇ ಸ್ಥಿತಿಯಲ್ಲಿ ಮುಂದುವರೆಯಬೇಕೆ ಎಂಬುದು ನಾಗರಿಕ ಸಮಾಜದ ಎದುರಿಗೆ ಇರುವ ಬಹುದೊಡ್ಡ ಸವಾಲು. ಸುಡುಗಾಡು ಸಿದ್ಧರ ಜೀವನ ಶೈಲಿ ಸಮಕಾಲೀನವಾಗಿ ಆಧುನಿಕವಾದ ಅನೇಕ ಅಗತ್ಯ ಮತ್ತು ಅನಿವಾರ್ಯಗಳಿಗೆ ತೊಡಕಾಗುತ್ತದೆಯೆಂಬುದನ್ನು ಮರೆಯಬಾರದು. ಸುಧಾರಿತ ಜನಾಂಗದವರಾದ ನಾವು ಅವರ ಜೀವನಶೈಲಿಯನ್ನು ಹೊಗಳಿ ನೀವು ಹಾಗೇ ಇರಿ ಎನ್ನುವುದು ಅಮಾನವೀಯ ಆಗಬಹುದು. ಅವರು ಇದ್ದ ಸ್ಥಿತಿಯಲ್ಲಿಯೇ ಮುಂದುವರಿದರೆ ಅಧ್ಯಯನಕ್ಕೆ. ಉಪನ್ಯಾಸಕ್ಕೆ ಸಂಪನ್ಮೂಲವಾಗಬಹುದು.

ಆದ್ದರಿಂದ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಉದ್ಭವವಾಗುತ್ತದೆ.

ಅಲೆಮಾರಿಗಳಾಗಿದ್ದ ಹಲವು ಜನಾಂಗಗಳು ಸಕಾಲದಲ್ಲಿ ಎಚ್ಚೆತ್ತುಕೊಂಡ ಉದಾಹರಣೆ ನಮ್ಮ ಎದುರಿನಲ್ಲಿಯೇ ಇವೆ. ನಿಶ್ಚಿತ ವಸತಿಗಳನ್ನು ಕಲ್ಪಿಸಿಕೊಂಡು ಭವಿಷ್ಯದ ಬದುಕನ್ನು ರೂಪಿಸಿಕೊಂಡ ನಿದರ್ಶನಗಳಿವೆ.

ಸುಡುಗಾಡು ಸಿದ್ಧರ ಜನಾಂಗದ ಬಂಧುಗಳೂ ಸಕಾಲದಲ್ಲಿ ಎಚ್ಚೆತ್ತುಕೊಳ್ಳಬೇಕಾಗಿದೆ. ಸಮಾಜದ ಮುಖ್ಯವಾಹಿನಿಯೊಂದಿಗೆ ಸೇರಿಕೊಳ್ಳಬೇಕಾಗಿದೆ. ಅವರದೇ ಆದ ಜೀವನ ಶೈಲಿಯನ್ನೂ ಆಧುನಿಕ ಜೀವನ ವಿಧಾನವನ್ನೂ ಸಮತೋಲನ ಮಾಡುವ ಉಪಾಯಗಳನ್ನೂ ಚಿಂತಸಬೇಕಾಗಿದೆ. ಮುಂದಿನ ಜನಾಂಗದ ಶಿಕ್ಷಣ, ಆರೋಗ್ಯ, ಆರ್ಥಿಕ ಸ್ಥಿತಿ ಗತಿ, ಸಾಮಾಜಿಕ ಸ್ಥಾನಮಾನ ಮುಂತಾದವುಗಳಿಂದ ವಂಚಿತರಾಗದಂತೆ ಮುಂಜಾಗರೂಕತೆ ವಹಿಸಬೇಕಾಗಿದೆ. ಈ ವಿಷಯದಲ್ಲಿ ಶಿಷ್ಟ ಜನಾಂಗ, ಸರಕಾರ, ಹಿತೈಷಿಗಳು ಎಲ್ಲರೂ ಮುಂದಾಗಬೇಕಾಗಿದೆ. ಈ ನಿಟ್ಟಿನಲ್ಲಿ ಇಂದಿನ ಈ ಚಿಂತನ ಸಮಾವೇಶ ನಾಂದಿಯಾಗಲಿ ಎಂದು ಹಾರೈಸುತ್ತೇನೆ.

◆

# ಮುಖ್ಯ ಅತಿಥಿಗಳ ಭಾಷಣ

ಡಾ. ಕೆ. ಬಿ. ಬ್ಯಾಳಿ

ಜಾನಪದ, ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಮಾನ್ಯ ಶಂಭು. ಹೆಗಡೆಯವರೇ, ಸದಸ್ಯ, ಸಂಚಾಲಕರಾದ ಶ್ರೀ ಗವೀಶ ಹಿರೇಮಠರೇ, ಡಾ. ಬಸವರಾಜ ನೆಲ್ಲಿಸರ, ಡಾ. ಭಾಸ್ಕರ ಅವರೇ, ವೇದಿಕೆಯಲ್ಲಿಯರುವ ವಿದ್ವಾಂಸರೇ, ಸುಡಗಾಡು ಸಿದ್ಧರ ಸಂಘದ ಜಿಲ್ಲಾಧ್ಯಕ್ಷರೇ, ಪತ್ರಿಕಾ ಮಿತ್ರರೇ, ಜಿಲ್ಲಾ ಸುಡಗಾಡು ಸಿದ್ಧರೇ, ಪ್ರೇಕ್ಷಕ ಮಿತ್ರರೇ, ನನಗೆ ಇಂದಿನ ಸಮಾರಂಭ ಬಹಳ ಸಂತಸ ತಂದಿದೆ, ಏಕೆಂದರೆ ಸುಡಗಾಡು ಸಿದ್ಧರು ಪ್ರದರ್ಶಿಸಿದ ಆಟಗಳನ್ನು ನೋಡಿದಾಗ, ಬಾಲ್ಯದ ದಿನಗಳು ಮರುಕಳಿಸಿದವು. ಇಂಥ ಅವಕಾಶ ಮಾಡಿದ ಜಾನಪದ ಅಕಾಡೆಮಿಗೆ ನಾನು ಋಣಿ. ಇಂಥ ಸಮಾವೇಶಗಳು ಈ ಅಲೆಮಾರಿ, ಜನಾಂಗಕ್ಕೆ ಪ್ರೋತ್ಸಾಹ ಕೊಡುವುದರ ಜೊತೆಗೆ ಅಕಾಡೆಮಿಗಳು ಸರಕಾರ ಇವರ ಜೀವನ ಕ್ರಮ ತಿಳಿಯಲು, ಇವರ ಸುಧಾರಣೆಯತ್ತ ಗಮನ ಹರಿಸಲು ಸಹಾಯಕವಾಗುತ್ತವೆ. ಹಿಂದುಳಿದ ಈ ಭಾಗದಲ್ಲಿ ಅಕಾಡೆಮಿಯಿಂದ ಜಾನಪದ, ಬಯಲಾಟ ಮುಂತಾದ ಕಾರ್ಯಕ್ರಮಗಳು ನಡೆದಿದ್ದು, ಜನರ ಮೆಚ್ಚಿಗೆ ಪಡೆದಿದ್ದು ಸ್ತುತ್ಯಾರ್ಹ.

ಸುಡಗಾಡ ಸಿದ್ಧರು ಪಾರಂಪರಿಕ ತಮ್ಮ ವೇಷಧಾರಿ ಜೀವನ ನಡೆಸಿಕೊಂಡು ಬಂದವರು. ಇತ್ತೀಚೆಗೆ ಹೊಸ ಬದುಕಿನಲ್ಲಿ ಅವರ ಜೀವನ ಪರಿವರ್ತನೆಗೊಂಡಿದೆ. ಅನೇಕರು ಶಾಲೆ ಕಲಿತು, ತಮ್ಮ ಜೀವನದ ದಿಕ್ಕನ್ನು ಬದಲಾಯಿಸಿಕೊಂಡದ್ದು ಕಂಡುಬರುತ್ತದೆ. ಆದರೂ ಈಗಲೂ ಸುಡಗಾಡು ಸಿದ್ಧರು ತಮ್ಮ ಕರಾಮತ್ತನ್ನು, ಕುಶಲತೆಯನ್ನು ತೋರಿಸುತ್ತ ಹಳ್ಳಿಗಳಲ್ಲಿ ಆಗಾಗ ಕಾಣಿಸಿಕೊಳ್ಳುತ್ತಾರೆ. ಬರು ಬರುತ್ತಾ ಈ ಅವರ ಈ ಕುಶಲತೆ ಪ್ರದರ್ಶನದ ವಸ್ತುವಾಗುವುದರಲ್ಲಿ ಸಂದೇಹವಿಲ್ಲ.

ನಾವು ಸಣ್ಣವರಿದ್ದಾಗ ಸುಡಗಾಡು ಸಿದ್ಧ ಬಂದನೆಂದರೆ ಖುಷಿಯೇ ಖುಷಿ. ಬಾಯೊಳಗಿಂದ ಗುಂಡು ನುಂಗಿ ತೆಗೆಯುವುದು ಮಲ್ಲಾಡ ಚೌಡಿಯಿಂದ ಅನೇಕ ಕೈಚಳಕ ತೋರಿಸುವುದು ನಮಗೆ ಖುಷಿ ಕೊಡುತ್ತಿತ್ತು. ಇಂದು ಸಹ ಇಲ್ಲಿ ಅಂತಹ ಅನೇಕ ಕೈಚಳಕ ಆಟಗಳನ್ನು ತೋರಿಸಿ ಅವರು ನಮ್ಮೆಲ್ಲರನ್ನು ರಂಜಿಸಿದ್ದಾರೆ. ಅವರು ಇಂದು ಭರವಸೆಯ

ಆಶೆ ಹೊತ್ತು ಬಂದವರಾಗಿದ್ದಾರೆ. ಅವರಿಗೆ ಅನುಕೂಲತೆ, ಅವಕಾಶಗಳು ಬೇಕು.

ಅವರ ಆಕರ್ಷಕ ಉಡುಗೆ, ತಲೆಗೆ ಪೇಟಾ, ನವಿಲು ಪುಕ್ಕ, ಹಣೆಗೆ ವಿಭೂತಿ ಇದು ಅವರ ಆಕರ್ಷಕ ಭಂಗಿ ಎಲ್ಲರ ಮನವನ್ನು ಆಕರ್ಷಿಸುತ್ತದೆ. ಇವರು ಶಿವನ ಭಕ್ತರಿದ್ದು ಶೈವ ಸಂಪ್ರದಾಯಸ್ಥರಿರ ಬೇಕು ಅನಿಸುತ್ತದೆ. ಪರ್ವತ ಮಲ್ಲಯ್ಯನನ್ನುವವರೂ ಸಹ ಇದೇ ರೀತಿ-ಉಡುಗೆ ಹಾಕಿಕೊಂಡು, ಮಲ್ಲಯ್ಯನನ್ನು ಹೊತ್ತು ತಿರುಗುತ್ತಾರೆ. ಇಂಥ ಅಲೆಮಾರಿ ಜನಾಂಗಗಳನ್ನು ನಾವು ಉಳಿಸಿಕೊಳ್ಳುವುದರ ಜೊತೆಗೆ ಅವರಿಗೆ ಶಿಕ್ಷಣ, ಸಾಮಾಜಿಕ ಸ್ಥಾನಮಾನ, ಆರ್ಥಿಕ ನೆರವು, ಅವರಿಗೆ ದೊರೆಯುವಂತೆ ನೋಡಿಕೊಂಡರೆ, ಅವರಲ್ಲಿರುವ ಪ್ರತಿಭೆಗಳು ಹೊರಬರಬಹುದು. ಇಂಥ ಜನಪದರನ್ನು ಗುರ್ತಿಸಿ ಅವರಿಗೆ ಅವರ ಇತಿಹಾಸ, ಅವರ ಇರುವಿಕೆ, ಸುಧಾರಣೆ, ಭವಿಷ್ಯ ನಿರ್ಮಾಣದ ಬಗ್ಗೆ ತಿಳಿಸುವುದರೊಂದಿಗೆ ಅಕಾಡೆಮಿಗಳು ಅವರಿಗೆ ಸಹಾಯ, ಸಹಕಾರ ನೀಡುವಂತಾದರೆ. ಇಂಥ ಸಮಾವೇಶಗಳು ಅವರ ಜೀವನದ ದಿಕ್ಕನ್ನು ಬದಲಿಸುವಂಥವುಗಳಾದಾವು ಅಂದಾಗ ಇವು ಸಾರ್ಥಕ ಸಮಾವೇಶಗಳಾಗುವವು. ಇದು ಅಧ್ಯಕ್ಷರಾದ ಶಂಭು ಹೆಗಡೆಯವರಿಂದ ಸಾಧ್ಯ. ಸರಕಾರದ ಗಮನಕ್ಕೆ ತಂದು ಇವರ ಜೀವನದ ದಿಕ್ಕನ್ನು ಬದಲಿಸುತ್ತಾರೆಂದು ನಂಬಿರುತ್ತೇನೆ.

ಈ ದಿನದ ಕಾರ್ಯಕ್ರಮ ಯಶಸ್ವಿಯಾಗಿ ಜರುಗಲೆಂದು ಹಾರೈಸುತ್ತ ನನಗಿಂದು ಅತಿಥಿಯಾಗಿ ಬರಮಾಡಿಕೊಂಡು ಈ ಅವಕಾಶ ನೀಡಿದ್ದಕ್ಕೆ ಕರ್ನಾಟಕ ಜಾನಪದ ಅಕಾಡೆಮಿ ಹಾಗೂ ಸುಡುಗಾಡು ಸಿದ್ಧರ ಸಂಘದ ಅಧ್ಯಕ್ಷರಿಗೆ ಧನ್ಯವಾದಗಳು.

ಎಲ್ಲರಿಗೂ ಶರಣು

ಜೈ ಹಿಂದ್, ಜೈ ಕರ್ನಾಟಕ

◆

# ಉದ್ಘಾಟನಾ ಸಮಾರಂಭದ ಅಧ್ಯಕ್ಷೀಯ ಭಾಷಣ

ಡಾ. ಬಸವರಾಜ ಮಲಶೆಟ್ಟಿ

ಜಾತೀಕರಣವು ನಮ್ಮ ಬದುಕಿನ ಎಲ್ಲ ಕ್ಷೇತ್ರಗಳನ್ನು ಅಸ್ತವ್ಯಸ್ತಗೊಳಿಸುತ್ತಿರುವ ಈ ಸಂದರ್ಭದಲ್ಲಿ ಸುಡಗಾಡ ಸಿದ್ಧರನ್ನು ಕುರಿತು ಆಲೋಚನೆಗೆ ತೊಡಗಿರುವ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಕಾರ್ಯ ಸ್ತುತ್ಯವಾದುದು. ಶೀಘ್ರ ವೇಗದಲ್ಲಿ ಬದಲಾಗುತ್ತಿರುವ ನಮ್ಮ ಸಮೂಹ ಬದುಕಿಗೆ ಸಾಂಪ್ರದಾಯಿಕ ಕಲೆಗಳು ಅಪ್ರಸ್ತುತ ವಾಗುತ್ತಿರುವವೇ? ಪ್ರಜ್ಞಾವಂತರೆಲ್ಲ ಪ್ರಶ್ನಿಸಿಕೊಳ್ಳಬೇಕಾಗಿರುವ ಪ್ರಶ್ನೆ ಇದು. ಸಾಂಪ್ರದಾಯಿಕ ಕಲೆಗಳು ಅಂದರೆ ನಮ್ಮ ಜನಪದ ಕಲೆಗಳು ಜನಪದರ ಬದುಕಿನ ಭಾಗವಾಗಿರುವುದು ಮತ್ತು ದುಡಿಮೆ ಆಚರಣೆಗಳ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವುದು ಸಾಮಾನ್ಯ. ಹಂತಿ ಹೊಡೆಯುವಾಗ ಹಂತಿ ಪದ ಹಾಡುವುದು, ಬೀಸುವಾಗ ಬೀಸುಕಲ್ಲು ಪದ ಹಾಡುವುದು, ಮಂಗಲ ಕಾರ್ಯಗಳಲ್ಲಿ ಸೋಬಾನ ಪದ ಹಾಡುವುದು. ವೀರಭದ್ರದೇವರ ಗುಗ್ಗಳ ಕಾರ್ಯದಲ್ಲಿ ಪುರವಂತರು ಕುಣಿಯುವುದು ಇತ್ಯಾದಿಗಳನ್ನು ಉದಾಹರಿಸಬಹುದು. ಬದುಕಿನ ವಿಧಾನ ಬದಲಾವಣೆಯಾದಾಗ ಇವೆಲ್ಲ ತಮ್ಮ ಅಸ್ತಿತ್ವ ಕಳೆದುಕೊಳ್ಳುವುದು ಸಹಜ. ಇಂದು ಹಂತಿಯೇ ಇಲ್ಲವೆಂದಾದ ಮೇಲೆ ಹಂತಿಪದ ಉಳಿಯಲು ಸಾಧ್ಯವೇ? ಬೀಸುಕಲ್ಲಿನೊಂದಿಗೆ ಬೀಸುಕಲ್ಲು ಪದಗಳೂ ಮೂಲೆಗುಂಪಾಗಿವೆ. ಅವಸರದಲ್ಲಿ ಜರುಗುತ್ತಿರುವ ಮದುವೆ ಮತ್ತಿತರ ಶುಭಕಾರ್ಯಗಳಲ್ಲಿ ಸೋಬಾನಪದ ಹಾಡಲು ಅವಕಾಶವೆಲ್ಲಿದೆ?

ಆದರೆ ಇನ್ನಿಷ್ಟು ಜನಪದಗಳ ಸ್ವರೂಪ ಭಿನ್ನವಾಗಿದೆ. ಅವು ಮನರಂಜನೆ ನೀಡುವಂಥವು. ಬಯಲಾಟ, ಕೋಲಾಟ, ಗೊಂಬೆಯಾಟ ಮುಂತಾದವುಗಳು ಎಲ್ಲ ಕಾಲಕ್ಕೂ ಬೇಕು. ಏಕೆಂದರೆ ಮನರಂಜನೆ ನಿರಾಕರಿಸುವ ಜನಸಮುದಾಯ ಇಲ್ಲವೇ ಇಲ್ಲ. ಇವೆಲ್ಲವನ್ನು ಆಧುನಿಕ ಅಭಿರುಚಿಗೆ ತಕ್ಕಂತೆ ಪರಿಷ್ಕರಿಸಕೊಂಡು ಚಲಾವಣೆಗೆ ತರಬೇಕಾಗಿದೆ. ಇವುಗಳೊಂದಿಗೆ ಸುಡಗಾಡ ಸಿದ್ಧರ ಜಾದೂ ಕೂಡಸೇರುತ್ತದೆ.

ಸುಡಗಾಡುಸಿದ್ಧರ ಚರಿತ್ರೆ ಜೀವನಕ್ರಮ ಆಚರಣೆ ಮುಂತಾದವುಗಳನ್ನು ಕುರಿತು ಚರ್ಚಿಸುವುದು ನನಗೆ ಮುಖ್ಯ ಅನಿಸುವುದಿಲ್ಲ. ಅವರ ಕಲೆ ಅತ್ಯಂತ ಚೇತೋಹಾರಿಯಾದುದು. ಬಣ್ಣಬಣ್ಣದ ಆಕರ್ಷಕ ವೇಷತೊಟ್ಟು ಅವರು ಓಣಿಗಳಲ್ಲಿ

ಬಂದರೆ ಮಕ್ಕಳು ದೊಡ್ಡವರು ಎಲ್ಲರೂ ಅವರ ಸುತ್ತ ನೆರೆಯುತ್ತಾರೆ. ಅವರ ಜಾದೂ ಪ್ರದರ್ಶನ ನೋಡಲು ತುದಿಗಾಲಮೇಲೆ ನಿಂತಿರುತ್ತಾರೆ. ಆದರೆ ಇಂದು ಅವರ ಪ್ರದರ್ಶನಗಳು ತೀರಾ ಅಪರೂಪವಾಗುತ್ತಿವೆ. ಸಾಮಾಜಿಕ ಎಚ್ಚರ ಮತ್ತು ಆಧುನಿಕ ಶಿಕ್ಷಣ ಕ್ರಮದಿಂದಾಗಿ ಇತ್ತೀಚಿನ ತಲೆಮಾರಿನ ಸುಡಗಾಡಸಿದ್ಧ ಸಮುದಾಯದ ತರುಣರು ತಮ್ಮ ಸಾಂಪ್ರದಾಯಿಕ ಕಲೆಯನ್ನು ನಿರ್ಲಕ್ಷಿಸುತ್ತಿದ್ದಾರೆ. ಓಣಿ ಓಣಿ ತಿರುಗಿ ಜನರನ್ನು ಕಾಡಿಬೇಡಿ ಇಸಿದುಕೊಂಡು ಜೀವನೋಪಾಯ ನಡೆಸುವುದಕ್ಕೆ ಅವರು ಮನಸ್ಸು ಮಾಡುತ್ತಿಲ್ಲ. ಅವರ ಈ ನಿಲುವು ಸಹಜವಾದುದೇ. ಹಾಗಾದರೆ ಅವರ ಸಾಂಪ್ರದಾಯಿಕ ಕಲೆಯ ಭವಿಷ್ಯವೇನು? ನಿಮ್ಮ ಹಿರಿಯರಂತೆ ನೀವೂ ಈ ಕಲೆಯನ್ನು ಮುಂದುವರೆಸುತ್ತ ನಮ್ಮ ಜಾನಪದ ಕಲಾಪರಂಪರೆಯನ್ನು ಉಳಿಸಿಕೊಳ್ಳಿರಿ ಎಂದು ತರುಣರಿಗೆ ಉಪದೇಶಿಸುವುದು ಹುಂಬತನದ ಮಾತಾಗುತ್ತದೆ. ಹಾಗಾದರೆ ಇದಕ್ಕೆ ಪರಿಹಾರವೇನು ?

ಸುಡಗಾಡಸಿದ್ಧರ ಜಾದೂ ಕಲೆಯನ್ನು ವ್ಯವಸ್ಥಿತವಾದ ಶೈಲಿಯಲ್ಲಿ ಪ್ರದರ್ಶಿಸುವ ಕ್ರಮ ಪ್ರಾರಂಭವಾಗಬೇಕು. ಅವರು ತಮ್ಮ ದೈನೇಸಿತನವನ್ನು ಬದಿಗಿಟ್ಟು ಕೀಳರಿಮೆಯಿಂದ ಹೊರಗೆ ಬಂದು ತಮ್ಮ ಕಲೆಯನ್ನು ಪ್ರದರ್ಶಿಸಬೇಕು. ಆಧುನಿಕ ಜಾದೂ ಪ್ರದರ್ಶನಗಳ ಮಾದರಿಯಲ್ಲಿ ಅವರ ಕಲೆ ಜನಮನ್ನಣೆ ಗಳಿಸಬೇಕಾಗಿದೆ. ಶಿಕ್ಷಣ ಇಲಾಖೆ ಇವರನ್ನು ಪ್ರೋತ್ಸಾಹಿಸಬೇಕಾದ ಅವಶ್ಯಕತೆಯಿದೆ. ಶಾಲೆಗಳಿಗೆ ಹೋಗಿ ತಾಸೊತ್ತು ಜಾದು ಪ್ರದರ್ಶನ ನೀಡಿದರೆ ಮಕ್ಕಳಿಗೆ ಅಪರೂಪದ ಮನರಂಜನೆ ಲಭ್ಯವಾಗುತ್ತದೆ. ಅದರೊಂದಿಗೆ ಸುಡಗಾಡ ಸಿದ್ಧರಿಗೆ ಗೌರವದ ಸಂಭಾವನೆಯೂ ದೊರೆಯುತ್ತದೆ. ಹೀಗೆ ತರುಣ ವಿದ್ಯಾವಂತ ಸುಡುಗಾಡಸಿದ್ಧರು ಸಮಾಜ, ಕಲಾ ಪರಂರಪರೆಯ ಬಗ್ಗೆ ಕಾಳಜಿ ಉಳ್ಳವರು, ಶಿಕ್ಷಣ ಇಲಾಖೆ ಎಲ್ಲರೂ ಸೇರಿ ಈ ಪುನರುಜ್ಜೀವನ ಕಾರ್ಯ ನೆರವೇರಿಸಬೇಕಾಗಿದೆ.

# ಗೋಷ್ಠಿ : ೧

◆

# ಸುಡುಗಾಡ ಸಿದ್ಧರ ಜೀವನ ಧರ್ಮ

ಡಾ. ಬಸವರಾಜ ನೆಲ್ಲಿಸರ

ದಕ್ಷಿಣ ಭಾರತವನ್ನು (South India) ಗಮನದಲ್ಲಿಟ್ಟುಕೊಂಡು ಹೇಳುವುದಾದರೆ, ಕರ್ನಾಟಕದಲ್ಲಿ ನಡೆಯುತ್ತಿರುವ ಜಾನಪದ ಅಧ್ಯಯನ ಸಾಕಷ್ಟು ವೈವಿಧ್ಯಮಯವಾಗಿ, ವೈಜ್ಞಾನಿಕ ವಿಧಿ–ವಿಧಾನಗಳ ತಳಹದಿಯ ಮೇಲೆ ನಡೆಯುತ್ತಿರುವುದು ಸಂತೋಷದ ಸಂಗತಿಯಾಗಿದೆ. ಆದರೆ ಫಿನ್ಲೆಂಡ್, ಇಂಗ್ಲೆಂಡ್, ಅಮೇರಿಕಾ ಮುಂತಾದ ದೇಶಗಳಲ್ಲಿನ ಜಾನಪದ ಅಧ್ಯಯನವನ್ನು ಗಮನಿಸಿದರೆ, ನಮ್ಮ ವಿಶ್ವವಿದ್ಯಾ ನಿಲಯಗಳು, ಸಂಶೋಧಕರು, ಅಕಾಡೆಮಿಗಳು ಮುಂತಾದವುಗಳು ಶರವೇಗದಲ್ಲಿ ಮುನ್ನುಗ್ಗಿ ಕೆಲಸ ಮಾಡಬೇಕಾದದ್ದು ಬಹಳಷ್ಟಿದೆ ಎಂಬುದನ್ನು ಸಾರುತ್ತಿವೆ. ಕರ್ನಾಟಕ ಜಾನಪದ ಅಧ್ಯಯನ ೧೯೬೬ ರಿಂದ ೧೯೮೦ರ ವರೆಗೆ ಬಹುಮಟ್ಟಿಗೆ ಸಂಗ್ರಹ ಕಾರ್ಯಕ್ಕೆ ಮಹತ್ವ ನೀಡಿತ್ತು. ಅನಂತರ ಎರಡನೆ ತಲೆಮಾರಿನ ವಿದ್ವಾಂಸರು ಪಿ.ಎಚ್.ಡಿ., ಎಂ.ಫಿಲ್ ಪದವಿಗಳಿಗೆ, ನಡೆಸಿದ ಅಧ್ಯಯನಗಳು ವೈಜ್ಞಾನಿಕ ವಿಚಾರಧಾರೆಗಳಿಗೆ ಒತ್ತುಕೊಟ್ಟು ಸೈದ್ಧಾಂತಿಕ ಹಿನ್ನೆಲೆಯಲ್ಲಿ ಕೆಲಸ ಮಾಡಿದರು. ಹಾಗಾಗಿ ಜಾನಪದದ ವಿಭಿನ್ನ ನೆಲೆಗಳು ಬೆಳಕಿಗೆ ಬಂದವು.

ಹಂಪಿ ಕನ್ನಡ ವಿಶ್ವವಿದ್ಯಾನಿಲಯವು 'ಬುಡಕಟ್ಟು' ಅಧ್ಯಯನಕ್ಕೆ ತುಂಬಾ ಮಹತ್ವ ನೀಡಿದ್ದರಿಂದಾಗಿ, ಕ್ಷೇತ್ರಕಾರ್ಯಕ್ಕೇ ಪ್ರಥಮ ಆದ್ಯತೆ ನೀಡಿ ಸಂಶೋಧಕರನ್ನು ಹುರಿದುಂಬಿಸಿದ್ದರಿಂದಾಗಿ, ಹೊಸ ಸಿದ್ಧಾಂತಗಳನ್ನು, ಹೊಸ ಬಗೆಯ ಕ್ಷೇತ್ರಕಾರ್ಯ ಮಾದರಿಗಳನ್ನು ಅಳವಡಿಸಿಕೊಂಡಿದ್ದರಿಂದಾಗಿ ಗುಣಮಟ್ಟದ ಸಂಶೋಧನಾ ಕೃತಿಗಳು ಬೆಳಕಿಗೆ ಬಂದವು. ಜಾನಪದದಲ್ಲಿ ಕೆಲಸ ಮಾಡುತ್ತಿರುವ ಬಹಳಷ್ಟು ಜನ ವಿದ್ವಾಂಸರು ಸಾಹಿತ್ಯದ ವಿದ್ಯಾರ್ಥಿಗಳು, ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಕೂಡ ಸಾಹಿತ್ಯದ ಒಂದು ಅಂಗವಾಗಿಯೇ ಜಾನಪದವನ್ನು ಕಲಿಸುತ್ತಿದ್ದೇವೆ. ಹಾಗಾಗಿ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ಮತ್ತು ಮನೋ ವೈಜ್ಞಾನಿಕ ಅಧ್ಯಯನಗಳು ಹೆಚ್ಚು ನಡೆದಿಲ್ಲವೆಂದೇ ಹೇಳಬೇಕಾಗುತ್ತದೆ. ಹೀಗೆ ಮೌನವಾಗಿಯೇ ಉಳಿದಿರುವ ಬಹುಸಂಖ್ಯಾತ ಜನವರ್ಗದ ಜ್ಞಾನವನ್ನು, ಬೇರೆ ಬೇರೆ ಜ್ಞಾನಶಾಖೆಯ ವಿದ್ವಾಂಸರುಗಳು ಅಧ್ಯಯನ ತೆಕ್ಕೆಗೆ ತೆಗೆದುಕೊಂಡಾಗ ಮಾತ್ರ ಅದಕ್ಕೊಂದು ಪರಿಪೂರ್ಣತೆ ಬರುತ್ತದೆ.

ಪ್ರಸ್ತುತ ಸುಡುಗಾಡು ಸಿದ್ಧರನ್ನು ಕುರಿತು ಡಾ. ನೆಲ್ಲಿಸರ ಅವರು ೧೯೮೧ರಲ್ಲಿ ಐ.ಬಿ.ಎಚ್. ಪ್ರಕಾಶನ ಬೆಂಗಳೂರು ಇವರ ಪ್ರಕಟಣ ಮಾಲೆಯಲ್ಲಿ ಪರಿಚಯಾತ್ಮಕ ಚಿಕ್ಕ ಪುಸ್ತಕ ಪ್ರಕಟಿಸಿದರು. ಡಾ. ಪಿ. ಕೆ. ಖಂಡೋಬಾ ಅವರು ೧೯೯೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯೊಂದಿಗೆ 'ಸುಡುಗಾಡು ಸಿದ್ಧರ ಸಂಸ್ಕೃತಿ' ಎಂಬ ಪುಸ್ತಕವನ್ನು ಪ್ರಕಟಿಸಿದರು. ಈ ಎಲ್ಲಾ ಅಧ್ಯಯನಗಳಿಗಿಂತ ವಿಸ್ತೃತವಾದ ಹಾಗೂ ಶಿಸ್ತುಬದ್ಧವಾದ ಸಂಶೋಧನೆ ನಡೆಸಿ 'ಸುಡುಗಾಡು ಸಿದ್ಧರ ಸಮಾಜೋ ಸಾಂಸ್ಕೃತಿಕ' ಅಧ್ಯಯನ ನಡೆಸಿ ೧೯೯೪ರಲ್ಲಿ ಪುಸ್ತಕ ಪ್ರಕಟಿಸಿದವರು ಯುವ ವಿದ್ವಾಂಸರಾದ ಡಾ. ಟಿ. ಎಂ. ಭಾಸ್ಕರ್ ಅವರು ತದನಂತರ ಅಲ್ಲೊಂದು ಇಲ್ಲೊಂದು ಲೇಖನಗಳು ಪ್ರಕಟವಾದವೇ ವಿನಃ ಮತ್ತೇನೂ ಕೆಲಸ ಆಗಲಿಲ್ಲ. ಆದರೆ ಕರ್ನಾಟಕ ಜಾನಪದ ಅಕಾಡೆಮಿಯು ಮತ್ತು ಕೊಪ್ಪಳ ಜಿಲ್ಲಾ ಸುಡುಗಾಡು ಸಿದ್ಧರ ಸಂಘ ಒಟ್ಟಾಗಿ ಸೇರಿ ಒಂದು ಅಪರೂಪದ ವಿಚಾರ ಸಂಕಿರಣವನ್ನು ಮಾರ್ಚ್ ೯, ೨೦೦೭ರಂದು ಏರ್ಪಡಿಸಿದ ಕೀರ್ತಿ, ಅಕಾಡೆಮಿಯ ಸದಸ್ಯರೂ, ಮಾನ್ಯ ಮಿತ್ರರೂ ಆದ ಶ್ರೀ ಗವೀಶ ಹಿರೇಮಠ ಅವರಿಗೆ ಸಲ್ಲಬೇಕು.

ಅಲೆಮಾರಿ ಸಮುದಾಯಗಳಲ್ಲಿ ಲಂಬಾಣಿ ಹೆಂಗಸರು ತಮ್ಮ ವಿಶಿಷ್ಟ ವೇಷಭೂಷಣಗಳಿಂದ ಮತ್ತು ಭಾಷೆ ಸಂಸ್ಕೃತಿಯಿಂದ ಇತರರಿಗಿಂತ ನಾವು ಹೇಗೆ ಭಿನ್ನ ಎಂಬುದನ್ನು ಸಾರುವಂತೆ, ಸುಡುಗಾಡು ಸಿದ್ಧರೂ ಕೂಡ ಇತರರ ಗುಂಪಿನಲ್ಲಿ ಎದ್ದು ಕಾಣುವಂಥ ಪೋಷಾಕುಗಳನ್ನು ಧರಿಸಿ, ಮಂತ್ರ–ತಂತ್ರ–ಯಕ್ಷಿಣಿ ವಿದ್ಯೆ ಹಾಗೂ ಕೈಚಳಕಿನಾಟ ಪ್ರದರ್ಶಿಸುತ್ತಾ ಊರೂರು ಅಲೆಯುವ ಸಿದ್ಧರನ್ನು ಬೈರಾಗಿಗಳು, ಸುಡುಗಾಡು ಸಿದ್ಧರು ಎಂದೇ ಜನ ಕರೆಯುತ್ತಾ ಬಂದಿದ್ದಾರೆ, ಇವರು ಆಂಧ್ರ ಮೂಲದವರಾಗಿದ್ದರೂ ಬಹುತೇಕ ಕರ್ನಾಟಕದ ಹಲವಾರು ಪ್ರದೇಶಗಳಲ್ಲಿ ಸಣ್ಣಸಣ್ಣ ಗುಂಪುಗಳಾಗಿ ಮನೆಮಾಡಿಕೊಂಡು ವಾಸಿಸುತ್ತಿದ್ದಾರೆ. ಇವರ ಮೂಲದ ಬಗ್ಗೆ ಎಚ್. ವಿ. ನಂಜುಂಡಯ್ಯ ಮತ್ತು ಅನಂತಕೃಷ್ಣ ಅಯ್ಯರ್ ಅವರು ಇವರು ತೆಲುಗು ಮೂಲದವರೆಂದೂ, ಸ್ಮಶಾನದಲ್ಲಿದ್ದು, ಮಾಟ, ಮಂತ್ರ ಹಾಗೂ ಇಂದ್ರಜಾಲ ವಿದ್ಯೆಗೆ ಹೆಸರಾದವರೆಂದೂ, ಸ್ಮಶಾನದ ಒಡೆಯನಾದ ಶಿವನ ಆರಾಧಕರೆಂದೂ ಜೋಗಿಗಳ ಒಳಪಂಗಡಕ್ಕೆ ಸೇರಿದವರೆಂದೂ ಸ್ಪಷ್ಟವಾಗಿ ಗುರುತಿಸಿದ್ದಾರೆ. ಸಿದ್ಧರು ವಾಸಿಸುವ, ಕೇರಿಗಳಿಗೆ ಪ್ರತ್ಯೇಕ ಹೆಸರಿಲ್ಲ. ಐಹಿಕ ಸುಖಭೋಗಗಳಿಗಿಂತ ಪಾರಮಾರ್ಥಿಕ ಸುಖದ ಕಡೆಗೆ ಮುಖ ಮಾಡಬೇಕೆಂದೂ ಅನ್ಯಾಯ, ಅನೀತಿಯ ಜೀವನ ಸಾಗಿಸಬಾರದೆಂದೂ ಮಾನವೀಯತೆಗೆ, ಆದರ್ಶ ಜೀವನಕ್ಕೆ ಗಮನಹರಿಸಿರೆಂದೂ ಹಂಚ್ಕುಣ್ಣುವ ಸೋದರ ಭಾವವನ್ನು ಬೆಳೆಸಿಕೊಳ್ಳಿರೆಂದು ಸಾರುವ ಇವರ ತತ್ವಗಳು ಇಂದೂ ನಮಗೆ ಅನುಕರಣೀಯವಾಗಿದೆ.

ಸುಡುಗಾಡು ಸಿದ್ಧರಲ್ಲಿ ಮನೆತನದ ಹೆಸರುಗಳು ಮತ್ತು ಸುತ್ತಲಿನ ಸಮುದಾಯ ಅವರನ್ನು ಗುರುತಿಸುವುದು ಮುಖ್ಯವಾಗಿ ಅವರು ಧರಿಸುವ ಶಿವಗಂಟೆ, ರುದ್ರಾಕ್ಷಿ, ಹಣೆಯ

ವಿಭೂತಿ ಮತ್ತು ಕೈಯಲ್ಲಿ ಹಿಡಿದ ಛತ್ರಿಯಿಂದ, ಅವರ ಹೆಸರಿನ ಪದ ನಿಷ್ಪತ್ತಿಯನ್ನು ಪುರಾಣ ಮೂಲದ ಐತಿಹ್ಯಗಳಿಂದ ಮತ್ತು ಸ್ಮಶಾನದಲ್ಲಿದ್ದು ಬೂದಿಬಡುಕರಂತೆ ಕಾಲಜ್ಞಾನ ಹೇಳುವುದರ ಮೇಲೆಯೇ ಹೆಚ್ಚಿನ ಸಂಶೋಧನೆಗಳು ನಡೆದಿವೆಯಾದರೂ ಪಾರಂಪರಿಕವಾಗಿ ಬಂದ ಮೋಡಿಯಾಟ ಇವರಿಗೊಂದು ನೆಲೆ ಕಲ್ಪಿಸಿತೆಂದು ಹೇಳಿದರೆ ತಪ್ಪಾಗಲಾರದು. ಸಿದ್ಧರನ್ನು ಕುರಿತು ಆಳವಾಗಿ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದಿರುವ ಡಾ. ಭಾಸ್ಕರ್ ಅವರು ಹೇಳುವಂತೆ, ಸಮುದಾಯದ ಜೀವನ ಪದ್ಧತಿ, ನೆರೆಹೊಳೆ, ವಲಸೆಯ ಮೂಲ, ಮೂಲ ಮತ್ತು ಪ್ರಸರಣ ಹಾಗೂ ಈ ವೃತ್ತಿಗೆ ಧಾರ್ಮಿಕ, ನೈಸರ್ಗಿಕ ಕಾರಣಗಳನ್ನು ಸರಿಯಾಗಿ ಗುರಿತಿಸಿದಾಗ ಮಾತ್ರ ಅವರ ಆ ಕಲಾವಿದರ ನೈಜತೆ ನೈಪುಣ್ಯತೆ ನಮಗೆ ಅರ್ಥವಾಗುತ್ತದೆ. ಅದಿಲ್ಲದೆ ಕೇವಲ ಊಹೆಗಳಿಂದ ಮೌಖಿಕ ಐತಿಹ್ಯಗಳ ಮೇಲೆ ನಿರ್ಧರಿಸುವುದು ಕಷ್ಟವಾಗುತ್ತದೆ. ಏಕೆಂದರೆ ಅವರ ಭಾಷೆ ತೆಲುಗು ಮಿಶ್ರಿತ ಕನ್ನಡ. ಪಿತೃ ಹಾಗೂ ಮಾತೃ ಮೂಲ ದೈವ ಎರಡೂ ನೆಲೆಗಳಲ್ಲಿದ್ದು ನಿಸರ್ಗ ಸಂಬಂಧ ಹಬ್ಬಗಳನ್ನೇ ಹೆಚ್ಚಾಗಿ ಆಚರಿಸಿಕೊಂಡು ಬಂದಿದ್ದಾರೆ. ಕೃಷಿ ಸಂಬಂಧಿ ಹಬ್ಬಗಳಿಗೆ ಇವರಲ್ಲಿ ಮಹತ್ವವಿಲ್ಲ.

ಇವರಲ್ಲಿ ಸೃಷ್ಟಿ ಪುರಾಣಗಳಿಗಂತೂ ಕೊರತೆಯಿಲ್ಲ. ಇವರ ಮೂಲ ಪುರುಷ ಅವರೇ ಹೇಳುವಂತೆ ಬಡ ಜಂಗಮ, ಬೂದಿ ಬಡುಕ ಶಿವನಾದ್ದರಿಂದ ನಾವೂ ಅವನಂತೆ ಸ್ಮಶಾನಕಾಯುವವರು ಎನ್ನುತ್ತಾರೆ. ಹೀಗೆ ಹೇಳಿಸಿಕೊಳ್ಳುವುದರ ಮೂಲಕ ತಮ್ಮ ಆರಾಧ್ಯ ದೈವವೇ ಬಡವನಾದ್ದರಿಂದ ನಾವು ಎಲ್ಲಿಯ ಸಿರಿವಂತರಾಗಬೇಕು ಹೇಳಿ ? ಸ್ವರ್ಗ-ನರಕಗಳೆಂಬುದು ನಮ್ಮ ಆಚಾರ-ವಿಚಾರಗಳಲ್ಲಿದೆ. ಪಾಪ, ಪುಣ್ಯ ಎರಡೂ ಜೊತೆ ಜೊತೆಯಾಗಿಯೇ ಬರುತ್ತವೆ. ಹಾಗಾಗಿ ಆತ್ಮ-ಪರಮಾತ್ಮ ಮತ್ತು ಪುನರ್ ಜನ್ಮ ಇವೆಲ್ಲಾ ಕಟ್ಟು ಕಥೆಗಳಾಗಬಾರದೆಂದು ತಮ್ಮ ಧಾರ್ಮಿಕ ಎಲ್ಲೆಗಳನ್ನು ಗುರುತಿಸುವ ಐತಿಹ್ಯಗಳಲ್ಲಿ ಅವರೇ ಹೇಳಿಕೊಂಡಿದ್ದಾರೆ. ಇವೆಲ್ಲಾ ನೀತಿಬೋಧಕ ಹಾಗೂ ಜೀವ ಜಗತ್ತುಗಳಿಗೆ ಸಂಬಂಧಿಸಿದವುಗಳಾಗಿವೆ. ಸಿದ್ಧರು, ಉತ್ತರ ಕರ್ನಾಟಕದ ಕೆಲವು ಭಾಗಗಳಲ್ಲಿ ಅಂದರೆ, ಕೊಪ್ಪಳ, ಬಿಜಾಪುರ, ರಾಯಚೂರು, ಗಂಗಾವತಿ, ಕೂಡ್ಲಿಗಿ, ಕುಷ್ಟಗಿ ಮುಂತಾದೆಡೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದು ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಜಿಲ್ಲೆಗಳಲ್ಲಿ ವಿರಳವಾಗಿ ಕಂಡು ಬರುತ್ತಾರೆ. 'Alen Dundes' ಎಂಬ ಅಮೆರಿಕೆಯ ಜಾನಪದ ವಿದ್ವಾಂಸ Study of Folklore ಎಂಬ ಗ್ರಂಥದಲ್ಲಿ World view ಎಂಬ ಪದ ಬಳಸಿದ್ದಾರೆ. ಜನಪದರು ಲೋಕವನ್ನು ಕಂಡ ಬಗೆಯನ್ನು ಅದು ವಿವರಿಸುತ್ತದೆ. ಇದು ಇಲ್ಲದೆ ಇರುವ ಜನಾಂಗವಾಗಲಿ, ಜನರಾಗಲಿ ಇಲ್ಲವೇ ಇಲ್ಲ. ಅದು ಪರಂಪರಾಗತ ಕೊಡುಗೆಯಾಗಿ ಬಂದಿದೆ. 'ಲೋಕದೃಷ್ಟಿ' ಎಂದರೆ ಜನರು ತಮ್ಮ ಸುತ್ತಲಿನ ಪ್ರಕೃತಿಯ ಬಗೆಗೆ ತಮ್ಮ ಸ್ವಂತ ಬದುಕಿನ ಬಗೆಗೆ ಪ್ರಕಟಿಸಿದ ನೈಜ ವಸ್ತು ಚಿತ್ರಣಗಳು, ಎಲ್ಲ ಜನರೂ ತಮ್ಮ ಜನಾಂಗದ ಹುಟ್ಟಿನ ಬಗೆಗೆ ಅನಂತ ಕಥೆಗಳನ್ನು ಹೇಳುತ್ತಾರೆ. ಇತ್ತೀಚಿನ ದಿನಗಳಲ್ಲಿ ಪ್ರಬಲವಾಗುತ್ತಿರುವ ಬಲಪಂಥೀಯ ಸಂಘಟನೆಗಳು ವೈದಿಕರ ಲೋಕದೃಷ್ಟಿಯನ್ನು ಅಖಿಲ ಭಾರತ ಏಕೈಕ

ಲೋಕದೃಷ್ಟಿಯೆಂದು ಸಾರತೊಡಗಿವೆ. ಇದು ಬಹುರೂಪಿ ಸಂಸ್ಕೃತಿಯನ್ನು ನಾಶಮಾಡಿ, ಅದಕ್ಕೊಂದು ಏಕರೂಪತೆಯನ್ನು ತೊಡಿಸುವ ಪ್ರಯತ್ನ ನಡೆಸುತ್ತಿರುವುದು ಉತ್ತಮ ಸಂಪ್ರದಾಯವಲ್ಲ.

ನಮ್ಮ ಎಲ್ಲ ಬುಡಕಟ್ಟು ಮತ್ತು ಅಲೆಮಾರಿ ಸಮುದಾಯಗಳು ಅವರವರ ಸಂಸ್ಕೃತಿ ಸಂಪ್ರದಾಯ ಗಳಿಗನುಗುಣವಾಗಿ ಪುರಾಣಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಅವೆಲ್ಲವೂ ಸುಳ್ಳೇ ಸತ್ಯವೇ ಎಂದು ಜಿಜ್ಞಾಸೆ ಮಾಡಬೇಕಾದ್ದಿಲ್ಲ. ಸಿದ್ಧರೂ ಕೂಡ ತಮ್ಮ ಹುಟ್ಟಿನ ಬಗ್ಗೆ ಹಲವು ಕಥೆಗಳನ್ನು ಹೇಳುತ್ತಾರೆ. ಈಶ್ವರ ತಪಸ್ಸು ಮಾಡುವಾಗ ಅವನ ತಪಸ್ಸಿಗೆ ಭಂಗ ಬರಬಾರದೆಂದು, ಪಾರ್ವತಿ ನವಕೋಟಿ ಸಿದ್ಧರನ್ನು ಸೃಷ್ಟಿಸಿದಳೆಂದೂ ಅನಂತರ ಅವರು ಬದುಕನ್ನು ರೂಪಿಸಿಕೊಳ್ಳಲು ತನ್ನಲ್ಲಿದ್ದ ರುದ್ರಾಕ್ಷಿ, ಕಮಂಡಲ, ಶಿವಗಂಟೆಗಳನ್ನು ಕೊಟ್ಟು ಭೂಲೋಕದಲ್ಲಿ ಸತ್ಯ ಸಾರುತ್ತಾ ಜೋಳಿಗೆ ತುಂಬಿಸಿಕೊಳ್ಳಿರೆಂದು ಹೇಳಿ ಕಳುಹಿಸಿದ ಸಾಕ್ಷಾತ್ ಶಿವನ ಮಕ್ಕಳೆಂದೂ ಹೇಳುತ್ತಾರೆ. ಇವರ ಸ್ಮರಣಶಕ್ತಿ ಅದ್ಭುತವಾದುದು. ರಾಮಾಯಣ, ಮಹಾಭಾರತ ಪುರಾಣ ಕಾವ್ಯಗಳನ್ನು ಕಿನ್ನರ ಕಿಂಪುರುಷರ ಕಥೆಗಳನ್ನು ಪುಂಖಾನುಪುಂಖವಾಗಿ ಯಾವ ಅಡೆತಡೆಗಳಿಲ್ಲದೆ ನಿರರ್ಗಳವಾಗಿ ಹೇಳಬಲ್ಲ ಇವರನ್ನು ಮಹಾಪುರುಷರು, ಯೋಗಿಗಳು, ಋಷಿಗಳೆಂದೇ ಜನ ಗೌರವಿಸುವುದನ್ನು ಅನೇಕ ಹಳ್ಳಿಗಳಲ್ಲಿ ಇಂದೂ ಕಾಣಬಹುದಾಗಿದೆ.

ಸಿದ್ಧರು ತಾವು ವಾಸಿಸುವ ಸುತ್ತಮುತ್ತಲ ಪ್ರದೇಶಗಳಲ್ಲಿ ಸದ್ಗುಣ ಸಂಪನ್ನ ಮೌಲ್ಯಗಳನ್ನು ಮತ್ತು ಸೌಂದರ್ಯ ಭಾವನೆಗಳನ್ನು ನೆಲೆಗೊಳಿಸಲು ಪ್ರಯತ್ನಿಸುತ್ತಿದ್ದವರೆಂದರೆ ತಪ್ಪಾಗಲಿಕ್ಕಿಲ್ಲ. ಜನರನ್ನ ನಂಬಿಸುವ ಕಲೆಗಾರಿಕೆ ಇವರಿಗೆ ಪರಂಪರಾಗತವಾಗಿಯೇ ಬಂದಿತ್ತು. ಇವರ ಮಾತಿನಲ್ಲಿ ಹೇಳುವುದಾದರೆ ಬದುಕೇ ಧರ್ಮ, ಅಂದರೆ, ಕೂಡುಣ್ಣುವ, ಸಂವಾದಿಸುವ, ಮನಕರಗಿಸುವ ಸಂವೇದನೆಯಲ್ಲಿ 'ಸಂಸ್ಕೃತಿ' ಇರುತ್ತದೆಂದು ಅದನ್ನೇ ಒಟ್ಟಾರೆಯಾಗಿ ಮನುಷ್ಯ ಧರ್ಮವನ್ನುತ್ತಾರೆಂದು ಸಾರುತ್ತಾರೆ. ಹಾಗಾಗಿ ಊರಾಚೆಯಲ್ಲಿ ಸ್ಮಶಾನದಲ್ಲಿದ್ದರೂ ಜೀವನ ಮರ್ಮವನ್ನು ಕುರಿತು ಬೋಧಿಸುತ್ತಾರೆ. ಕಲೆ ಸಾಹಿತ್ಯ ಜೀವನೋತ್ಸಾಹಕ್ಕೆ ಅತ್ಯವಶ್ಯಕವೆನ್ನುವುದನ್ನ ಅವರ ಜೋಳಿಗೆಯಾಟದಿಂದ ನಿರೂಪಿಸುತ್ತಾರೆ. ಈ ಹೊತ್ತು ಜಾಗತೀಕರಣದಿಂದಾಗಿ ಸಂಸ್ಕೃತಿ ನಾಶಹೊಂದುತ್ತಿದೆ ಎಂದು ಸಂಶಯ ಪಡುತ್ತಿರುವ ಸಮಯದಲ್ಲಿ 'ಸುಡುಗಾಡು ಸಿದ್ಧರ ಜಾದೂ ಆಟ'ವನ್ನು ಹೆಚ್ಚು ಹೆಚ್ಚು ಪ್ರಚುರ ಪಡಿಸಬೇಕಾದದ್ದು ಸಂಶೋಧಕರೆಲ್ಲರ ಆದ್ಯ ಕರ್ತವ್ಯವೆಂದು ಭಾವಿಸುತ್ತೇವೆ. ಏಕೆಂದರೆ ಇವರು ಒಂದೆಡೆಯಿಂದ ಮತ್ತೊಂದೆಡೆಗೆ ತಿರುಗಾಡುವ ಚಲನಶೀಲ ಸಂಸ್ಕೃತಿ ಸಂಪನ್ನರು. ಕೇವಲ ಕಾಡಿ ಬೇಡಿ ಭಿಕ್ಷೆ ಪಡೆಯುವವರಲ್ಲ. ಮಕ್ಕಳ ಮನಸ್ಸಂತೋಷ ಪಡಿಸಿ ಮುದನೀಡುವವರು. ಸ್ವತಂತ್ರವಾಗಿ ಬದುಕಬೇಕೆನ್ನುವ ಸ್ವಾಭಿಮಾನಿಗಳಿವರು. ಬಡತನವಿದ್ದರೂ ಬದುಕಿನಲ್ಲಿ ಸಂತೃಪ್ತಿ ಇದೆ. ಆದರೆ ಈಗ ಕಾಲ

ಬದಲಾಗಿದೆ. ಬದುಕಿನ ಮಾರ್ಗಕ್ಕೆ ಮೋಡಿಯಾಟ ಹೊಟ್ಟೆ ತುಂಬಿಸುತ್ತಿಲ್ಲವಾದ್ದರಿಂದ ಗಾಬರಿಯಾಗಿ ಹೆಂಡಿರು ಮಕ್ಕಳ ಪೋಷಣೆಗೆ ನೆಲೆಕಾಣದಾಗಿದ್ದಾರೆ. ಕುಲಕಸುಬಿನಲ್ಲಿನ ಪ್ರಾವೀಣ್ಯತೆಗೆ ಬೆಲೆ ಇಲ್ಲದಾಗ ಅನಿವಾರ್ಯವಾಗಿ ಬೇರೆ ವೃತ್ತಿ ಕೈಗೊಳ್ಳಬೇಕಾಗಿದೆ. ಸಮಾಜ ಕ್ರಿಯಾಶೀಲವಾಗಿರಬೇಕಾದರೆ ಇಂತಹ ಕಲಾವಿದರ ಅವಶ್ಯಕತೆ ತುಂಬಾ ಇದೆ. ಇವರನ್ನು ಉಳಿಸಿ ಬೆಳೆಸೋದು ಮತ್ತು ಸಹವರ್ತಿಗಳಾಗಿ ಕಾಣೋದು ಎನ್ನುವುದೆಂದರೆ ಅಲ್ಲಿರುವ ಕಲಾವಿದರ ಕೈಚಳಕವನ್ನು ಗುರುತಿಸೋದು ಅವರ ಬುದ್ಧಿಶಕ್ತಿಯೂ ಈ ಸಮಾಜಕ್ಕೆ ಅವಶ್ಯಕ ಎಂದು ಖಚಿತ ಪಡಿಸುವುದು. ಹೀಗೆ ಮಾತ್ರ ಈ ಬುಡಕಟ್ಟಿನ ಸಂಸ್ಕೃತಿ ತನಗೆ ಬೇಕಾದದ್ದನ್ನು ಜತನ ಮಾಡಿಕೊಳ್ಳುತ್ತೆ, ಇಲ್ಲಾಂದ್ರೆ ಕಿತ್ತೊಗೆಯುತ್ತೆ. ಒಬ್ಬನ ಬದುಕು ಎಲ್ಲರದೂ ಹೌದು. ಒಬ್ಬನಿಗಾದ ಅವಮಾನ ಎಲ್ಲರಿಗಾದದ್ದು ಎಂದವರು ದೊಡ್ಡವರಲ್ಲವೇ ?

ಇವರ ಸಾಮಾಜಿಕ, ಕೌಟುಂಬಿಕ, ಆರ್ಥಿಕ ವ್ಯವಸ್ಥೆ ತುಂಬಾ ನೇರ ಮತ್ತು ಪಾರದರ್ಶಕ (Trnasperent) ನಾಳೆಗಾಗಿ ಕೂಡಿರಬೇಕೆಂಬ ಹಬ್ಬಾಸೆಯುಳ್ಳದ್ದಲ್ಲ. ಆಹಾರ ಪದ್ಧತಿ, ಜಂಗಮ ಸ್ವರೂಪದ್ದು ಅದರಲ್ಲಿ ಎಲ್ಲರ ಮನೆಯದ್ದೂ ಸಂಮಿಳಿತಗೊಂಡಿತ್ತು. ಮೇಲು ಕೀಳಿಲ್ಲ. ವೇಷಭೂಷಣವೂ ಕೂಡ ಎಲ್ಲಿಂದಲೋ ಆಮದು ಮಾಡಿಕೊಂಡದ್ದಲ್ಲ. ತಮಗೆ ತಾವೇ ಪಾರಂಪರಿಕ ವಿಚಾರಧಾರೆಯಿಂದ ಅರಿತುಗೊಂಡದ್ದಲ್ಲ. ತಮಗೆ ತಾವೇ ಪಾರಂಪರಿಕ ವಿಚಾರಧಾರೆಯಿಂದ ಅರಿತುಕೊಂಡು ಸೃಷ್ಟಿಸಿದ್ದಾಗಿತ್ತು. ಅವರು ಹಾಕುವ ಎಲ್ಲಾ ಪೋಷಾಕುಗಳಿಗೂ ಒಂದೊಂದು ಅರ್ಥ ಕಲ್ಪಿಸುತ್ತಾರೆ. ಕುಲಕಸುಬು ಕೂಡ ಪೌರಾಣಿಕ ಮೂಲದ್ದಾಗಿತ್ತು. ಧಾರ್ಮಿಕ ನೈತಿಕ ತಳಹದಿಯದಾಗಿತ್ತು. ರೋಗ ರುಜಿನಗಳಿಗೆ ಅವರು ನೀಡುವ ಚಿಕಿತ್ಸಾ ವಿಧಾನ, ಮನಸ್ಸು ಮತ್ತು ದೇಹವನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುವುದಾಗಿದ್ದು. ಯಾವ ಗಿಡ, ಮರ ಯಾವ ಕಾಲದಲ್ಲಿ ಚಿಗುರುತ್ತೆ, ಯಾವ ಪಕ್ಷಿ ಯಾವ ರೀತಿ ಕೂಗುತ್ತೆ, ಅಂಥ ಹಕ್ಕಿ ಪಕ್ಷಿಗಳ ಚಲನವಲನ ಮನುಷ್ಯನಿಗೆ ಏನು ಸಂದೇಶಕೊಡುತ್ತೆ ಎನ್ನುವುದನ್ನ ತಮ್ಮ ಜೀವನಾನುಭವದಿಂದ ಹೇಳುತ್ತಿದ್ದ ಸುಡುಗಾಡು ಸಿದ್ಧರ ಜ್ಞಾನ ಇಂದು ನಿಷ್ಪ್ರಯೋಜಕವಾಗಿದೆ. ಕಾಡಿನ ಜೊತೆಗೆ ನೇರ ಸಂಬಂಧ, ಕೂಡಿಡದಿರುವ ಗುಣ, ಅಂದಂದಿನ ಹೊಟ್ಟೆಪಾಡಿಗಾಗಿ ಅಂದಂದೇ ಯೋಚಿಸುತ್ತಿದ್ದ ಸಿದ್ಧರು, ಆಸ್ತಿಯ ಒಡೆತನವನ್ನೆಂದೂ ಬಯಸದ ದುಡಿವ ಕೈಗಳಿಗೆ ಕೆಲಸವಿಲ್ಲದಂತಾಗಿ ಇಂದು ಸೋಮಾರಿಗಳೂ, ಮೈಗಳ್ಳರೂ, ಆಗಿ ರೂಪುಗೊಳ್ಳುತ್ತಿದ್ದಾರೆ. ಇಂದು ಸಾಮಾಜಿಕ ವ್ಯವಸ್ಥೆಯಲ್ಲಿ ಸುಡುಗಾಡು ಸಿದ್ಧ ಮಹಿಳೆಯರು ಕತ್ತಲ ಲೋಕದಲ್ಲಿದ್ದಾರೆ. ಆದರೆ ಹಿಂದಿನ ಕಾಲದಲ್ಲಿ ಗಂಡನಿಗಿಂತ ಮಿಗಿಲಾಗಿ ಕಷ್ಟಪಡುತ್ತಿದ್ದರು. ಶ್ರಮವೇ ಇವರ ಬದುಕು ಮತ್ತು ಮೌಲ್ಯವಾಗಿತ್ತು. ಮೌಖಿಕ ಪರಂಪರೆಯ ಹರಿಕಾರರಾಗಿದ್ದರು. ಸಮಾನತೆ ಹಾಗೂ ಸಮಾನ ಅವಕಾಶ ತತ್ವದ ತಳಹದಿಯ ಮೇಲೆ ಸಂಸಾರ ನಡೆಸುತ್ತಿದ್ದ ರೀತಿಯನ್ನು ನಾವಿಂದು ಉಳಿಸಿಕೊಳ್ಳುವ ಅಥವಾ ನಮ್ಮ ಬದುಕಿಗೆ ಅಳವಡಿಸಿಕೊಳ್ಳುವುದನ್ನು ಅವರಿಂದ ಕಲಿಯಬೇಕಾಗಿದೆ. ಮುಗ್ಧ ಜೀವಿಗಳಾದ ಸುಡುಗಾಡು ಸಿದ್ಧರು ಇಂದು ಹಲವು ರೀತಿಯ

ಶೋಷಣೆಗಳಿಗೆ ಒಳಗಾಗುತ್ತಿದ್ದಾರೆ. ಇವರ ಅನಕ್ಷರತೆ, ಅಜ್ಞಾನ ಮತ್ತು ಸಾಮುದಾಯಿಕ ಬದುಕಿನ ಸರಳತೆಯನ್ನು ಮುಂದುವರಿದ ಜನ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ. ಹೊಟ್ಟೆಪಾಡಿಗಾಗಿ ಕಲಿತ ವಿದ್ಯೆ ಕೂಲಿ ಜೀವನದಲ್ಲಿ ಮರೆಯಾಗುತ್ತಿದೆ.

# ಸುಡುಗಾಡ ಸಿದ್ಧರ ವೃತ್ತಿ ಮತ್ತು ಕುಲಕಸಬುಗಳು*

ಡಾ. ಎ. ಎಲ್. ಪಾಟೀಲ

'ಸುಡಗಾಡ ಸಿದ್ಧರು' ಒಂದು ಬುಡಕಟ್ಟು ಸಮುದಾಯ. ಅದು ಬುಡಕಟ್ಟಿನ ಎಲ್ಲಾ ಲಕ್ಷಣಗಳನ್ನು ಹೊಂದಿದ್ದರೂ, ಸರಕಾರದ ಬುಡಕಟ್ಟು ಪಟ್ಟಿಗೆ ಸೇರದೆ ಪರಿಶಿಷ್ಟ ವರ್ಗಗಳ ಪಟ್ಟಿಗೆ ಸೇರಿಕೊಂಡಿರುವ ಒಂದು ಅಲೆಮಾರಿ ಬುಡಕಟ್ಟು. ಆರ್ಥಿಕವಾಗಿ ಅಬಲವಾಗಿರುವ ಈ ಬುಡಕಟ್ಟು ಜನಾಂಗವನ್ನು ಕರ್ನಾಟಕದಲ್ಲಿ ಸುಡಗಾಡ ಸಿದ್ಧರು, ಕಾಡಸಿದ್ಧರು, ಮಸಣದ ಸಿದ್ಧರು. ಸಿದ್ಧಯ್ಯಗಳು, ನಿರಂಜಯ್ಯಗಳು, ಗೊಂಬೆಯಾಟದವರು, ಪಾಕನಕಟ್ಟಿ ಗೊಲ್ಲರು, ಕಾಡುಪಾಪರೆಂದು, ಆಂಧ್ರದಲ್ಲಿ ಕಾಟಿ ಪಾಮುಲಗಳೆಂದು ಹಾಗೂ ಮಹಾರಾಷ್ಟ್ರದಲ್ಲಿ ಸ್ಮಶಾನ ಜೋಗಿಗಳೆಂದು ಕರೆಯುವದುಂಟು.

ತೀರಾ ಹಿಂದುಳಿದ ಅಲೆಮಾರಿಗಳಾದ ಸುಡುಗಾಡು ಸಿದ್ಧರು ಮೂಲತಃ ಗುಡ್ಡ, ಬೆಟ್ಟ, ಕಣಿವೆ, ಕಾನನಗಳಲ್ಲಿದ್ದು ಬದುಕು ಸಾಗಿಸಿದವರು. ಕಾಡಿನಲ್ಲಿದ್ದುಕೊಂಡು ಕಾಡಿನ ಮೂಲದಿಂದ ದೊರೆಯುವ ಗಡ್ಡೆ-ಗೆಣಸು, ಹಣ್ಣು-ಹಂಪಲಗಳನ್ನು ತಿನ್ನುತ್ತಾ, ಕಾಡನ್ನವಲಂಬಿಸಿ ಬದುಕಿದವರು. ಕ್ರಮೇಣ ಆಹಾರ ಅರಸುತ್ತಾ ಗ್ರಾಮ ಸಂಪರ್ಕವನ್ನು ಬಯಸಿ, ಗ್ರಾಮಗಳ ನಿರ್ಜನ ಪ್ರದೇಶವಾದ ಸ್ಮಶಾನವನ್ನು ತಮ್ಮ ನೆಲೆಯಾಗಿ ಮಾಡಿಕೊಂಡವರು. ಸ್ಮಶಾನ ಇವರ ವಾಸಸ್ಥಾನವಾದ ಮೇಲೆ ಜನ ಇವರನ್ನು ಕಾಡು ಸಿದ್ಧರ ಬದಲಾಗಿ ಸುಡುಗಾಡ ಸಿದ್ಧರೆಂಬ ಹೆಸರಿನಿಂದ ಕರೆಯಲಾರಂಭಿಸಿದರು.

ಸುಡುಗಾಡಿನಲ್ಲಿ ಗುಡಿಸಲು ಕಟ್ಟಿಕೊಂಡು ವಾಸಿಸಲು ಪ್ರಾರಂಭಿಸಿದ ನಂತರದಲ್ಲಿ ಸ್ಮಶಾನ ದೇವತೆಯನ್ನು ಪೂಜಿಸುವ/ಆರಾಧಿಸುವ ಪರಂಪರೆಯನ್ನು ಪ್ರಾರಂಭಿಸಿದರು. ವಿಶೇಷ ದಿನಗಳಂದು ಸ್ಮಶಾನದಲ್ಲಿ ಪೂಜೆ ಪುನಸ್ಕಾರದ ಜೊತೆಗೆ ಮಂತ್ರ ಪಠಣಗಳನ್ನು ಮಾಡಿ ಸಿದ್ಧಿಯನ್ನು ಸಾಧಿಸಲಾರಂಭಿಸಿದರು/ಸಾಧಿಸಿದರು. ತಮ್ಮ ಕುಲವೃತ್ತಿಯಂತೆ ಸುಡುಗಾಡು ಸಿದ್ಧರು ಬೆಳಗಿನ ಜಾವ ನಪೂರಿಯನ್ನು ಊದಿ ಮಲಗಿದ ಜನರನ್ನು ಬೆಳಗಾಯಿತೆಂದು ಎಬ್ಬಿಸುತ್ತಾರೆ. "ಊರಿನ ಜನ ಹೆಣವನ್ನು ಅಂತ್ಯಕ್ರಿಯೆಗೆ ತಂದಾಗ ಅವರಿಂದ ತಾಟು, ತಂಬಿಗೆ, ಮಡಿಕೆ, ದವಸ-ಧಾನ್ಯ, ದುಡ್ಡು, ಬಟ್ಟೆ-ಬರೆ ತೆಗೆದುಕೊಳ್ಳುತ್ತಾರೆ. ಹಿಂದಿನಿಂದಲೂ ಬಂದಿರುವ ಈ ಪದ್ಧತಿಯನ್ನು ಈಗಲೂ

ಆಚರಿಸುತ್ತಿದ್ದಾರೆ. ರಾಯಚೂರು, ಬಳ್ಳಾರಿ, ಓಬಳಾಪುರ, ಹಂಪಾಪಟ್ಟಣ, ಬೀದರ್ ಇತ್ಯಾದಿ ಪ್ರಾಂತಗಳಲ್ಲಿ ವಾಸಿಸುವ ಸುಡುಗಾಡು  ಸಿದ್ದರು ಇನ್ನೂ ಸ್ಮಶಾನ ಕಾಯುವ ಕೆಲಸದಲ್ಲಿ ನಿರತರಾಗಿದ್ದಾರೆ. ವಿದ್ಯಾವಂತರು ಮಾತ್ರ ಈ ಕುಲವೃತ್ತಿಯನ್ನು ಕೈಬಿಟ್ಟಿದ್ದಾರೆ."[೧]

ಕರ್ನಾಟಕದಲ್ಲಿ ವಾಸಿಸಿರುವ ಬಹುತೇಕ ಸುಡಗಾಡು ಸಿದ್ಧರು ಭಿಕ್ಷಾಟನೆಯಿಂದಲೇ ತಮ್ಮ ಬದುಕನ್ನು ಸಾಗಿಸುತ್ತಾ ಬಂದಿದ್ದಾರೆ. ಇವರು ಭಿಕ್ಷಾಟನೆ ಸಂದರ್ಭದಲ್ಲಿ ಊರು ಪ್ರವೇಶಿಸುವದಕ್ಕಿಂತ ಮೊದಲು ಸ್ಮಶಾನಕ್ಕೆ ಹೋಗಿ ಸ್ಮಶಾನ ಪೂಜೆ ಮಾಡಿ, ಶಿವದೇವರನ್ನು ನೆನೆಯುತ್ತಾ ತಮ್ಮ ಜೋಳಿಗೆಯಲ್ಲಿ ಇಟ್ಟುಕೊಂಡಿರುವ ವೇಷಭೂಷಣಗಳನ್ನು ಧರಿಸುತ್ತಾರೆ. ಕಾವಿ ಅಥವಾ ಬಣ್ಣ ಬಣ್ಣಗಳಿಂದ ತಯಾರಿಸಿದ ಗಲೀಫ್ ನಿಲುವಂಗಿ, ತಲೆಗೆ ಕಿರೀಟ ಅದರ ಮೇಲೆ ನವಿಲುಗರಿ, ಕೊರಳಿಗೆ ಗಂಟೆ, ಒಂಬತ್ತು ರುದ್ರಾಕ್ಷಿಗಳು, ಅಲಂಕಾರಕ್ಕೆ ಸರಗಳು ಹಾಗೂ ಹುಲಿ ಮತ್ತು ಕರಡಿ ಉಗುರು, ಕಿವಿಗೆ ಕರ್ಣಕುಂಡಲ, ಹಣೆಗೆ ವಿಭೂತಿ, ಕಣ್ಣಿಗೆ ಕಾಡಿಗೆ ಹಾಗೂ ವಿಭೂತಿ ಇತ್ಯಾದಿಗಳನ್ನು ಧರಿಸಿಕೊಂಡು ಬಿದಿರಿನ ಕೋಲಿಗೆ ಜೊತು ಬಿಟ್ಟಿರುವ ಜೋಳುಗೆಗಳನ್ನು ಹಾಕಿ ಕೈಯ್ಯಲ್ಲೊಂದು ಬೆತ್ತ ಹಿಡಿದು ಶಂಖದಿಂದ ಓಂ ಎಂಬ ಶಬ್ದ ಹೊರಡಿಸುತ್ತಾ ಹರಕೆ ಹಾಕಲು ಊರ ಪ್ರವೇಶಿಸುತ್ತಾರೆ.

ನಿರಂಜಯ್ಯನ ಕಾಯಕ ಮಾಡುವವರ ವೇಷವನ್ನು ಧರಿಸಿ ೪ ದಿನ ಹರಕೆ ಹಾಕಿ ಕೊನೆಯ ದಿನ ಭಿಕ್ಷೆ ಬೇಡಿದರೆ, ಸುಡುಗಾಡು ಸಿದ್ಧನ ಕಾಯಕ ಮಾಡುವವರು ಬಣ್ಣ ಬಣ್ಣದಿಂದ ತಯಾರಿಸಿದ ಗಲೀಫ ಧರಿಸಿ ಪ್ರತಿದಿನವು ಭಿಕ್ಷೆ ಬೇಡಿ ಹೊಟ್ಟೆ ತುಂಬಿಸಿಕೊಳ್ಳುತ್ತಾರೆ.

ಭಿಕ್ಷಾಟನೆಯ ಸಂದರ್ಭದಲ್ಲಿ ಕುಲಕೋಟಿಯನ್ನು ರಕ್ಷಿಸುವಂತೆ, ಉದ್ಧರಿಸುವಂತೆ ಹರಕೆ ಮಾಡುತ್ತಾರೆ. "ಧರ್ಮ, ನಡವಳಿಕೆಗಳ ಬಗ್ಗೆ ತಿಳುವಳಿಕೆ ನೀಡುತ್ತಾರೆ. ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣನವರ ತತ್ವಗಳನ್ನು ಹೇಳುತ್ತಾರೆ. ಕಾಲಜ್ಞಾನ ಹೇಳಿ ಭಿಕ್ಷೆ ಬೇಡಿ ಬದುಕುವವರಾಗಿದ್ದಾರೆ. ಸಾಮಾನ್ಯವಾಗಿ ಸಿದ್ಧರು ಹರಿಜನ ಕೇರಿಯಿಂದ ಭಿಕ್ಷಾಟನೆಗೆ ಪ್ರಾರಂಭಿಸಿ ಕುರುಬ, ಲಿಂಗಾಯತ ಇತ್ಯಾದಿಗಳ ನಂತರ ಲಂಬಾಣಿಗಳ ಮನೆಯಿಂದ ಭಿಕ್ಷಾಟನೆ ನಿಲ್ಲಿಸುವ ಪದ್ಧತಿಯನ್ನು ಅನುಸರಿಸುತ್ತಾರೆ. ಈ ಭಿಕ್ಷಾಟನೆಯಿಂದ ದವಸ-ಧಾನ್ಯಗಳನ್ನು ಕೆಲವೊಮ್ಮೆ ಸಾಕು ಪ್ರಾಣಿಗಳನ್ನು ಪಡೆಯುತ್ತಾರೆ. ಸಿದ್ಧರು ತಮ್ಮ ಹಿರಿಯರಿಂದ ಕೊಡಮಾಡಿದ ಹಕ್ಕು ಪತ್ರದಲ್ಲಿರುವ ಕ್ಷೇತ್ರಗಳಿಗೆ ಮಾತ್ರ ಭಿಕ್ಷಾಟನೆಗೆ ಹೋಗುವುದುಂಟು. ಕುಟುಂಬ ಜನರ ಸಂಖ್ಯೆ ಹೆಚ್ಚಾದಾಗ ಅನುಕೂಲಕ್ಕೆ ತಕ್ಕಂತೆ ಪತ್ರಗಳಲ್ಲಿ ಗ್ರಾಮಗಳನ್ನು ಒಡೆದು ಹಂಚಿಕೊಳ್ಳುತ್ತಾರೆ. ಇನ್ನು ಹೊಸ ಗ್ರಾಮಗಳನ್ನು ಹಕ್ಕು ಪತ್ರದಲ್ಲಿ ಸೇರಿಸಿಕೊಳ್ಳುವದುಂಟು. ಗ್ರಾಮಗಳನ್ನು ಭೂಮಿಯ ಫಲವತ್ತತೆಯ ಮೇಲೆ ಹಂಚಿಕೊಳ್ಳುವ ಇವರು ಸಮಸ್ಯೆಗಳನ್ನು ಸೃಷ್ಟಿಸಿಕೊಳ್ಳದೇ ತಮ್ಮ ತಮ್ಮಲ್ಲಿಯೇ ಬಗೆ ಹರಿಸಿಕೊಳ್ಳುವ ಜಾಣರಾಗಿದ್ದಾರೆ.

ಸುಡುಗಾಡು ಸಿದ್ಧರ ಹೆಂಗಳೆಯರು ಸಹ ಭಿಕ್ಷಾಟನೆ ಹೋಗುವುದುಂಟು. ಸಾಮಾನ್ಯವಾಗಿ ಕುಲಕಸುಬಿನ ಹರಕೆ ಭಿಕ್ಷಾಟನೆ ಕಾರ್ಯ ಪುರುಷನದ್ದಾಗಿದೆ. ಜೊತೆಗೆ ಸ್ತ್ರೀಯರು ಮನೆಯಲ್ಲಿ ಚಾಪೆ, ಕೌದಿ ಇತ್ಯಾದಿಗಳನ್ನು ಹೆಣೆದು ಊರಲ್ಲಿ ಮಾರಾಟ ಮಾಡುತ್ತಾರೆ. "ಸಾಮಾನ್ಯವಾಗಿ ಮಳೆಗಾಲದಲ್ಲಿ ಭಿಕ್ಷಾಟನೆಯನ್ನು ನಿಲ್ಲಿಸಿ ಮೀನು ಹಿಡಿಯುವ, ಬೇಟೆಯಾಡುವ ಕಾರ್ಯವನ್ನು"[೬] ಸುಡಗಾಡು ಸಿದ್ಧರು ಮಾಡುತ್ತಾರೆ.

ಕಷ್ಟಪಟ್ಟು ದುಡಿದು ತಿನ್ನದ ಸುಡಗಾಡು ಸಿದ್ಧರು ಭಿಕ್ಷಾಟನೆಯನ್ನು ತಮ್ಮ ಪ್ರಮುಖ ಕುಲಕಸಬೆಂದು ತಿಳಿದಿದ್ದಾರೆ. ಜೊತೆಗೆ ಮಂತ್ರ-ಯಂತ್ರ-ತಂತ್ರಗಳನ್ನು ಮಾಡುವದು, ಶಕುನ ಹೇಳುವುದು, ಕಲಾಪ್ರದರ್ಶನ ಮಾಡುವುದು, ಕಣ್‌ಕಟ್ಟ ಮಾಡಿ ಮನರಂಜನೆ ತೋರಿಸುವದು, ಜನಪದ ವೈದ್ಯ ನಡೆಸುವದು, ಬೇಟೆ, ವಶೀಕರಣ ಮುಂತಾದವುಗಳು ಅವರ ಉಪಕುಲಕಸಬುಗಳಾಗಿವೆ.

## ೧. ಬೇಟೆ :

ಭಿಕ್ಷಾಟನೆಯಲ್ಲಿ ಬಿಡುವು ಮಾಡಿಕೊಂಡು ಗುಡಸಲಿಗೆ ಒಬ್ಬರಂತೆ ಬೇಟೆಗೆ ಹೋಗುವ ಪದ್ಧತಿಯುಂಟು. "ಗಂಡು ಇಲ್ಲದ ಗುಡಿಸಲಿನಿಂದ ಒಂದು ಬಲೆಯನ್ನಾದರೂ ತೆಗೆದುಕೊಂಡು ಹೋಗುವ ಪರಿಪಾಠವುಂಟು"[೭] ಬೇಟೆಗೆ ಬೇಕಾಗುವ ಕೊಡಲಿ, ಭರ್ಜಿ, ತಲವಾರ, ಬಡಗಿ, ಚಾಕು, ಚೀಲ, ಬಲೆ, ಇತ್ಯಾದಿ ಸಲಕರಣೆಗಳ ಜೊತೆಗೆ ತಾವು ಸಾಕಿದ ನಾಯಿಗಳನ್ನು ಒಯ್ಯುವುದುಂಟು. ನಾಯಿಗಳು ಬೇಟೆಯಲ್ಲಿ ತುಂಬಾ ಸಹಾಯ ಮಾಡುತ್ತವೆ. ಸಾಮಾನ್ಯವಾಗಿ ಕಾಡುಕೋಣ, ಮಿಕಾ, ಮೊಲ, ಮೀನು ಇತ್ಯಾದಿಗಳನ್ನು ಬೇಟೆಯಾಡುತ್ತಾರೆ. ಈ ಹಿಂದೆ ಜಿಂಕೆ, ಚಿಗರೆಗಳ ಬೇಟೆಯನ್ನೂ ಸಹ ಆಡುತ್ತಿದ್ದರು.

"ಪಕ್ಷಿಯನ್ನು ಬೇಟೆಯಾಡುವಾಗ ಆಯುಕಟ್ಟಿನ ಸ್ಥಳದಲ್ಲಿ ಬಲೆಯನ್ನು ವ್ಯವಸ್ಥಿತವಾಗಿ ಕಟ್ಟಿ ಹಿಂದಿನ ಭಾಗದಲ್ಲಿ ತಾವು ಸಾಕಿದ ಹಕ್ಕಿಯನ್ನು ಬಿಡು ಪದ್ಧತಿಯುಂಟು. ಆ ಹಕ್ಕಿ ವಿಶಿಷ್ಟವಾದ ಶಬ್ದದ ಮೂಲಕ ಕೂಗಲು ಪ್ರಾರಂಭಿಸಿದಾಗ ಉಳಿದ ಪಕ್ಷಿಗಳು ಆ ಧ್ವನಿಯನ್ನು ಆಲಿಸಿ ಬರುತ್ತವೆ. ಅವುಗಳಿಗೆ ಎದರಿನ ಬಲೆ ಗಮನಕ್ಕೆ ಬಾರದೆ ಬಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತವೆ."[೮] ಮೊಲಕ್ಕಿಂತ ಸಣ್ಣ ಪ್ರಾಣಿಗಳನ್ನು ಬೇಟೆಯಾಡುವಾಗ ಬಲೆ ಹಾಗೂ ಸಹಾಯಕವಾಗಿ ನಾಯಿಗಳನ್ನು ಬಳಸಿಕೊಳ್ಳುವುದುಂಟು. ಮಿಕದಂತ ದೊಡ್ಡ ಪ್ರಾಣಿಗಳನ್ನು ಬೇಟೆಯಾಡುವಾಗ ಭರ್ಚಿ, ಬಾಣ ಮುಂತಾದವುಗಳನ್ನು ಪ್ರಯೋಗ ಮಾಡುತ್ತಾರೆ. ರಾತ್ರಿ ವೇಳೆಯಲ್ಲಿಯೇ ಇವುಗಳನ್ನು ಬೇಟೆಯಾಡುತ್ತಾರೆ.

ಸುಡಗಾಡು ಸಿದ್ಧರು ಎಂದಿಗೂ ಸತ್ತ ಪ್ರಾಣಿಗಳ ಮಾಂಸವನ್ನು ತಿನ್ನುವುದಿಲ್ಲ. ಅಂತಹವುಗಳನ್ನು ತಮ್ಮ ನಾಯಿಗಳಿಗೆ ಬಿಟ್ಟು ಬಿಡುತ್ತಾರೆ. ಸತ್ತ ಪ್ರಾಣಿಯ ಮಾಂಸ ತಿಂದರೆ ಆತನನ್ನು ಕುಲಪಂಚಾಯತಿಯಿಂದ ಶಿಕ್ಷಿಸುತ್ತಾರೆ. ಪ್ರಾಯಶಃ ಎಷ್ಟೋ ಸಲ ಸತ್ತ ಪ್ರಾಣಿ ಯಾವ ಕಾರಣದಿಂದ ಸತ್ತಿರುವುದೋ ತಿಳಿಯಲಾರದು. ಅದನ್ನು

ಬಳಸಿಕೊಂಡು ಬರುವ ಅಪಾಯಗಳಿಂದ ತಪ್ಪಿಸಿಕೊಳ್ಳಲು ಮತ್ತು ತಮ್ಮ ಜೊತೆಗಿನ ನಾಯಿಗಳ ಹೊಟ್ಟೆ ತುಂಬ ಆಹಾರ ತಿನ್ನಲೆಂಬ ಕಾರಣದಿಂದ ಸತ್ತ ಪ್ರಾಣಿಯ ಮಾಂಸವನ್ನು ತಿನ್ನಲಾರರು. ಹೀಗಾಗಿ ಸಿದ್ಧರು ಜೀವಂತ ಪ್ರಾಣಿ-ಪಕ್ಷಿಗಳನ್ನು ಹಿಡಿದು ತಂದು ಪಾಲು ಹಾಕಿಕೊಂಡು ಯಾವುದೇ ರೀತಿಯ ತಕರಾರಿಲ್ಲದೇ ಬದುಕನ್ನೂ ಸಾಗಿಸುತ್ತಾರೆ. ಈ ಬೇಟೆಗೆ ಶ್ರಾವಣಮಾಸ, ಶನಿವಾರ ಹಾಗೂ ಮಂಗಳವಾರಗಳಂದು ನಿಷೇಧವು ಅವರಲ್ಲುಂಟು.

ಸರಕಾರದ ಕಠಿಣ ಕಾನೂನುಗಳಿಂದ ಈಗ ಬೇಟೆಯನ್ನು ನಿಲ್ಲಿಸಿದ್ದಾರೆ. ಅಪರಾಧಿಗಳಾಗಿ ಮಾನ-ಮರ್ಯಾದೆಗಳನ್ನು ಕಳೆದುಕೊಳ್ಳಲು ಸುಡಗಾಡು ಸಿದ್ಧರು ಸಿದ್ಧರಿಲ್ಲ. ಅವರಿಗೂ ಕಾನೂನು ಮನವರಿಕೆಯಾಗಿದೆ. ಆದರೂ ಕೆಲವೊಮ್ಮೆ ಅಲ್ಲಲ್ಲಿ ಬುರ್ಲಿ, ಕವಜಗ, ಮೀನು, ಉಡ ಮುಂತಾದ ಕೆಲವೇ ಪ್ರಾಣಿ-ಪಕ್ಷಿಗಳನ್ನು ಬೇಟೆಯಾಡುವ ಜನರುಂಟು. ಒಟ್ಟಾರೆ ಬೇಟೆ ಪದ್ಧತಿಯಿಂದ ಸುಡಗಾಡು ಸಿದ್ಧರು ಹಿಂದೆ ಸರಿಯುತ್ತಿದ್ದಾರೆ/ಸರಿದಿದ್ದಾರೆ ಎಂದರೆ ತಪ್ಪಾಗಲಾರದು.

## ೨. ನಾಟಿ ವೈದ್ಯ :

ನಿಸರ್ಗದ ಮಡಿಲಲ್ಲಿ ಬೆಳೆದ ಸುಡಗಾಡು ಸಿದ್ಧರು ಗಿಡಮೂಲಿಕೆಗಳ ಔಷಧೀಯ ಗುಣಗಳನ್ನು ಬಲ್ಲವರು. ತಮ್ಮ ರೋಗರುಜಿನಗಳಿಗಷ್ಟೇ ಅಲ್ಲದೇ ತಾವಾಡುವ ಊರಿನ ಜನರಿಗೂ ಈ ಔಷದೋಪಚಾರವನ್ನೂ ನೀಡಿ ಅವರ ರೋಗ ರುಜಿನಗಳನ್ನು ಗುಣಪಡಿಸುತ್ತಾರೆ. ಕುಮಾರಸ್ವಾಮಿ ಗುಡ್ಡ, ಕಪ್ಪತಗುಡ್ಡ, ಸಿರ್ಸಿ ಬೆಟ್ಟಗಳಲ್ಲಿ ಹಾಗೂ ಇತರೆ ಮೂಲಗಳಿಂದ ಔಷಧೀಯ ಸಸ್ಯಗಳನ್ನು ತಂದು ತಮ್ಮ ಜೋಳಿಗೆಯಲ್ಲಿ ಇಟ್ಟುಕೊಂಡಿರುತ್ತಾರೆ. ಜನರ ರೋಗ ರುಜಿನಗಳಾದ ಹೊಟ್ಟೆ ಕಡಿತ, ದಡಾರದ ಕೆಮ್ಮು, ಕುರ, ಹುಣ್ಣು, ಕಾಮಾಲೆ, ಕಿವಿ ಸೋರುವದು, ಮೂಲವ್ಯಾಧಿ, ಇಸುಬು, ಸಿಹಿಮೂತ್ರ ರೋಗ, ನಾರು, ಹೆಂಗಸಿಗಾಗುವ ಮುಟ್ಟು, ಸೆರಗು ರೋಗ ಹಾಗೂ ಹಂದಿ, ನಾಯಿ, ಚೇಳು, ಹಾವು ಮುಂತಾದ ಪ್ರಾಣಿಗಳು ಕಚ್ಚಿದರೆ ಔಷಧಿಗಳನ್ನು ಕೊಡುವುದುಂಟು. ಅನಾರೋಗ್ಯ ಸಾಕು ಪ್ರಾಣಿಗಳಿಗೂ ಸಹ ಔಷಧಿಯನ್ನು ಕೊಟ್ಟು ಗುಣಪಡಿಸುತ್ತಾರೆ. ಇವುಗಳಿಗೆ ಪ್ರತಿಯಾಗಿ ಅವರಿಂದ ದವಸ-ಧಾನ್ಯ ಹಾಗೂ ಕುರಿ, ಆಕಳು, ಕೋಳಿ ಇತ್ಯಾದಿ ಪ್ರಾಣಿಗಳನ್ನು ಪಡೆದುಕೊಳ್ಳುತ್ತಾರೆ. ಈ ನಾಟಿ ವೈದ್ಯದಲ್ಲಿ ರೋಗಿಗೆ ಬಲವಾದ ನಂಬಿಕೆ ಬೇಕು. ಇಂಥ ನಂಬಿಕೆಯನ್ನು ಜನಪದರು ಹೊಂದಿರುತ್ತಾರೆ. ಹೀಗಾಗಿ ಬಹು ಸಂದರ್ಭದಲ್ಲಿ ಸುಡಗಾಡು ಸಿದ್ಧರು ಯಶಸ್ವಿಯಾಗುತ್ತಾರೆ. ಸುಡಗಾಡು ಸಿದ್ಧರು ತಮ್ಮ ರೋಗಗಳಿಗಂತು ತಾವೇ ಔಷಧಿಯನ್ನು ಮಾಡಿಕೊಳ್ಳುತ್ತಾರೆ. ಕೇವಲ ಅನಿವಾರ್ಯವೆನಿಸಿದಾಗ ಮಾತ್ರ ಅವರು ಆಸ್ಪತ್ರೆಗಳಿಗೆ ಹೋಗುತ್ತಾರೆಂದರೂ ಅದರ ಪ್ರಮಾಣ ಕಡಿಮೆಯಂದೇ ಹೇಳಬಹುದು.

## ೩. ಶಕುನ :

ಸುಡಗಾಡ ಸಿದ್ಧರು ಸ್ಮಶಾನದಲ್ಲಿ ರಾತ್ರಿ ಗೂಗಿ ಹಾಗೂ ಹಾಲಕ್ಕಿಗಳ ಒದರುವಿಕೆಯ ಮೇಲಿಂದ ಊರಿನ ಶಕುನವನ್ನು ಹೇಳುತ್ತಾರಲ್ಲದೆ, ತಮ್ಮ ಜೋಳಿಗೆಯಲ್ಲಿಟ್ಟುಕೊಂಡಿರುವ ಶಕುನದ ಹೊತ್ತಿಗೆಯಿಂದ ಹಾಗೂ ಶಕುನಕ್ಕೆ ಸಂಬಂಧಿಸಿದ ಚಿತ್ರಗಳ ಮೂಲಕ ಶಕುನ ಹೇಳುವ ಪರಿಪಾಠವುಂಟು. ಭಿಕ್ಷಾಟನೆ ಸಂದರ್ಭದಲ್ಲೂ ಹಾಗೂ ಭಿಕ್ಷಾಟನೆಯ ನಂತರವೂ ಒಂದೆಡೆಗೆ ಕುಳಿತು ಶಕುನ ಹೇಳುತ್ತಾರೆ. ಅಶುಭ ಶಕುನಗಳು ಬಂದ ವ್ಯಕ್ತಿಗಳಿಗೆ ಪರಿಹಾರವನ್ನೂ ಸೂಚಿಸುತ್ತಾರೆ. ಪ್ರತಿಯಾಗಿ ಅವರೆಲ್ಲರಿಂದ ಅವರ ಶಕ್ತಾನುಸಾರ ದವಸ-ಧಾನ್ಯ, ಸಾಕುಪ್ರಾಣಿ ಇತ್ಯಾದಿಗಳನ್ನು ಪಡೆದು ಬದುಕನ್ನು ಸಾಗಿಸುತ್ತಾರೆ. ಸಿದ್ಧರ ಶಕುನದ ಬಗ್ಗೆ ಕೆಲವು ಪ್ರದೇಶದಲ್ಲಿ ಜನರಿಗೆ ಇಂದಿಗೂ ಬಲವಾದ ನಂಬಿಕೆಯುಂಟು.

## ೪. ಯಂತ್ರ-ಮಂತ್ರ ತಂತ್ರ ವಿಧಾನಗಳು :

ಅಮವಾಸ್ಯೆ ಹಾಗೂ ಹುಣ್ಣಿಮೆಗಳಂದು ಸುಡುಗಾಡಿನ ನಿರ್ಜನ ಸ್ಥಳದಲ್ಲಿ ಕುಳಿತು ವಿಶಿಷ್ಟ ಸಿದ್ಧಿಯನ್ನು ಸಾಧಿಸಿಕೊಂಡ ಇವರು ತಾಮ್ರದ ತಗಡಿನ ಅಥವಾ ಹಾಳೆಯ ಮೇಲೆ ಯಂತ್ರ ಮತ್ತು ಮಂತ್ರಗಳನ್ನು ಬರೆದು ತಮ್ಮ ಸಾಧನೆಯ ಶಕ್ತಿಯನ್ನು ಮಂತ್ರದ ಮೂಲಕ ಅದರಲ್ಲಿ ಹರಸಿ ರೋಗಿಯ ಶರೀರಕ್ಕೆ ತಾಯಿತ ಕಟ್ಟುವ ಪದ್ಧತಿಯುಂಟು. ಕೆಲವೊಮ್ಮೆ ಕೇವಲ ಮಂತ್ರವನ್ನು ಪಠಿಸಿ ವಿಶಿಷ್ಟ ಆಚರಣೆಯನ್ನು ಮಾಡುವದರ ಮೂಲಕ ವ್ಯಕ್ತಿಯ ರೋಗಗಳನ್ನು ಗುಣಪಡಿಸುವುದುಂಟು. ಉದಾ : ಸಮಯಕ್ಕೆ ಸರಿಯಾಗಿ ಹೆರಿಗೆ ಆಗದಿದ್ದರೆ "ತಾಮ್ರದ ಚರಿಗೆಯಲ್ಲಿಯ ನೀರನ್ನು ಮಂತ್ರಿಸಿ ಗರ್ಭಿಣಿಗೆ ಕುಡಿಸುತ್ತಾರೆ. ಅವಳು ಕುಡಿದು ಹೆಚ್ಚುಳಿದ ನೀರನ್ನು ಗುಡಿಸಲಿನ ಮೇಲೆ ಚೆಲ್ಲುತ್ತಾರೆ. ಹೀಗೆ ಚೆಲ್ಲಿದ ನೀರು ಜಾರಿ ಭೂಮಿಗೆ ಮುಟ್ಟುವಷ್ಟರಲ್ಲಿ ಗರ್ಭಿಣಿ ಮಗುವಿಗೆ ಜನನ ನೀಡುತ್ತಾಳೆಂಬುದು ಅವರ ನಂಬುಕೆಯಾಗಿದೆ."[1] ವಿಜ್ಞಾನ ಉಗಮದ ಮೂಲವಾದ ಯಂತ್ರ-ಮಂತ್ರ-ತಂತ್ರಗಳಲ್ಲಿ ನಂಬುಗೆಯನಿಟ್ಟು ಜನಪದರು ಮೊನ್ನೆ ಮೊನ್ನೆಯವರೆಗೂ ದಟ್ಟವಾಗಿ ಇಂಥ ಆಚರಣೆಗಳನ್ನು ಆಚರಿಸುತ್ತಾ ಬಂದಿದ್ದರೂ ವಿಜ್ಞಾನ ಬೆಳೆದಂತೆ ಅವರ ಈ ವಿಶಿಷ್ಟ ಶಕ್ತಿ ಬಗ್ಗೆ ಜನರ ನಂಬಿಕೆ ಕಡಿಮೆಯಾಗಿದೆ. ಬಳಕೆಯೂ ನಿಂತಿದೆ.

## ೫. ಭಾನಾಮತಿ :

ಭಾರತ ಮತ್ತು ಇತರ ಅನೇಕ ದೇಶಗಳಲ್ಲಿ ಪ್ರಾಚೀನ ಕಾಲದಿಂದಲೂ ಮಾಟ, ಮಂತ್ರ, ತಂತ್ರ ವಿದ್ಯೆಗಳನ್ನು ಕರಗತ ಮಾಡುವ ಪರಿಯನ್ನು ಕಾಣುತ್ತೇವೆ. ಸುಡಗಾಡದಲ್ಲಿ ಏಕಾಂಗಿಯಾಗಿ ಹಾಗೂ ಗುರುವಿನ ಸಹಾಯದಿಂದ ಇಂಥ ವಿದ್ಯೆಯನ್ನು ಕಲಿತು ಪ್ರಯೋಗಿಸುವದುಂಟು. ಹೆಚ್ಚಾಗಿ ಈ ಭಾನಾಮತಿ ವಿದ್ಯೆಯ ತನಗಾಗದವರ ಮೇಲೆ ಕೇಡನ್ನುಂಟು ಮಾಡಲು ಬಳಕೆಗೊಳ್ಳುತ್ತದೆ. ಭಾನಾಮತಿಗೆ ಒಳಗಾದ ವ್ಯಕ್ತಿಯು ಊಟ

ತಿಂಡಿ, ನಿದ್ರೆ ಇಲ್ಲದೆ ಸೊರಗಿ ಸಾಯುವಂತಾಗುತ್ತಾನೆ. ಈ ಅತೀಮಾನುಷ್ಯ ವಿದ್ಯೆಯನ್ನು ತಡೆಗಟ್ಟಲು ಅಥವಾ ಮಾಡಿದ ಈ ಮಾಟವನ್ನು ದೂರ ಮಾಡಲು ಸಹ ಈ ವಿದ್ಯೆ ಬಳಕೆಗೊಳ್ಳುತ್ತದೆ. ಅಲ್ಲದೆ ಸ್ತ್ರೀ ವಶೀಕರಣ, ಭೂತ ವಶೀಕರಣವನ್ನು ಈ ಮಾಟ ಮಂತ್ರದಿಂದ ಮಾಡುವ ಮತ್ತು ಭೂತ ಬಡೆದವನನ್ನು ಬಿಡಿಸುವ, ಸ್ತ್ರೀ ವಶೀಕರಣದಿಂದ ಸ್ತ್ರೀಯನ್ನು ಮುಕ್ತ ಮಾಡುವ ಅನೇಕ ಆಚರಣೆಗಳನ್ನು ಸುಡುಗಾಡ ಸಿದ್ಧರು ಮಾಡುತ್ತಿದ್ದರು. ಆದರೆ ಇಂದು ಇವುಗಳ ನಂಬುಗೆ ಕಡಿಮೆಯಾಗಿ, ಈ ನಿಟ್ಟಿನ ಕಾರ್ಯವೂ ನಿಲುಗಡೆಯಾಗುತ್ತ ಸಾಗಿದೆ. ಇಂಥ ಕಾರ್ಯವನ್ನು ಮಾಡುವವನು ಸಮಾಜದ ಕಣ್ಣಲ್ಲಿ ಅಪರಾಧಿ ಯಾಗುತ್ತಿರುವದರಿಂದ ಮಾಟ ಮಾಡಲು ಹಿಂಜರಿಯುತ್ತಿದ್ದಾರೆ. ಈ ಕಾರ್ಯ ಹೀಗಾಗಿ ನಿಂತಿದೆ.

ಆಧುನಿಕ ಬದುಕಿನಲ್ಲಿ ಕೇವಲ ಭಿಕ್ಷಾಟನೆಯಿಂದ ಜೀವನ ಹೊರೆಯುವದು ಕಷ್ಟದ ಕೆಲಸ. ಜನಪದ ಸಮಾಜ ಬದಲಾಗಿದೆ. ಕೃಷಿಕ ಹೊಟ್ಟೆಪಾಡಿನ ಕೃಷಿಯನ್ನು ತೊರೆದು ಆರ್ಥಿಕಾವಲಂಬಿ ಬೆಳೆಯನ್ನು ಬೆಳೆಯುತ್ತಿದ್ದಾನೆ. ಹಣ ಸಂಗ್ರಹಕ್ಕೆ ಹಾತೊರೆಯುತ್ತಿದ್ದಾನೆ. ಹೀಗಾಗಿ ಭಿಕ್ಷೆ ನೀಡಿ ಪರೋಪಕಾರ ಮಾಡಬೇಕೆಂಬ ಗುಣ ಆತನಿಂದ ಮಾಯವಾಗಿದೆ. ಜೊತೆಗೆ 'ದುಡಿದು ಬದುಕು' ಎಂದು ಮೋತಿಯ ಮೇಲೆ ಬಡಿದ ಹಾಗೆ ಭಿಕ್ಷೆಗೆ ಹೋದವರಿಗೆ ಹಿಯಾಳಿಸುತ್ತಿದ್ದಾನೆ. ವೈಜ್ಞಾನಿಕ ಆವಿಷ್ಕಾರಗಳಿಂದ ಮಂತ್ರ-ತಂತ್ರಗಳ ನಂಬಿಕೆ ಹಾಗೂ ವೈದ್ಯಕೀಯ ಸೌಲಭ್ಯಗಳಿಂದ ನಾಟಿ ವೈದ್ಯಗಳ ಬಳಕೆ ನಿಲ್ಲುತ್ತಿದೆ. ನಾಟಿ ವೈದ್ಯದ ಬಳಕೆ ಇದ್ದರೂ ಅದು ವ್ಯವಸ್ಥಿತ ಜ್ಞಾನವನ್ನು ಬಯಸುತ್ತಿದೆ ಮತ್ತು ಅದರಿಂದ ಉಪಜೀವನವು ಅಸಾಧ್ಯ. ಹೀಗೆ ಸುಡುಗಾಡ ಸಿದ್ಧರು ನಂಬಿಕೊಂಡಿದ್ದ ಉಪಕಸುಬುಗಳು ನಿಲುಗಡೆಯನ್ನು ಹೊಂದುತ್ತಿವೆ. ಇವೆಲ್ಲದರ ಫಲವಾಗಿ ಬದಲಾದ ಸಮಾಜಕ್ಕೆ ಅನುಗುಣವಾಗಿ ಸುಡುಗಾಡ ಸಿಧ್ಧರು ತಮ್ಮ ಮೂಲ ಕುಲಕಸುಬಿನಿಂದ ಹೊರಬರಲಿಕ್ಕೆ ಹತ್ತಿದ್ದಾರೆ. ಅವರು ಶ್ರಮಜೀವಿಗಳಾಗಿ ಬದುಕಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಕಡುಬಡುವರಾದ ಸುಡಗಾಡ ಸಿದ್ಧರಲ್ಲೇ ಕೆಲವರು ತಮ್ಮ ಮೂಲ ಕಸಬನ್ನು ಮಾಡುತ್ತಿದ್ದರೆ, ಇನ್ನು ಕೆಲವರು ಬೇರೆ ವೃತ್ತಿಗಳನ್ನು ಮಾಡುತ್ತಿದ್ದಾರೆ. ಸಾಮಾನ್ಯವಾಗಿ ಕೆಲವರು ಕೂಲಿ ಮಾಡಿದರೆ ಕೆಲವರು ಗೌಂಡಿಗಳಾಗಿ ಮನೆಕಟ್ಟುವ ವೃತ್ತಿಗೆ ಅಂಟಕೊಂಡಿದ್ದಾರೆ. ಕೆಲವರು ದನ ಸಾಕಾಣಿಕೆಗಾರರಾಗಿ, ಸ್ಟೇಷನರಿ ಮಾರಾಟಗಾರರಾಗಿ, ಪ್ರಿಂಟಾದ ಕಲರ್ ಫೋಟೊ ಚಿತ್ರಗಳ ಮಾರಾಟಗಾರರಾಗಿ, ಚಾವಳ್ಳಿ (ಹಿರೇಕೆರೂರ ತಾಲೂಕ) ವೆಂಕಟಾಪೂರ (ಧಾರವಾಡ ತಾಲೂಕ) ಕೂಡ್ಲಿಗೆ (ಹಾನಗಲ್ಲ ತಾಲೂಕ) ಹಂಪಾಪೂರ ಕಲಕೇರಿ ತಾಳ ಕನಕಾಪುರ (ಕೊಪ್ಪಳ ತಾಲೂಕ) ಮುಂತಾದ ಗ್ರಾಮಗಳಲ್ಲಿ ಚಿಕ್ಕ ಹಿಡುವಳಿ ಕೃಷಿಕರಾಗಿ ಬದುಕು ಮಾಡುತ್ತಿದ್ದಾರೆ. ಸ್ತ್ರೀಯರು ಕೃಷಿಗೆ ಸಹಾಯಕರಾಗಿ, ಕೂಲಿಗಳಾಗಿ ಇನ್ನೂ ಕೆಲವರು ಜಾತ್ರೆ-ಹಬ್ಬಗಳ ಸಂದರ್ಭಗಳಲ್ಲಿ ಹಾಗೂ ಹಳ್ಳಿಗಳಿಗೆ ಹೋಗಿ ಮಕ್ಕಳ ಆಟಿಕೆಯ ಸಾಮಾನುಗಳನ್ನು ಮಾರಾಟ ಮಾಡಿ

ಜೀವನ ನಡೆಸುತ್ತಿದ್ದಾರೆ. ಸುಡಗಾಡ ಸಿದ್ಧರಲ್ಲಿ ಖಾಸಗಿ-ಸರಕಾರಿ ನೌಕರದಾರರ ಸಂಖ್ಯೆ ಅತ್ಯಂತ ಕಡಿಮೆ. ಇಡೀ ಕರ್ನಾಟಕ ತಿರುಗಿದರೂ ಬೆರಳು ಮೇಲೆ ಎಣಿಸುವಷ್ಟು ನೌಕರರಿದ್ದಾರೆ. ಶಿಕ್ಷಣ ಪಡೆದ ಜನರ ಸಂಖ್ಯೆಯೂ ಅತ್ಯಂತ ಕಡಿಮೆ, ಆದರೆ ಇತ್ತೀಚಿಗೆ ಶಿಕ್ಷಣಕ್ಕೆ ಮಹತ್ವ ಕೊಟ್ಟು ಮಕ್ಕಳನ್ನು ಶಾಲೆಗೆ ಕಳುಹಿಸುತ್ತಿರುವುದು ಸಂತಸದ ಸಂಗತಿ. ಧಾರವಾಡ, ಗದಗ, ಕೊಪ್ಪಳದಲ್ಲಿ ವಾಸಿಸುತ್ತಿರುವ ಕೆಲವು ಸುಡಗಾಡ ಸಿದ್ಧರು ಸ್ಟೇಷನರಿ ವಸ್ತುಗಳನ್ನು ಬಾಂಬೆ ಪಟ್ಟಣದಿಂದ ತಂದು ವ್ಯಾಪಾರಿ ಲಾಭದಿಂದ ಅವರ ಸಮುದಾಯದಲ್ಲೇ ಸ್ವಲ್ಪ ಮೇಲ್ಮಟ್ಟದವರೆನಿಸಿಕೊಂಡಿದ್ದಾರೆ. ಆಧುನಿಕ ಬದುಕಿನಲ್ಲಿ ಈ ಸಮುದಾಯಗಳು ಎಷ್ಟೇ ಗಳಿಸಿದ್ದರೂ ಅಂದು ದುಡಿದು ತಂದು ಅಂದೇ ತಿನ್ನಬೇಕು. ಬಹಳವೆಂದರೆ ಆ ದುಡಿಮೆಯಿಂದ ೨-೩ ದಿನಗಳನ್ನು ಕಳೆಯಬಹುದು. ಮೂರನೆಯ ದಿನಕ್ಕೆ ಹೊಟ್ಟೆ ಉಪಜೀವನಕ್ಕಾಗಿ ದುಡಿಯಲು ಹೋಗಲೇಬೇಕು.

ಆಧುನಿಕ ಬದುಕಿಗೆ ಹೊಂದಿಕೊಂಡು ದುಡಿಯಬೇಕು, ಶ್ರಮಜೀವಿಯಾಗ ಬೇಕೆನ್ನುವ ಸುಡಗಾಡ ಸಿದ್ಧರಿಗೆ ಸರಕಾರ ಅವರ ಸಾಮರ್ಥ್ಯಕ್ಕೆ ಅನುಗುಣವಾಗಿ ವೃತ್ತಿಯನ್ನು ನೀಡಿದೆ (ಕೆಲವರಿಗೆ ಭೂಮಿಯನ್ನು ಕೊಟ್ಟು ಕೃಷಿಮಾಡಲಿಕ್ಕೆ ಹಚ್ಚಿದೆ) ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿ ಅವರನ್ನು ಮುಖ್ಯವಾಹಿನಿಗೆ ತರುವ ಜವಾಬ್ದಾರಿಯನ್ನು ಹೊರಬೇಕಾಗಿದೆ. ಕೊಪ್ಪಳ ತಾಲೂಕಿನಲ್ಲಿ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ. ಸರಕಾರಿ-ಅರೆಸರಕಾರಿ ನೌಕರಿಮಾಡುತ್ತಿದ್ದಾರೆ. ಕಾಯಿಪಲ್ಲೆ ವ್ಯಾಪಾರಾಟದಲ್ಲಿ ಮಹಿಳೆ-ಪುರುಷರಿಬ್ಬರೂ ತೊಡಗಿರುವುದು ಕಂಡುಬರುತ್ತದೆ. ಕೊಪ್ಪಳದ ಬೀದಿ ಬದಿಯಲ್ಲಿ ಶಕುನ ಹೇಳುವ ಮಂತ್ರ ತಂತ್ರ ಮಾಡುವ, ನಾಟಿ ಔಷಧ ನೀಡುವವರು ಇತ್ತೀಚಿನವರೆಗೆ ಕಂಡುಬರುತ್ತಿದ್ದಾರೆ. (ಸಂ.)

◆

---

ಅಡಿಟಿಪ್ಪಣಿಗಳು :

* ಈ ಲೇಖನಕ್ಕೆ ಡಾ. ಟಿ. ಎಂ. ಭಾಸ್ಕರ್‌ರವರ ಸುಡುಗಾಡು ಸಿದ್ಧರು – ಒಂದು ಸಾಂಸ್ಕೃತಿಕ ಅಧ್ಯಯನ ಗ್ರಂಥವನ್ನು ಯಥೇಚ್ಛವಾಗಿ ಬಳಸಿಕೊಳ್ಳಲಾಗಿದೆ.

೧. ಡಾ. ಟಿ. ಎಂ. ಭಾಸ್ಕರ್‌ರವರು : ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ ಪು-೧೩೪

೨. ಡಾ. ಬಸವರಾಜ ನೆಲ್ಲಿಸರ : ಸುಡಗಾಡು ಸಿದ್ಧರು,

೩. ಡಾ. ಪಿ. ಕೆ. ಖಂಡೋಬಾ, : ಸುಡಗಾಡು ಸಿದ್ಧರ ಸಂಸ್ಕೃತಿ ಪು-೨೧

೪. ಡಾ. ಟಿ. ಎಂ. ಭಾಸ್ಕರ್‌ರವರು : ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ. ಪುಟ-೧೪೧

೫. ಡಾ. ಟಿ. ಎಂ. ಭಾಸ್ಕರ್‌ರವರು : ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ. ಪುಟ-೧೪೧

೬. ಡಾ. ಟಿ. ಎಂ. ಭಾಸ್ಕರ್‌ರವರು : ಸುಡುಗಾಡು ಸಿದ್ಧರು ಒಂದು ಸಾಂಸ್ಕೃತಿಕ ಅಧ್ಯಯನ. ಪುಟ-೧೩೪

# ಗೋಷ್ಠಿ : ೨

# ಸುಡುಗಾಡು ಸಿದ್ಧರ ಮಹಿಳಾ ಸಂವೇದನೆಗಳು

ಡಾ. ಟಿ. ಎಂ. ಭಾಸ್ಕರ್

ನಾಡು, ನುಡಿ, ಭಾಷೆ ಮತ್ತು ನಗರೀಕರಣದ ಜನಜೀವನಕ್ಕೆ ಒಗ್ಗಿಕೊಂಡಿರುವ ಜನಸಮುದಾಯದ ಮಹಿಳೆಯರು ಹೆಚ್ಚು ಬಾಹ್ಯ ವಿಷಯ, ಅಂಶಗಳಲ್ಲಿ ಸಂಬಂಧಿಸಿದಂತೆ ಸಂವೇದನ ಶೀಲರಾಗಿರುವ ಆದಿವಾಸಿಗಳು, ಅಲೆಮಾರಿಗಳು ಸಂಚಾರಿ ಜನಾಂಗದಲ್ಲಿಯ ಮಹಿಳೆಯರು ಬಾಹ್ಯವೂ ಅಲ್ಲದೆ ಆಂತರಿಕವೂ ಅಲ್ಲದ ರೀತಿಯಲ್ಲಿ ಹೇಗೆ ತಮ್ಮ ಸಂವೇದನಶೀಲ ಮನಸ್ಸನ್ನು ತೊಡಗಿಸಿಕೊಂಡರೆಂಬುದು ಇಲ್ಲಿ ಮುಖ್ಯವಾಗುತ್ತದೆ. ತಾವು ನಂಬಿಕೊಂಡಿರುವ ಧರ್ಮ–ಕರ್ಮ–ಆಚಾರ–ವಿಚಾರ, ದೇವರು–ದಿಂಡಿರು, ಭೂತ–ಪ್ರೇತ ಕುಲಕಸುಬಗಳಿಗೆ ಸಂಬಂಧಿಸಿದಂತೆ ತಮ್ಮ ಅನುಭವದ ಹಿನ್ನೆಯಲ್ಲಿ ಎಂತಹ ಅನುಭವಗಳು ಮನದಾಳದಲ್ಲಿ ನೆಲೆನಿಂತು, ಹೊರಹೊಮ್ಮಿದವು ಮತ್ತು ಅವುಗಳ ಮೊತ್ತದ ಫಲಿತವನ್ನು ವ್ಯವಹಾರಿಕ ದೃಷ್ಟಿಕೋನ ಬೆಳೆಸಿಕೊಳ್ಳುವುದಕ್ಕೆ ಸಹಾಯಕಾರಿಯಾಯಿತು ಎಂಬಿತ್ಯಾದಿ ವಿಷಯವನ್ನು ಸುಡುಗಾಡು ಸಿದ್ಧರ ಮಹಿಳೆಯರು ಸಂವೇದನಗಳಲ್ಲಿ ಶೋಧಿಸಬಹುದಾಗಿದೆ.

ಸದಾ ಸಂಚಾರದಲ್ಲಿಯೇ ಮಹಿಳೆಯರನ್ನು ತೊಡಗಿಸಿಕೊಂಡು ಬಂದಿರುವ ಸುಡುಗಾಡು ಸಿದ್ಧರ ಪುರುಷರ ವರ್ಷಾವರ್ತಿ ಹನ್ನೆರಡು ತಿಂಗಳುಗಳ ಕಾಲ ಸಂಚಾರದಲ್ಲಿಯೇ ಇರುವಂತೆ ಮಾಡಿರುವುದರಿಂದ ಸಿದ್ಧರ ಗಂಡಸರಂತೆ ಹೆಂಗಸರೂ ಸಹ ಶ್ರೀಮಂತ ಜೀವನಾನುಭವವನ್ನು ಹೊಂದಿದವರಾಗಿದ್ದಾರೆಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ಪ್ರದೇಶದಿಂದ ಪ್ರದೇಶಕ್ಕೆ ಊರಿನಿಂದ ಊರಿಗೆ ಭಿಕ್ಷಾಟನೆಗೆ ಹೋಗುವಾಗ ಕಾಡು, ಗುಹೆ, ಬೆಟ್ಟ, ಹೊಲ, ಗದ್ದೆ ದಾಟುತ್ತ ಮಳೆ, ಗಾಳಿ, ಚಳಿಗೆ ತಮ್ಮನ್ನಲ್ಲದೆ ಇಡೀ ಕುಟುಂಬವೇ ನಿಸರ್ಗದ ಮಡಿಲಿನಲ್ಲಿ ಒಡ್ಡಿರುವುದರ ಪ್ರತಿಫಲವಾಗಿ ನೂರಾರು ಲೆಕ್ಕವಿಲ್ಲದಷ್ಟು ಅನುಭವಗಳನ್ನು ಸೃಷ್ಟಿ ಮಾಡಿಕೊಂಡರು. ಹೀಗಾಗಿ ಅವೆಲ್ಲವುದರ ಬುನಾದಿಯ ಮೇಲೆ ಅನೇಕ ಕುತುಹಲಕಾರಿ ರೋಮಾಂಚನವನ್ನುಂಟು ಮಾಡುವ ರೋಚಕ ವಿಚಾರಗಳನ್ನು ಅವರ ಮನದಾಳದಲ್ಲಿ ಮನೆಮಾಡಿಕೊಂಡಿದ್ದೂ ಅವಕಾಶ ದೊರೆತಾಗ ಮಾತ್ರ ಗರಿಗೆದರಿ ಹೊರ ಬಂದಿರುವುದು ಬಹಳ ಕಡಿಮೆಯಾದರೂ ಅವು

ಮಹತ್ವಪೂರ್ಣವಾಗಿರುವುಗಳೇ ಆಗಿವೆ ಎಂಬುದರಲ್ಲಿ ಎರಡು ಮಾತಿಲ್ಲ. ಈ ಹಿನ್ನೆಲೆಯಲ್ಲಿ ಸಿದ್ದರ ಮಹಿಳೆಯರ ಸಂವೇದನೆಗಳು ಗಮನ ಸೆಳೆಯುತ್ತವೆ.

**ಜನನ ಮರಣ ಸಂಸ್ಕಾರಗಳು ಸಂಬಂಧಿಸಿದ ಮಹಿಳಾ ಸಂವೇದನೆಗಳು :**

ಮಾನವ ಜೀವನದಲ್ಲಿಯ ಪ್ರಮುಖ ಘಟ್ಟಗಳಾದ ಜನನ ಮರಣ ಸಂಸ್ಕಾರಗಳು ಮತ್ತು ಮದುವೆ ಸಂಪ್ರದಾಯ ಆಚರಣೆಗಳಿಗೆ ಸಂಬಂಧಿಸಿದಂತೆ ನೂರಾರು ನಂಬಿಕೆಗಳು ಆಚರಣೆಗಳು ಕ್ರಿಯಾ ವಿಧಿ ವಿಧಾನಗಳು ಮಾಟ ಮಂತ್ರ ತಂತ್ರಗಳು ರೂಢಿ ಸಂಪ್ರದಾಯ ಪದ್ಧತಿಗಳು ಕುಲದೇವತಾ ಹರಕೆಗಳು ಪ್ರತಿಯೊಂದು ಜನಾಂಗ ಜಾತಿ ಉಪಜಾತಿ ಬುಡಕಟ್ಟು ಅಲೆಮಾರಿ ಜನ ಸಮುದಾಯಗಳಲ್ಲಿ ಹಾಸುಹೊಕ್ಕಾಗಿರುತ್ತವೆ. ಇಂತಹ ರೂಢಿ ಸಂಪ್ರದಾಯ ಆಚರಣೆಗಳಿಂದ ಸುಡುಗಾಡು ಸಿದ್ದರ ಸಮಾಜ ಹೊರತೇನಲ್ಲ. ಆದರೆ ಆಚರಿಸುವ ಆಚರಣೆಗಳು ಅವುಗಳ ಸ್ವರೂಪ ಲಕ್ಷಣಗಳಲ್ಲಿ ಒಂದಿಷ್ಟು ವೈವಿಧ್ಯಮಯ ವಿರುವುದು ಕಂಡು ಬರುತ್ತವೆ.

ಮೂಲತಃ ಕಾಡು ಕಾಯುವ ಕಾಯಕದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಸುಡುಗಾಡು ಸಿದ್ದರು ಕಾಡು ಸಿದ್ಧರ ಹೆಸರಿನಲ್ಲಿ ತಮ್ಮನ್ನು ಕರೆಯಿಸಿಕೊಳ್ಳಲು ಇಷ್ಟಪಡುತ್ತಾರೆ. ನಿಸರ್ಗದ ವೈಪರಿತ್ಯಗಳಿಗೆ ಕಾರಣನಾದ ಮನುಷ್ಯನ ಅತಿಯಾದ ಸ್ವಾರ್ಥದಿಂದ ಕಾಡೆಲ್ಲ ಬೋಳಾಗುತ್ತ ಹೋಯಿತು. ಹೀಗಾಗಿ ಕಾಡಿನ ಜೀವಿಗಳಾದ ಸಿದ್ಧರು ಇತ್ತ ನಾಡಿಗೂ ಹತ್ತಿರವಾಗದೆ, ಕಾಡಿನಲ್ಲಿಯೂ ಸುಖವಾಗಿ ಉಳಿಯದೆ ಸುಡುಗಾಡಿನಲ್ಲಿ ಆಶ್ರಯ ಪಡೆದುಕೊಳ್ಳುವ ದುಸ್ಥಿತಿಗೆ ಬಂದುಬಿಟ್ಟರು. ಒಂದು ರೀತಿಯಲ್ಲಿ ಸುಡುಗಾಡಿನ ಒಡೆಯರಾಗಿ ಭೂಮಿಯ ವಾರಸುದಾರರಲ್ಲಿ ಒಬ್ಬರಾಗಿ ಜೋಳಿಗೆ ತುಂಬ ತಮ್ಮ ಭಾವಿ ಜೀವನದ ಕನಸುಗಳೆಲ್ಲವನ್ನು ಕಟ್ಟಿಕೊಂಡು ಜೋಳಿಗೆ ಬಗಲಿಗೇರಿಸಿಕೊಂಡು ತುತ್ತು ಅನ್ನಕ್ಕಾಗಿ ಶಂಖವೆಂಬ ತುತ್ತೂರಿಯನ್ನು ಊದುತ್ತ ಊರೂರು ಸಂಚರಿಸಲು ತೊಡಗಿದರು. ಮತ ಮಾನ್ಯಗಳ ಚಿಂತನೆಯೇ ಇಲ್ಲದ ಜನವರ್ಗ ಭೂಹೀನರಾಗಿ, ಆಸ್ತಿಹೀನರಾಗಿ ಬರಿಗೈಯಿಂದಲೇ ಬಂದು ಅನ್ನಕ್ಕಾಗಿ ಊರೂರು ಅಲೆಯುವ ಸುಡುಗಾಡು ಸಿದ್ರ ಸ್ಥಿತಿ ಗತಿಗಳು ನಿಜವಾಗಿ ಚಿಂತಾಜನಕವೆಂದೇ ಹೇಳಬಹುದು.

ಮಾನವ ಜನಾಂಗದ ಜೀವನ ವಿಧಾನಗಳಲ್ಲಿ ಒಂದು ಜನಾಂಗದಿಂದ ಮತ್ತೊಂದು ಜನಾಂಗ ಜನಸಮುದಾಯಗಳಲ್ಲಿ ಭಿನ್ನ ಭಿನ್ನವಾದ ಮತಾಚರಣೆಗಳು ರೂಢಿಯಲ್ಲಿರುತ್ತವೆ. ಇದಕ್ಕೆಲ್ಲ ಅವರವರ ಸಾಂಸ್ಕೃತಿಕ ಇಲ್ಲವೆ ಜನನಾಯಕರೆನಿಸಿಕೊಂಡ ಪೂರ್ವಜರು ಅನುಸರಿಸಿಕೊಂಡು ಬಂದಿರುವ ನಂಬಿಕೆ ಸಂಪ್ರದಾಯ ಸಂಸ್ಕಾರ ರೂಢಿ ಪದ್ಧತಿ ಸಂಸ್ಕೃತಿಗಳು ಮುಂದಿನವರಿಗೆ ಗಾಢವಾದ ಪ್ರಭಾವ ಬೀರುತ್ತವೆ. ಹೀಗಾಗಿ ಹಿರಿಯರಿಂದ ಕಿರಿಯರಿಗೆ ಇವೆಲ್ಲ ಒಂದು ರೀತಿಯಿಂದ ಅರಿವಿಗೆ ಬಾರದಂತೆ ಪ್ರಭಾವ

ಬೀರುವುದರ ಜೊತೆಗೆ ಇವೆಲ್ಲ ರಕ್ತಗತವಾಗಿಯೇ ಮುಂದುವರಿದಿರುವುದಕ್ಕೆ ಪ್ರೇರಕ ಶಕ್ತಿಯಾಗಿ ಕೆಲಸ ನಿರ್ವಹಿಸುತ್ತವೆ. ಬಂದ ಮೇಲೆ ಇವುಗಳ ಆಚರಣೆ ಸಂದರ್ಭದಲ್ಲಿ ಆಯಾ ಜನ ಸಮುದಾಯದ ಸದಸ್ಯನು ತಪ್ಪು ನಡೆದರೆ ಶಿಕ್ಷೆ ಮತ್ತು ದಂಡಕ್ಕೆ ಗುರಿಯಾಗಬೇಕಾಗುತ್ತದೆ. ಈ ಎಚ್ಚರಿಕೆ ಇರುವುದರಿಂದಲೇ ಆಯಾ ಜನಸಮುದಾಯಗಳನ್ನು ಹೆಚ್ಚು ಕಡಿಮೆ ಯಥಾವತ್ತಾಗಿಯೇ ಮುನ್ನಡೆಸಿಕೊಂಡು ಬರುತ್ತವೆಂಬುದರಲ್ಲಿ ಯಾವುದೇ ಸಂಶಯವಿಲ್ಲ. ಹೀಗೆ ಮುನ್ನಡೆದು ಬರುತ್ತಿರುವ ರೂಢಿ ಆಚರಣೆಗಳಲ್ಲಿ ಅವರವರದೇ ಆಗಿರುವ ಅನಿಸಿಕೆಗಳು ಭಾವನೆಗಳು ಅರಳಿನಿಂತು ಚಿಂತನ ನಡೆಸುವುದು ಅಷ್ಟೇ ಮಹತ್ವದ ಸಂಗತಿಗಳಾಗಿವೆ.

ಆಯಾ ಜನ ಸಮುದಾಯದ ಸಾಮಾಜಿಕ ವ್ಯವಸ್ಥೆಯಲ್ಲಿ ಅಥವಾ ಆಯಾ ಜನಾಂಗದ ಇತಿಹಾಸ ಮತ್ತು ಚರಿತ್ರೆಯಲ್ಲಿ ಆಯಾ ಪುರುಷ ಸಮಾಜದ ಭಾವನೆಗಳಿಗೆ ಪೂರಕವಾಗಿ ತಮ್ಮ ಸಮಾಜದ ಕಟ್ಟುಪಾಡುಗಳ ವ್ಯಾಪ್ತಿಯ ಒಳಗಡೆ ಮಹಿಳಾ ಸಂವೇದನೆಗಳು ಚಾಲ್ತಿಯಲ್ಲಿರುವುದು ಕಂಡು ಬರುತ್ತವೆ. ಇದರಂತೆ ಸುಡುಗಾಡು ಸಿದ್ದರ ಜನ ಸಮುದಾಯದಲ್ಲಿ ಆ ಜನಾಂಗದ ಮಹಿಳಾ ಸಂವೇದನೆಗಳು ಎಷ್ಟರ ಮಟ್ಟಿಗೆ ಮೂಡಿ ಬಂದಿವೆ ಎಂಬುದನ್ನು ಮತ್ತು ಅವು ಇತರ ಜನ ಸಮುದಾಯದ ಮಹಿಳೆಯರ ಸಂವೇದನೆಗಳಿಗಿಂತ ಹೇಗೆ ಭಿನ್ನವಾಗಿ ನಿಲ್ಲುತ್ತವೆಂಬುದನ್ನು ನೋಡಬಹುದಾಗಿದೆ.

## ಧೈರ್ಯದ ನಡುಗೆಯ ಮಹಿಳೆಯರು :

ಅಲೆದಾಡುವ ಹಿರಿಯ ಜೀವಗಳೊಂದಿಗೆ ಸಂಸಾರ ಸಮೇತವಾಗಿ ಸಾಗಿಸಿಕೊಂಡು ಸಂಕಷ್ಟದ ದಾರಿ ತುಳಿಯುವ ಸುಡುಗಾಡು ಸಿದ್ಧರ ಮಹಿಳೆಯರು ಧೈರ್ಯದ ಮನೋಭಾವನೆ ಹೊಂದಿದವರೆಂದು ಹೇಳಬಹುದು. ತಂದೆ ತಾಯಿಯ ವಾತ್ಸಲ್ಯದ ಮಡಿಲಲ್ಲಿ ಬೆಳೆದು ಆಡುವ ವಯಸ್ಸಿನಲ್ಲಿಯೇ ತಂದೆ-ತಾಯಿ ಹುಡುಕಿದ ವರನನ್ನು ಮದುವೆ ಮಾಡಿಕೊಂಡು ಸಂಚಾರದಲ್ಲಿ ಗಂಡನೊಂದಿಗೆ ಊರಿಂದ ಊರಿಗೆ ಪ್ರಯಾಣ ಬೆಳೆಸುತ್ತಾಳೆ. ವಯಸ್ಸಿನ ಹುಡುಗನೊಂದಿಗೆ ಸರಿಯಾಗಿ ನಡೆಯಲು ಬಾರದ ಹುಡುಗಿ ಊರೂರು ಅಲೆಯುವುದು ತುಂಬ ಕಷ್ಟದ ಕೆಲಸವೆಂದೇ ಹೇಳಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಸುಡುಗಾಡು ಸಿದ್ಧರು ಒಂದು ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಂಡಂತೆ ಕಾಣಿಸುತ್ತದೆ. ಆ ವ್ಯವಸ್ಥೆಯೇ 'ಮೇರ' ತಿರುಗುವುದು ಎಂಬುದು. ಅಂದರೆ ಪ್ರೌಢಾವಸ್ಥೆಗೆ ಕಾಲಿರಿಸಿದ ಹುಡುಗಿ ಸಂಸಾರಿಕ ತೊಂದರೆಯನ್ನುಂಟಾಗ ಬಾರದೆಂದು ತಿಳಿದುಕೊಂಡು ವರನು ತನ್ನ ಅತ್ತೆಮಾವನ ಕುಟುಂಬದ ಜೊತೆಗೆ ಮೂರು ವರ್ಷಗಳ ಕಾಲ ಸಂಚಾರ ಮಾಡುತ್ತಿರುವುದು ಈ ಸಮಯದಲ್ಲಿ ತಿರುಗಾಟದಲ್ಲಿ ಗಂಡನ ಜೊತೆಗೆ ಇದ್ದ ಮಗಳು ತನ್ನ ತಂದೆಗೆ ಸೂಕ್ತ ಸಮಯದಲ್ಲಿ ಸಂಸಾರದ ಮಾತುಕತೆಗಳನ್ನು ಹಂಚಿಕೊಳ್ಳುತ್ತಾರೆ. ಮುಂದೆ ಸೋಬಾನ ಕಾರ್ಯದ ಸೂಚನೆಕೊಟ್ಟಾಗ

ತಂದೆ-ತಾಯಿ ಒಪ್ಪಿ ಅಳಿಯ ಮಗಳ ಸಂಸಾರವು ಸುಗಮವಾಗುವಂತೆ ನೋಡಿಕೊಳ್ಳುತ್ತಾರೆ. ಇಂತಹ ಸಂದರ್ಭದಲ್ಲಿ ಮಗಳು ಸಂಸಾರಕ್ಕೆ ಯೋಗ್ಯಳೋ ಅಥವಾ ದುರ್ಬಲಳೆಂಬುದನ್ನು ಅವರ ಸಮಾಜ ಸರಿಯಾಗಿ ಗುರುತಿಸುವ ಪ್ರಕ್ರಿಯೆಯಲ್ಲಿ ತೊಡಗುವುದು. ಈ ಪದ್ಧತಿ ವೈಜ್ಞಾನಿಕವಾಗಿ ಸತ್ಯವಾಗಿದೆ ಎಂದು ಹೇಳಬಹುದು. ಅಂದರೆ ಬಾಲ್ಯ ವಿವಾಹವಾದ ಹುಡುಗಿ ಗಂಡನ ಜೊತೆಗೆ ಸಂಸಾರ ಮಾಡಲು ಆಗುವುದಿಲ್ಲ. ಕಾರಣ ತಾನು ಶಾರೀರಿಕವಾಗಿ ಅಷ್ಟೊಂದು ಆರೋಗ್ಯವಂತಳಾಗುವುದಿಲ್ಲ. ಹೀಗಾಗಿ ಸುಮಾರು ವರ್ಷಗಳ ಕಾಲ ಗಂಡನ ಮತ್ತು ಅವರ ಹಿರಿಯರ ಜೊತೆಗೆ ಜೀವನ ಸಾಗಿಸುವಾಗ ಕಷ್ಟ ಸುಖಗಳನ್ನು ಕಣ್ಣಾರೆಕಂಡು ಮತ್ತು ಅನುಭವಗಳನ್ನು ಪಡೆದುಕೊಂಡು ದೈಹಿಕವಾಗಿ ಮಾನಸಿಕವಾಗಿ ಸಂಸಾರಕ್ಕೆ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಾಳೆ. ಈ ಸೂಕ್ಷ್ಮ ವಿಚಾರಗಳ ಸಂಬಂಧ ಸಿದ್ಧರ ಹೆಣ್ಣು ತನ್ನ ಸಂವೇದನೆಗಳನ್ನು ತಾಯಿ ಅಜ್ಜಿಯ ಜೊತೆಗೆ ಹಂಚಿಕೊಳ್ಳುತ್ತಾರೆಂಬುದನ್ನು ಗಮನಿಸುವಂಥದ್ದು. ಹೀಗೆ ಸಮಯ ಸಂದರ್ಭಗಳನ್ನು ನೋಡಿ ಅವರ ಸ್ತ್ರೀಯರು ತಮ್ಮ ವಿಚಾರಗಳನ್ನು ಹಾಡಿಕೊಳ್ಳುಯತ್ತಾರೆ. ಕೈಯಲ್ಲಿ ಬಳೆ, ಕಿವಿಯಲ್ಲಿ ಓಲೆ, ಬುಗುಡಿಗಳನ್ನಿಟ್ಟುಕೊಂಡು ಕೌಟುಂಬಿಕ ಪರಿಸರದಲ್ಲಿ ಒಂದಿಷ್ಟು ವರ್ಷಗಳನ್ನು ಕಳೆಯುತ್ತಾಳೆ. ತಾನು ಅನ್ಯಳಲ್ಲವೆಂಬ ಭಾವನೆ ಅವಳಲ್ಲಿ ಮೂಡಲು ಪ್ರಾರಂಭವಾಗುತ್ತದೆ. ಜೆತೆಗೆ ಬೆಳೆದು ದೊಡ್ಡವಳಾಗಿ ಸಂಸಾರಕ್ಕೆ ಅರ್ಹಳಾಗುತ್ತಾಳೆ. ಸುಡುಗಾಡು ಸಿದ್ಧರ ಹೆಣ್ಣು ಮಕ್ಕಳು ಧೈರ್ಯದ ಹೆಣ್ಣುಮಕ್ಕಳು. ಯಾವುದೇ ಸಂದರ್ಭದಲ್ಲಿ ಇವರ ಭಯ ಭೀತರಾಗುವುದಿಲ್ಲ. ತಮ್ಮ ಮನೆಯಾಯಿತು ತಮ್ಮ ಕರಕುಶಲ ಕಲೆಗಳ ತಯಾರಿಕೆಯಾಯಿತು ರಚಿಸುವುದು ಸಮೀಪದ ಊರಿನ ಸಂತೆಗಳಿಗೆ ಮಾರಾಟಕ್ಕೆಂದು ಹೋಗುವ ಗಂಡಂದಿರಿಗೆ ಅವುಗಳನ್ನು ಕೊಟ್ಟು ಅದರಿಂದ ಬಂದ ಹಣದಲ್ಲಿ ಹರುಕು ಮುರುಕಾದ ಸಂಸಾರವನ್ನು ಶುದ್ಧ ಮಾಡಲು ಅದರಲ್ಲಿಯೂ ಆರ್ಥಿಕವಾಗಿ ಸದೃಢವಾಗಿಡಲು ಅವರು ಸದಾ ಹೆಣಗುತ್ತಾರೆ.

ಸುಡುಗಾಡು ಸಿದ್ಧರಲ್ಲಿ ಋತುಮತಿಯಾದವಳಿಗೆ ಐದರಿಂದ ಒಂಬತ್ತು ದಿವಸ ಪ್ರತ್ಯೇಕ ಗುಡಿಸಲಿನಲ್ಲಿ ಕುಳ್ಳಿರಿಸುವ ಪದ್ಧತಿ ರೂಢಿಯಲ್ಲಿದೆ. ಕಂಬಳಿ ಇಲ್ಲವೆ ಶಾಲಿನ ಮೇಲೆ ಹುಡುಗಿಯನ್ನು ಪೂರ್ವಕ್ಕೆ ಮುಖಮಾಡಿ ಕುಳ್ಳಿರಿಸಿ ಹೂ ಮುಡಿಸಿ ಹಾಡು ಹಾಡುತ್ತಾರೆ. ಸಾಮಾನ್ಯವಾಗಿ ಸಂಚಾರದಲ್ಲಿರುವ ಸಿದ್ಧರು ಮೂರು ಇಲ್ಲವೆ ಐದು ಗುಡಿಸಲಿನ ಹೆಂಗಸರು ತೆಲಗು ಮತ್ತು ಕನ್ನಡದಲ್ಲಿ ನೀತಿಯ ಹಾಡುಗಳನ್ನು ಹಾಡುತ್ತಾರೆ. ಅತಿಯಾದ ಮಡಿ-ಮೈಲಿಗೆಯನ್ನು ನಂಬಿಕೊಂಡು ಬಂದಿರುವ ಸಿದ್ಧರು ಗುಡಿಸಲಿನ ಮುಂಭಾಗದ ಅಂಗಳದಲ್ಲಿ ಹೆಂಗಸರು ಋತುಮತಿಗೆ ಮುಟ್ಟದೆ ದೂರದಲ್ಲಿ ಕುಳಿತುಕೊಂಡು ಈ ರೀತಿಯಲ್ಲಿ ಹಾಡಿ ಹರಸುತ್ತಾರೆ.

ಕಟ್ಟಿಯ ಹಿಂದೆ ದುಪ್ಪೊಟ್ಟೋದು ಏನೆ

ಆರ ಸಾವಿರದ ಎಲಿತ್ವಾಟ ಆಗಿರುವ ಅವರ
ಮಾವ ಕೇಳ್ಯಾನೆ ಹೊಸ ಸುದ್ದಿ
ಹೊಸ ಸುದ್ದಿ ಕೇಳ್ಯಾನೆ ಹುಸಿನಗಿ ನಕ್ಕಾನೆ
ಏಳಮಳ ಮಲ್ಲಿಗಿಯ ಕೊಯಶ್ಯಾನೆ ಸತ್ಯಪ್ಪ
ದಂಡಿ ಎಣಿಸಿ ಸೊಸಿಯಿದ್ದ ಮನಿಗಿ ಕಳಿಸ್ಯಾನೆ

ಅವರಲ್ಲಿ ಹೆಚ್ಚಾಗಿ ಬಾಲ್ಯಾವಸ್ಥೆಯಲ್ಲಿ ಮದುವೆ ಆಗುತ್ತದೆ. ಹುಡುಗಿಗೆ ೧೧ ರಿಂದ ೧೪ ವರ್ಷ ತುಂಬುತಿದ್ದಂತೆ ಋತುಮತಿಯಾಗುತ್ತಾಳೆ. ಈ ಸುದ್ದಿಯನ್ನು ತಿಳಿದುಕೊಂಡ ಮೇಲೆ ಆ ಹುಡುಗಿಯ ಮಾವ ಅಚ್ಚ ಎಸಳ ಮಲ್ಲಿಗೆಯ ಹೂವನ್ನು ಕೊಯ್ದು ದಂಡಿ ಮಾಡಿ ಕಳುಹಿಸಿದ ಎಂದು ಸುಂದರವಾಗಿ ಹಾಡುತ್ತಾರೆ. ಹುಡುಗಿಗೆ ಮದುವೆ ಆಗದಿದ್ದರೆ ಅವಳ ತಂದೆ ಇಲ್ಲವೆ ಸೋದರ ಸೋದರಿಯರು ಹೂವಿನ ದಂಡಿಯನ್ನು ತರುವುದು ಅವರಲ್ಲಿಯ ಪದ್ಧತಿಯಾಗಿದೆ.

ಸಂಚಾರದಲ್ಲಿಯೇ ತಮ್ಮನ್ನು ತೊಡಗಿಸಿಕೊಂಡಿರುವ ಸಿದ್ಧರು ತಮ್ಮ ರೂಢಿ ಸಂಪ್ರದಾಯಗಳನ್ನು ಸಂಚರಿಸುತ್ತಲೇ ಪಾಲಿಸುತ್ತ ಜೀವನ ಕಳೆಯುತ್ತಾರೆ. ಮಹಿಳೆಯರ ಸಂಖ್ಯೆ ಕಡಿಮೆ ಹೊಂದಿರುವ ಅವರು ಮದುವೆಗಾಗಿ ಹುಡುಗಿಯನ್ನು ಹುಡುಕುವುದು ದುಸ್ಸಾಹಸದ ಕೆಲಸವೆಂದೇ ಹೇಳಬೇಕು. ಪರಿಚಯ ಇರುವವರ ಮನೆಗೆ ಹೋಗಿ ಕಾಡಿ, ಬೇಡಿ ಮದುವೆಗೆ ಒಪ್ಪಿಸುತ್ತಾರೆ. ಇಷ್ಟೊತ್ತಿಗೆ ಅವರು ಹಲವಾರು ಕ್ಷೇತ್ರಗಳನ್ನು ಸುತ್ತಾಡಿ ಹುಡುಗಿಯನ್ನು ನೋಡಿ ಆಯ್ಕೆ ಮಾಡಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಅನೇಕ ರೂಢಿ ಪದ್ಧತಿಗಳನ್ನು ಚಾಚೂ ತಪ್ಪದೆ ಅನುಸರಿಸುತ್ತಾರೆ.

ನಾಳೆ ವಧು-ವರರಿಗೆ ಅಕ್ಷತೆ ಅದರ ಹಿಂದಿನ ದಿವಸ ಬೆಳಗು ಹರಿಯುವುದಕ್ಕಿಂತ ಮುಂಚಿತವಾಗಿ ಸಾಸಿ ಕಟ್ಟೆಯನ್ನು ತಯಾರಿಸುತ್ತಾರೆ. ಕಟ್ಟೆಯನ್ನು ಸೆಗಣಿಯಿಂದ ಸಾರಿಸಿದ ಮೇಲೆ ಮುತ್ತೈದೆಯರು ರಂಗೋಲಿ ಬರೆಯುತ್ತಾರೆ. ಆ ಸಂದರ್ಭದಲ್ಲಿ ಈ ರೀತಿಯಾಗಿ ಹಾಡುತ್ತಾರೆ.

ಸಾಸಿಯ ಬರಿಲಿಕ್ಕೆ ಕಾಳಪ್ಪನ ಕರಿಸಿರೆ ಸೋ
ಬನ್ನಿ ಈರಣ್ಣನ ಪಟ್ಟದರಸಿಗೆ ಸೋ ಬನ್ನಿ

ಎಲ್ಲ ಮುತ್ತೈದೆಯರು ಮದುವೆ ಹಂದರದಲ್ಲಿ ಬಂದಿದ್ದರೆ ಅಂತಹ ಸಂದರ್ಭದಲ್ಲಿ ಕಾಳವ್ವನಿಗೆ ಕರೆದು ಸಾಸಿ ಬರೆಸುತ್ತಾರೆ. ಅವಳು ಸಾಸಿ ಬರೆದ ಮೇಲೆ ಅದರಲ್ಲಿಯ ಚಿಕ್ಕ ಚಿಕ್ಕ ಮನೆಗಳಲ್ಲಿ ಬಿಳಿರಂಗ, ಕುಂಕುಮ, ಭಂಡಾರ ತುಂಬಲು ಮುತ್ತೈದೆಯರನ್ನು ಆಮಂತ್ರಿಸುವ ಪದ್ಧತಿ ಅವರಲ್ಲಿದೆ. ಈ ಸನ್ನಿವೇಶದಲ್ಲಿ ಸಿದ್ಧರ ಹೆಂಗಸರು ಬಹಳ ಸೊಗಸಾಗಿ ಹಾಡನ್ನು ಹಾಡುತ್ತಾರೆ.

ಅರಸಿಣ ತುಂಬಕ್ಕೆ ಹುಲಿಗೆವ್ವ ಕರಸಿರೆ
ಸೋ ಬನ್ನಿ ಬಸವಣ್ಣನ ಪಟ್ಟದರಸಿಗೆ
ಸೋ ಬನ್ನಿ
ಕಳಸ ತುಂಬಕ್ಕೆ ಮಲ್ಲವ್ವನ ಕರಸಿರೆ
ಸೋ ಬನ್ನಿ ಹುಲಿಗಣ್ಣಿನ ಪಟ್ಟದರಸಿಗೆ
ಸೋ ಬನ್ನಿ

ಎಂದು ಹಾಡುತ್ತ ತಮ್ಮ ಕರ್ತವ್ಯವನ್ನು ವ್ಯವಸ್ಥಿತವಾಗಿ ಮುಗಿಸುತ್ತಾರೆ. ಆಗ ಮುನಿಗಳು ಮದುವೆ ಹಂದರದಲ್ಲಿ ಆಗಮಿಸಿದ್ದಾರೆ. ವರ ವಧುವಿಗೆ ತಾಳಿಯನ್ನು ಕಟ್ಟುತ್ತಾನೆ. ಮುತ್ತೈದೆಯರು ವಧು ವರರಿಗೆ ಮುಯ್ಯ ಮಾಡುತ್ತಿದ್ದಾರೆ. ಕೊನೆಗೆ ಇನ್ನೊಂದು ಹಾಡು ಹೀಗೆ ಹಾಡುತ್ತಾರೆ.

ನೆನೆಯಕ್ಕಿ ನೆನೆಗಡಲಿ ಗೊನೆಬಾಳೆಹಣ್ಣ
ಸುಖಿ ಮುಖಿ ಸೀತ ಗೌರವ ತುಂಬವರೆ
ಪರಿಪರಿ ಜಾತಿಗ ಹೂ ಮುಡಿಸುವರೆ
ಒಂಬತ್ತು ತಿಂಗಳು ಹೊತ್ತ ನಾ ತಿರುಗಿದೆ
ಸ್ವಾಮೆಂದೆ ನಿನ್ನ ಹಡದೀನಿ ಸೋಬನವೆ
ಸ್ವಾಮೆಂದೆ ನಿನ್ನ ಹಡದೀನಿ ಸತ್ಯಮ್ಮ
ಇಂದಿಗೆ ನಮ್ಮನಿಗೆ ಎರವಾದೆ ಸೋಬಾನೆವೆ

ತೌರು ಮನೆಯಿಂದ ಗಂಡನ ಮನೆಗೆ ಮಗಳು ಹೋಗುವಾಗ ಹೆಣ್ಣಿನ ಮನೆಯವರೆಲ್ಲರಿಗೂ ಹೊಟ್ಟೆಯಲ್ಲಿ ಬೆಂಕಿ ಬಿದ್ದ ಹಾಗೆ ಸಂಕಟವಾಗುತ್ತಿದೆ. ಎಷ್ಟು ಸಂಕಟವಾಯಿತೆಂದು ಅವರ ಹಾಡಿನ ಮೂಲಕವೇ ಆಲಿಸುವುದು ಸೂಕ್ತವೆನಿಸುತ್ತದೆ.

ಕರ್ಪೂರ ಗುಡ್ಡಕ್ಕೆ ಬಿದ್ದಂತೆ
ಹಡದಮ್ಮನ ಹೊಟ್ಟೆ ಉರಿದಿತ್ತೆ ಸೋಬಾನವೆ
ಹಡದಮ್ಮನ ಹೊಟ್ಟೆ ಉರಿದಿತ್ತೆ ನಮ್ಮಗಳೆ
ಗಂಡು ಮಗನಾಗಿ ಇರಲಿಲ್ಲೆ ಸೋಬಾನವೆ

ಇಷ್ಟು ಸಂಕಟವಾಗಿ ತಾಯಿ ಮಗಳಿಗೆ ಗಂಡು ಮಗುವಾಗಿ ಆದರೂ ಜನಿಸಬಾರದಿತ್ತೆ ಎಂದು ದುಃಖಿಸುತ್ತಾಳೆ. ಆಗ ಅಲ್ಲಿ

ಒಂಟಿ ಮಯಾಲೆ ಬಂದಾವೆ ಎಂಟ ಸಾವಿರ ಹೂವೆ
ಒತ್ತಿಲಿ ಬಂದಾವೆ ಬಿಡಿ ಹೂವೆ ಸೋಬಾನವೆ

ಒತ್ತಿಲಿ ಬಂದಾವೆ ಬಿಡಿ ಹೂವೆ ಸುಸಿಲಮ್ಮ
ಮಿತ್ರಿ ನೀ ಹಡೆದ ಮಗಳಿಗೆ ಸೋಬಾನವೆ

ಗುಡಿಸಲಿನ ಹಿರಿ ಕಿರಿಯರೆಲ್ಲರೂ ಮಗಳನ್ನು ಗಂಡನ ಮನೆಗೆ ಕಳುಹಿಸಿ ಕೊಡುತ್ತಾರೆ.

ಸುಡುಗಾಡು ಸಿದ್ಧರ ಹೆಂಗಸರು ಹೆಚ್ಚಾಗಿ ಹುಲಿಗೆಮ್ಮ, ಮಾರಮ್ಮ, ಪೋಚಮ್ಮ, ನಿಜಲಿಂಗಮ್ಮ, ಭವಾನಿ, ಮುಂತಾದ ಶಕ್ತಿ ದೇವರುಗಳನ್ನು ಪೂಜಿಸುತ್ತಾರೆ. ಆ ಸಂದರ್ಭದಲ್ಲಿ ಅನೇಕ ಹಾಡುಗಳನ್ನು ಹಾಡುತ್ತಾರೆ.

ಅಂಬಾ ದೇವಿ ನಾ ನಂಬಿರುವೆ ನಿನ್ನ
ಪಾದ ಸೇರುವೇನು
ಭಯದಲಿ ಬೆಳಗುವೆ ನಾರುತಿಯಮ್ಮನ
ನೀತಿಲಿ ಬೆಳಗುವೆ ಜ್ಯೋತಿಗಳೆ

ಶಿವನ ಆರಾಧಕರಾದ ಸುಡುಗಾಡು ಸಿದ್ಧರು ಪ್ರತಿಯೊಂದು ಸಂದರ್ಭದಲ್ಲಿಯೂ ಅವನನ್ನು ಪೂಜಿಸುತ್ತಾ ಆರಾಧನೆಯಲ್ಲಿ ಸಮಯ ಕಳೆಯುತ್ತಾರೆ.

ಕೊಂಬು ಕಡಗ ಚೆಂದ
ಒಂಬತ್ತು ನುಡಿ ಚಂದ
ಕೊಂಬೀಲಿ ಚೆಂದ ಬಸವಣ್ಣ
ಮಂಗಲಂ ಜಯ ಮಂಗಲಂ

ಎಂದು ಹಾಡು ಹಾಡುತ್ತ ಪ್ರಾರ್ಥನೆಯೊಂದಿಗೆ ಮಂಗಲ ಗೀತೆಯನ್ನು ಹಾಡಿ, ಹಾಡು ಮುಗಿಸುವ ರೂಢಿ ಅವರಲ್ಲಿದೆ.

ಭಿಕ್ಷಾಟನೆಯ ಕಾಯಕದಲ್ಲಿ ಸುಡುಗಾಡು ಸಿದ್ಧರು ತಮ್ಮ ಕುಟುಂಬ ಸಹಿತ ಸಂಚಾರದಲ್ಲಿಯೇ ಇರುತ್ತಾರೆ. ಅತಿ ಭಾರವಿರುವ ವಸ್ತುಗಳನ್ನು ತೆಗೆದುಕೊಂಡು ಹೋಗುವುದಿಲ್ಲ. ಬೀಸುವ ಕಲ್ಲು ಕುಟ್ಟುವ ಕಲ್ಲುಗಳನ್ನು ಅವರು ಆಯಾ ಗ್ರಾಮದ ಜನರಲ್ಲಿಗೆ ಹೋಗಿ ಕೇಳಿ ಅವರಿಂದ ಸಹಾಯ ಪಡೆದುಕೊಂಡು ಬೀಸಿ ಇಲ್ಲವೆ ಕುಟ್ಟಿಕೊಂಡು ಬರುತ್ತಾರೆ. ಬೀಸುವ ಮತ್ತು ಕುಟ್ಟುವ ಕಲ್ಲುಗಳನ್ನು ಕೊಟ್ಟ ಒಡತಿಯ ಮನ ತಣಿಸಲು ಅನೇಕ ಹಾಡುಗಳನ್ನು ಸಿದ್ದರ ಹೆಂಗಸರು ಹಾಡುತ್ತಾರೆ.

ಕುಸನೂರ ಊರಾಗ ತಂಗಿ
ಬೀಸರಿ ಎನ್ನ ಜೋಳ ತಂಗಿ
ಕುಸನೂರ ಊರಾಗ

ಗೌರಮ್ಮನ ಕಟ್ಟೆಮ್ಯಾಲ ತಂಗಿ
ಬಿದ್ದಾವ ಎಡ್ಡ ಸೇರ ತಂಗಿ
ಬೀಸರಿ ಎನ್ನ ಜೋಳ
ಬೀಸಕಲ್ಲ ಮ್ಯಾಲ ತಂಗಿ
ಹಾಡಗೋಳು ಅವಯೇನೆ ತಂಗಿ
ಬೀಸದು ಕಲ್ಲಮ್ಯಾಲೆ ಹಾಡೋದು ಪದಗಳೆ

ಎಂದು ಹಾಡು ಹಾಡುವ ಸಿದ್ಧರ ಹೆಂಗಸರು ಬೀಸುವ ಕಲ್ಲಿನ ಮೇಲೆ ಅನೇಕ ಹಾಡುಗಳಿವೆ ಎಂಬುದನ್ನು ಹೇಳಲು ಮರೆಯುವುದಿಲ್ಲ. ತಮ್ಮ ಗುಡಿಸಲಿನ ಸಮೀಪವೇ ಇರುವ ಮೇಲ್ವರ್ಗದವರ ಮನೆಗೆ ಹೋಗಿ ಬೀಸಿಕೊಂಡು ಇಲ್ಲವೆ ಕಟ್ಟಿಕೊಂಡು ಬರುತ್ತಾರೆ.

ಗುಡಿಸಲಿನ ಒಳಗೆ ಅಡ್ಡಲಾಗಿ ಬಿದಿರು ಗಳಕ್ಕೆ ಚಿಕ್ಕ ಕೌದಿಯ ಜೋಳಿಗೆಯನ್ನು ಕಟ್ಟುತ್ತಾರೆ. ಆ ಅರಿವೆಯ ತೊಟ್ಟಿಲಿನಲ್ಲಿ ಮಗುವನ್ನು ಮಲಗಿಸುತ್ತ ಲಾಲಿ ಹಾಡು ಹಾಡುತ್ತಾರೆ.

ಬಾಳಿ ಬನದಾಗ ಬಾಲಾನ ತೊಟ್ಟಿಲ ಕಟ್ಟಿ
ಬಾಲ್ಯಾರು ತೂಗಿದರ ಮಗ ಮನಗುವಲ್ಲಿ ಪರುಶುರಾಮ
ಜೋ ಜೋ ರಾಮ ಮಗ ಬಬ್ರುವಾನ
..............................................
..................................
ರಾಮ ಮಲಗ್ಯಾನೆ ಸುಮ್ಮನೆ ಸುಮ್ಮನೆ
ಹಾಲ ಮಲಗ್ಯಾದೆ ಸುಮ್ಮನೆ
ಈ ನಮ್ಮ ಮಗ ರಾಮ ಮಲಗ್ಯಾನೆ

ಎಂದು ತಾಯಿ ಹಾಡಿ ಹರಿಸಿ ತೂಗಿದರೆ ಮಾತ್ರ ಮಗ ಮಲಗುತ್ತಾರೆ ಎಂಬುದು ಸಿದ್ದರ ಹೆಂಗಸರ ಅನುಭವವಾಗಿದೆ.

ಅನೇಕ ಸಂಪ್ರದಾಯದ ಹಾಡುಗಳನ್ನು ಹಾಡುವ ಸಂದರ್ಭದಲ್ಲಿ ನಡುವೆ ಕಥನ ಗೀತೆಗಳನ್ನು ಹಾಡುತ್ತಾರೆ.

ನೇಗಣದೇರು ಬಾಯಿ ನೀರಗಿ ಹೊಂಟಾರೆ ಕೋಲ ಕೋಲ
ಬಾವಿ ನೀರಿಗಿ ಹೊಂಟಾರಲ್ಲ
ಬಾಗಿಸಿ ಕೊಡಗಳು ತುಂಬ್ಯಾರಲ್ಲ
ಚಿತ್ರದ ಸಿಂಬಿ ಮಾಡ್ಯರಲ್ಲ
ಐದು ಕೊಡಗಳು ಹೊತ್ತಾರೆ ಕೋಲ ಕೋಲ

ಐದು ಕೊಡಗಳ ಹೊತ್ತಾರಲ್ಲ
ಐದು ಕೊಡಗಳು ನಿಲಯವ್ವಾರಲ್ಲ ಕೋಲ ಕೋಲ
ಹರದಾರಿಮ್ಯಾಲ ಹೊಂಟಾರಲ್ಲ ಕೋಲ ಕೋಲ
ಹರದಾರಿ ಮ್ಯಾಲ ಹೊಂಟಾರಲ್ಲ ಗೂಟಕಲ್ಲು ಎಡವ್ಯಾರಲ್ಲ
ಕೋಲ ಕೋಲ
ಐದು ಕೊಡಗಳು ಒಡದಾವೆ ಕೋಲ ಕೋಲ
ಐದು ಕೊಡಗಳು ಒಡದಾವಲ್ಲ
ಕುಂಬಾರಣ್ಣನ ಕರಿಸರೆ ಕೋಲ ಕೋಲ
ಕುಂಬಾರಣ್ಣ ಬಂದಾನಲ್ಲ
ಬಳಿದು ಬಚ್ಚಲಕ ಹಾಕ್ಯಾನಲ್ಲ ಕೋಲ ಕೋಲ
ಬಳಿದು ಬಚ್ಚಲಕ ಹಾಕ್ಯಾನಲ್ಲ
ಆಲದ ಮರವೊಂದು ಹುಟ್ಟತ್ತಲ್ಲ
ಬಡಗ್ಯಾರಣ್ಣ ಕರಿಸರೆ ಕೋಲ ಕೋಲ
ಬಡಿಗ್ಯಾರಣ್ಣ ಬಾಚಿ ಬಾಚಿಲಿ ಕೆತ್ತ್ಯಾನೆ ಕೋಲ ಕೋಲ
ಬಾಚಿ ಬಾಚಿಲಿ ಕೆತ್ತ್ಯಾನಲ್ಲ
ಬಣ್ಣದ ತೊಟ್ಟಿಲ ಮಾಡ್ಯಾನೆ ಕೋಲ ಕೋಲ
ಬಣ್ಣದ ತೊಟ್ಟಿಲ ಮಾಡ್ಯಾನಲ್ಲ
ಕೊಪ್ಪಳ ಪ್ಯಾಟಿಗೆ ಹೊತ್ತಾನಲ್ಲ ಕೋಲ ಕೋಲ
ಕೊಪ್ಪಳ ಪ್ಯಾಟಿಗೆ ಹೊತ್ತಾನಲ್ಲ
ಅಡ್ಡದಿಡ್ಡಿಗೆ ಕೇಳ್ಯಾರಲ್ಲ ಐದುನೂರಿಗೆ ಮುಗಿಸ್ಯಾರೆ ಕೋಲ ಕೋಲ
ಬಣ್ಣದ ಫಂಕ ಕಟ್ಯಾರಲ್ಲ
ಹೂವಿನ ಚಾದರ ಹಾಸ್ಯಾರೆ ಕೋಲ ಕೋಲ
ಹೂವಿನ ಚಾದರ ಹಾಸ್ಯಾರಲ್ಲ
ಭಾಗ್ಯವಾಡಿ ಬಸವಣ್ಣನ ಹಾಕ್ಯಾರಲ್ಲ
ಜೋ ಜೋ ಎಂದು ತೂಗ್ಯಾರೆ ಕೋಲ ಕೋಲ

ಈ ಕಥನಗೀತೆಯಿಂದ ಸುಡುಗಾಡು ಸಿದ್ಧರ ಹೆಂಗಸರ ಅದ್ಭುತವಾದ ಕಲ್ಪನಾ ಶಕ್ತಿ ಸೌಂದರ್ಯಪ್ರಜ್ಞೆ ತಿಳಿದುಬರುತ್ತದೆ.

ಪ್ರತಿಯೊಂದು ಜನಾಂಗ ಜಾತಿಗಳ ಸಂಪ್ರದಾಯದ ಹಾಡುಗಳಲ್ಲಿ ಅಲ್ಲಲ್ಲಿ ಹಾಸ್ಯ ಗೀಗೆಗಳು ಕೋಲ್ಮಿಂಚಿನಂತೆ ಮಿಂಚುತ್ತವೆ. ಇಲ್ಲಿ ಸಂಚಾರಿಗಳಾದ ಸುಡುಗಾಡು ಸಿದ್ಧರ ಹೆಂಗಸರು ಒಂದು ಕಡೆಗೆ ಕುಳಿತುಕೊಂಡು ಕಾಲ ಹರಣ ಮಾಡುವಾಗ

ಒಂದೊಂದು ಹಾಸ್ಯ ಚಟಾಕಿಗಳನ್ನು ಹಾರಿಸುತ್ತಾರೆ. ಅವುಗಳಲ್ಲಿ ಹೆಚ್ಚಾಗಿ ಬಡತನಕ್ಕೆ ಸಂಬಂಧಿಸಿದಂತೆಯೇ ಇರುತ್ತವೆಂಬುದು ಅಲ್ಲಗಳೆಯಲಾಗದು.

ದಸರಿ ಹಬ್ಬಕ್ಕ ಹಸನಾದ ಹೋಳಿಗೆ
ಮಾಡು ಎಂದನಲ್ಲೆ ಕೇಳೆ
ಜಾಣೆ ಮಾಡು ಎಂದನಲ್ಲೆ
ಹದನಾದ ಹೋಳಿಗೆ ಬೆಲ್ಲ ಹಾಕಲಿಕ್ಕೆ
ನೆನಪೆ ಬರಲಿಲ್ಲೆ
..........................................
ಅಗಂಡಯ್ಯ ಓ ಗಂಡಯ್ಯ
ತಂಗಿ ಎಂಥ ಬದುಕು ಮಾಡತಾಳ
ನೋಡಗಂಡಯ್ಯ
ಬ್ಯಾರೆ ಆದ ಮೂರು ದಿವಸಕ
ಏಳಲಾರೆ ಬೀಳಲಾರೆ
ಒಲೆಯ ಮುಂದಿನ ಬೂದಿ
ಎತ್ತಿ ಚಲ್ಲೋ ಗಂಡಯ್ಯ

ಈ ಗೀತೆಗಳಲ್ಲಿ ಬೇರೆ ಆದ ಮೇಲೆ ತನ್ನ ತಂಗಿ ಎಂಥ ಬದುಕು ಸಾಗಿಸುತ್ತಿದ್ದಾಳೆಂಬುದನ್ನು ವಿವರಿಸುತ್ತಾಳೆ.

## ಗಾದೆಗಳಲ್ಲಿ ಮಹಿಳಾ ಸಂವೇದನೆಗಳು :

ಜನಪದರು ಗಾದೆಗಳನ್ನು ಸಮಯ-ಸಂದರ್ಭ, ಸನ್ನಿವೇಶಗಳನ್ನು ಗಮನದಲ್ಲಿರಿಸಿಕೊಂಡು ಬಳಸುವುದು ಕಂಡು ಬರುತ್ತದೆ. ವಿಷಯದ ಸತ್ಯಾಸತ್ಯತೆಯನ್ನು ಗುರುತಿಸುವಾಗ ಅವರ ಗಾದೆಗಳನ್ನು ಬಳಸುತ್ತಾರೆ. ಕನ್ಯಾ ನಿಶ್ಚಯ, ಮದುವೆ, ನ್ಯಾಯ ನಿರ್ಣಯ ಮತ್ತು ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಚರ್ಚೆಯಲ್ಲಿ ಅನುಭಾವಿಗಳು ಹೆಚ್ಚಾಗಿ ಗಾದೆಗಳನ್ನು ಉಪಯೋಗಿಸುತ್ತಾರೆ. ತೀರ ಹಿಂದಿಳಿದ ಬುಡಕಟ್ಟಿನ ಸುಡುಗಾಡು ಸಿದ್ದರು ತಾವು ಮಾತನಾಡುವ ಭಾಷೆಗಳಲ್ಲಿ ಗಾದೆಗಳನ್ನು ಉಪಯೋಗಿಸುವುದು ಕಂಡುಬರುತ್ತದೆ.

'ಪದ್ಯೋಳು ಸೇಸಿಂದಿ ಕೊಡುಕಲು ಸೆಯ್ಯಾಲಿ'
(ಯಜಮಾನ ಮಾಡಿದ್ದು ಮಕ್ಕಳು ಮಾಡಬೇಕು)

ಹಿಂದಿನ ಕಾಲದಿಂದಲೂ ತಮ್ಮಲ್ಲಿ ರೂಢಿಯಲ್ಲಿರುವ ಭಿಕ್ಷಾವೃತ್ತಿಯನ್ನು ಪೂಜ್ಯಭಾವನೆ ಯಿಂದ ಮತ್ತು ಕರ್ತವ್ಯದ ದೃಷ್ಟಿಯಿಂದ ಪಾಲಿಸಿಕೊಂಡು ಬರುತ್ತಿದ್ದಾರೆ. ಅಲಕ್ಷಮಾಡಿ

ಭಿಕ್ಷೆ ಬೇಡುವುದು ನಿಲ್ಲಿಸಿದರೆ ಅಂದು ಆ ಬಡಕುಟುಂಬ ಉಪವಾಸ ಉಳಿಯಬೇಕಾಗುತ್ತದೆ. ಹೊಲ-ಗದ್ದೆ, ಆಸ್ತಿ-ಪಾಸ್ತಿ ಎಳ್ಳಷ್ಟು ಇಲ್ಲದ ಅವರು ಭಿಕ್ಷೆಯನ್ನೇ ನಂಬಿಕೊಂಡು ಬಂದವರಾಗಿದ್ದಾರೆ. ಪರಂಪರಾಗತವಾಗಿ ಬಂದಿರುವ ತಮ್ಮ ಕಾಯಕ ತಮ್ಮ ಮಕ್ಕಳೂ ಮಂದುವರಿಸಬೇಕೆನ್ನುತ್ತಾರೆ.

'ವಚ್ಚೆ ಕಂಟಕಾಲನ್ನಿ ಮಂಚಿದಾನಿಕಿ'
(ಬರುವ ಕಷ್ಟಗಳೆಲ್ಲ ಒಳ್ಳೆಯದಕ್ಕಾಗಿ ಬರುತ್ತವೆ.)

ಬಡತನವೆಂಬ ಭೂತ ಬೆನ್ನಿಗೆ ಕಟ್ಟಿಕೊಂಡು ಸುಡುಗಾಡು ಸಿದ್ಧರು ಭಿಕ್ಷಾಟನೆಗೆ ಹೊರಡುತ್ತಾರೆ. ಜೊತೆಯಲ್ಲಿ ಆಕಳು ಕುರಿ, ಕೋಳಿ, ನಾಯಿ, ಕವುಜುಗ ಮತ್ತು ಬುರ್ಲಿ ಇತ್ಯಾದಿ ಸಾಕು ಪ್ರಾಣಿಗಳು ಜೊತೆಯಲ್ಲಿರುತ್ತವೆ. ಅಲ್ಲದೆ ಮೂರರಿಂದ ಐದು ಗುಡಿಸಲುಗಳು ಜೊತೆಯಲ್ಲಿರುವ ನಿಯಮವಿದೆ. ಕಷ್ಟ ಸುಖಗಳಲ್ಲಿ ಭಾಗಿಯಾಗುವುದೇ ಈ ನಿಯಮದ ಉದ್ದೇಶವಾಗಿದೆ. ಗಂಡಸರು ಊರಿಂದ ಊರಿಗೆ ಹೋಗಿ ಭಿಕ್ಷೆ ಬೇಡಿಕೊಂಡು ಬಂದರೆ, ಹೆಂಗಸರು, ಆಕಳು, ಆಡು, ಮೇಯಿಸಿಕೊಂಡು ಬರುತ್ತಾರೆ. ಮಳೆ, ಚಳೆ, ಬೇಸಿಗೆಗಾಲ ಎನ್ನದೆ ವರ್ಷವಿಡಿ ಭಿಕ್ಷಾಟನೆಯಲ್ಲಿಯೇ ನಿರತರಾಗಿರುತ್ತಾರೆ. ಆ ಸಂದರ್ಭದಲ್ಲಿ ಈ ಗಾದೆಯನ್ನು ಬಳಸುತ್ತಾರೆ.

'ಪಟ್ಟೆ ತೇನೇದಿ ಪಟ್ಟಕುಂಟೆ ಉಪಾಸಮು'
(ಹಾಕಿದರೆ ಊಟ ಹಾಕದಿದ್ದರೆ ಉಪವಾಸ)

ಊರಿನಲ್ಲಿರುವ ಮನೆ ಮನೆಗೆ ಹೋಗಿ ಹರಕೆ ಹಾಕಿ, ಭಿಕ್ಷೆ ಬೇಡಿಕೊಂಡು ಮಧ್ಯಾಹ್ನವೇ ತಮ್ಮ ಗುಡಾರಕ್ಕೆ ಮರುಳುತ್ತಾರೆ. ಭಿಕ್ಷೆಯಲ್ಲಿ ದೊರೆತ ದವಸ ಧಾನ್ಯಗಳನ್ನು ಮನೆಯ ಹೆಂಗಸರು ಒಯ್ದು ಬೀಸಿ ತಂದು ರೊಟ್ಟಿ ಇಲ್ಲವೆ ಗಂಜಿ ಮಾಡಿ ಕುಟುಂಬದ ಸದ್ಯರಿಗೆ ಊಟ ಬಡಿಸುತ್ತಾರೆ. ಅದರಲ್ಲಿಯೂ ಮಳೆಗಾಲದಂತೂ ಸಿದ್ದರು ಅರೆ ಹೊಟ್ಟೆಯಿಂದಲೇ ಇರುವುದು ಸಾಮಾನ್ಯವಾಗಿದೆ. ಹೆಚ್ಚು ಕುಟುಂಬವನ್ನು ಸಾಕುವ ಜವಾಬ್ದಾರಿ ಗಂಡಸರದಾಗಿರುತ್ತದೆ. ಹೆಂಗಸರು ಚಾಪೆ ಹೆಣೆಯುವುದು, ಕಟ್ಟಿಗೆ ತರುವುದು, ಹರಿದ ಬಟ್ಟೆಗಳನ್ನು ಹೊಲಿಯುವುದರಲ್ಲಿಯೇ ತಮ್ಮ ಸಮಯವನ್ನು ಕಳೆಯುತ್ತಾರೆಂದು ಹೇಳಬಹುದು. ಹತ್ತರಿಂದ ಹದಿನೈದು ಸದಸ್ಯರಿಂದ ಕೂಡಿದ ಅವರ ಕುಟುಂಬ ಭಿಕ್ಷೆಯನ್ನೇ ಅವಲಂಬಿಸಿರುತ್ತದೆ. ದೊಡ್ಡ ಸಂಸಾರ ಭಿಕ್ಷೆ ನೀಡಿ ತಾಯಿ, ಇಲ್ಲದಿದ್ದರೆ ಹೆಂಡತಿ ಮಕ್ಕಳು ಉಪವಾಸ ಉಳಿಯಬೇಕಾಗುತ್ತದೆಂದು ದೈನ್ಯದಿಂದ ಬೇಡಿಕೊಂಡು ಭಿಕ್ಷೆ ನೀಡಿಸಿಕೊಳ್ಳುತ್ತಾರೆ.

'ಕಟ್ಟೆ ಮರಿಸ್ತೆ ಗೊರ್ರೆ ಕರುಸ್ತಾದಿ'
(ಬಡಗಿ ಮರೆತರೆ ಕುರಿ ಕಡಿಯುತ್ತದೆ)

ಭಿಕ್ಷಾಟನೆಯ ಸಮಯದಲ್ಲಿ ಸುಡುಗಾಡು ಸಿದ್ದರು ತಮ್ಮ ಕೈಯಲ್ಲಿ ಯಾವಾಗಲೂ ಒಂದು ಉದ್ದನೆಯ ಬೆತ್ತವನ್ನು ಹಿಡಿದುಕೊಂಡಿರುತ್ತಾರೆ. ಬಣ್ಣ ಬಣ್ಣದ ವೇಷ ಭೂಷಣಗಳನ್ನು ಧರಿಸಿಕೊಂಡು ಊರು ಪ್ರವೇಶಿಸುವಾಗ ಬೀದಿಯ ನಾಯಿಗಳು ಬೊಗಳಲು ಪ್ರಾರಂಭಿಸುತ್ತವೆ ಮತ್ತು ಕೆಲವೊಂದು ಕಚ್ಚಲು ತೂರಿ ಬರುತ್ತವೆ. ಅಂತಹ ಸಂದರ್ಭದಲ್ಲಿ ಸಿದ್ದರು ಕೈಯಲ್ಲಿಯ ಬಡಗಿಯ ಸಹಾಯದಿಂದ ನಾಯಿಗಳನ್ನು ದೂರ ಓಡಿಸಿ ಭಿಕ್ಷೆ ನೀಡಿಸಿಕೊಳ್ಳುತ್ತಾರೆ. ಅದಕ್ಕಾಗಿ ಅವರು ಹೇಳುವುದೇನೆಂದರೆ ತಾವು ಬಡಗಿಯನ್ನು ಮರೆತರೆ ನಾಯಿ ಅಲ್ಲದೆ ಸಾಧು ಪ್ರಾಣಿಯಾದ ಕುರಿಯೂ ಕಚ್ಚುತ್ತದೆನ್ನುತ್ತಾರೆ. ಹೀಗೆ ಭಿಕ್ಷೆಯಿಂದ ಬಂದ ದವಸ ಧಾನ್ಯಗಳನ್ನು ಕುಟುಂಬದ ನಿರ್ವಹಣೆಗೆ ಉಪಯೋಗಿಸುತ್ತಾರೆ. ಅಂದರೆ ಕುಟುಂಬಕ್ಕೆ ಭಿಕ್ಷೆಯೇ ಆಧಾರವಾಗಿದೆ ಎಂದು ಹೇಳಬಹುದು.

**ಸಾಮಾಜಿಕ ಗಾದೆಗಳು :**

'ಮಂಚಿದಿ ಪೆಟ್ಕೊ ಪೆಡ್ಡದಿ ಪಂಪಿಂಚು'
(ಒಳ್ಳೆಯದು ಇಟ್ಟುಕೊಳ್ಳು ಕೆಟ್ಟದ್ದು ಕಳುಹಿಸಿಕೊಡು)

ತನ್ನ ಹೆಂಡತಿಯ ಅನೈತಿಕ ಸಂಬಂಧ ಕುರಿತು ಅವಳ ಗಂಡ ನ್ಯಾಯ ಕಟ್ಟೆಗೆ ದೂರು ಸಲ್ಲಿಸಿದರೆ, ನ್ಯಾಯ ಕಟ್ಟೆ ಸೂಕ್ಷ್ಮವಾಗಿ ಪರಿಶೀಲಿಸುತ್ತದೆ. ಸಾಕ್ಷಾಧಾರಗಳ ಮೇಲಿಂದ ಅವರು ಅಪರಾಧಿ ಎಂದು ತಿಳಿದು ಬಂದರೆ ಅವಳಿಗೆ ಅವಳ ತವರು ಮನೆಗೆ ಕಳುಹಿಸಿ ಕೊಡುತ್ತಾರೆ. ಈ ಸಂಬಂಧ ನ್ಯಾಯ ನಿರ್ಣಯವನ್ನು ಬಿಜಾಪೂರ ಜಿಲ್ಲೆಯ ಆಲಮಾಟ್ಟಿ ವಿಶಾಲ ಬಯಲಿನಲ್ಲಿ ನಡೆಸುವ ಪದ್ಧತಿಯಿದೆ. ಆವಾಗ ಅವರು ತಮ್ಮ ಸಮಾಜದ ಪ್ರತಿಯೊಂದ ವಿಷಯಗಳನ್ನು ಕುರಿತು ಚರ್ಚಿಸುತ್ತಾರೆ. ಅಂತಹ ವೇಳೆಗೆ ಅನೈತಿಕ ಸಂಬಂಧದ ವಿಷಯ ಕುರಿತು ಒಂದು ದಿವಸ ನ್ಯಾಯ ನಿರ್ಣಯ ಇಟ್ಟುಕೊಳ್ಳುವ ಪದ್ಧತಿಯಿದೆ. ಅಲ್ಲಿ ನಿರ್ಣಯವಾಗುತ್ತದೆ.

'ಲಂಜೆ ತನಮು ಸೇಸ್ತೆ ಗಾಡದಿ ಲಾಕ'
(ಹಾದರ ಮಾಡಿದರೆ ಕತ್ತೆಯಂತೆ)

ಸುಡುಗಾಡು ಸಿದ್ಧರಲ್ಲಿ ಹಾದರಕ್ಕೆ ಆಸ್ಪದವಿಲ್ಲ. ಆ ನಿಯಮ ಉಲ್ಲಂಘಿಸಿದ ವ್ಯಕ್ತಿಗಳಿಗೆ ಸಮಾಜದಲ್ಲಿ ಮಾನ-ಮರ್ಯಾದೆಗಳು ದೊರೆಯದಂತೆ ಮಾಡುತ್ತಾರೆ ಮತ್ತು ಅಪರಾಧಿಗಳಿಗೆ ದಂಡ ಮತ್ತು ಶಿಕ್ಷೆ ವಿಧಿಸುತ್ತಾರೆ. ಅಲ್ಲದೆ ಅಪರಾಧಿಯ ಮೂಲದ ಬೆಡಗಿನಿಂದ ಹೊರ ಹಾಕಿ ಹೊಸ ಬೆಡಗಿನಲ್ಲಿ ಸೇರಿಸುವ ವಿಶಿಷ್ಟ ಪದ್ಧತಿ ಅವರಲ್ಲಿದೆ. ಇಂತಹ ಅನೇಕ ಬೆಡಗುಗಳು ಅವರಲ್ಲಿ ಕಾಣ ಸಿಗುತ್ತವೆ ಮತ್ತು ಇಂತಹ ಬೆಡಗಿನವರ ಜೊತೆಗೆ ಇಂತಹ ಬೆಡಗಿನವರೇ ರಕ್ತ ಸಂಬಂಧ ಏರ್ಪಡಿಸಿಕೊಳ್ಳುತ್ತಾರೆ.

'ಮಾಟ್ಲಾಡ್ತೆ ದೈವಮು ಒಪ್ಪಾಲಿ'
(ಮಾತಾಡಿದರೆ ದೈವ ಮೆಚ್ಚಬೇಕು.)

ಮಾತಾಡುವುದು ಸುಲಭ : ಆದರೆ ಅದರ ಪರಿಣಾಮ ಏನಾಗುತ್ತದೆ ? ಎಂಬುದನ್ನು ಮೊದಲೇ ವಿಚಾರ ಮಾಡಿ ಮಾತಾಡಬೇಕು. ಸುಡುಗಾಡು ಸಿದ್ಧರ ಬುಡಕಟ್ಟಿನಲ್ಲಿ ಸಿದ್ಧರು ಬಹಳ ಎಚ್ಚರದಿಂದ ಮಾತಾಡುತ್ತಾರೆ. ಅಪ್ಪಿ-ತಪ್ಪಿಯೂ ಸುಳ್ಳು ಇಲ್ಲವೆ ಅಶ್ಲೀಲ ಮಾತಾಡುವುದಿಲ್ಲ. ಯಾವುದೇ ಸಂದರ್ಭದಲ್ಲಿ ಮಾತಾಡುವಾಗ ನಮ್ಮ ಮಾತುಗಳು ಸತ್ಯವಾಗಿರಬೇಕು ಮತ್ತು ಅವು ದೈವ ಮೆಚ್ಚುವಂತಿರಬೇಕೆನ್ನುತ್ತಾರೆ.

'ತುಮ್ಮು ಕಿಟಿಗಾಣಿಕಿ ಮೊಗಡು'
(ಸೀನು ಸಿದ್ಧರ ಗಂಡ)

ಸುಡುಗಾಡು ಸಿದ್ಧ ಸಮಾಜ 'ಸೀನು' ಅಪಶಕುನವೆಂದು ಪರಿಗಣಿಸಿದೆ. ಯಾವುದೇ ಕಾರ್ಯವನ್ನು ಮಾಡಬೇಕೆಂದು ಚರ್ಚಿಸುವ ಸಂದರ್ಭದಲ್ಲಿ ಮನುಷ್ಯ ಇಲ್ಲವೆ ಪ್ರಾಣಿಗಳು ಸೀನಿದರೆ ಅಪಶಕುನವೆನ್ನುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಆ ಕಾರ್ಯಕ್ರಮ ಮುಂದಕ್ಕೆ ತಳ್ಳುತ್ತಾರೆ. ಇಲ್ಲವೆ ಸಂಪೂರ್ಣವಾಗಿ ಕೈಬಿಡುವ ರೂಢಿ ಚಾರಿಯಲ್ಲಿದ್ದರೂ, ಹನುಮಂತ ದೇವರ ದರುಶನ ಪಡೆದು ಹಣ್ಣು ಹೂ ಅರ್ಪಿಸಿ ಕಾರ್ಯ ತತ್ಪರರಾಗುವ ಪರ್ಯಾಯ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಶುಭ ಕಾರ್ಯಕ್ಕೆ ಹೋಗುತ್ತಿದ್ದೇವೆ ಸ್ವಾಮಿ ಯಾವುದೇ ವಿಘ್ನ ಬರದಂತೆ ನೋಡಿಕೊಳ್ಳು ದೇವರೇ ಎಂದು ಬೇಡಿಕೊಳ್ಳುತ್ತಾರೆ. ಆ ಸಂದರ್ಭದಲ್ಲಿ ಯಾರಾದರೂ ಸೀನಿದರೆ ಹಿಡಿದ ಕಾರ್ಯ ಸಂಪೂರ್ಣ ಕೈಬಿಡುತ್ತಾರೆ. ಅದಕ್ಕಾಗಿಯೇ ಸುಡುಗಾಡು ಸಿದ್ಧರು 'ಸೀನು'ಸಿದ್ಧರ ಗಂಡ ಎಂದು ಕರೆಯುತ್ತಾರೆ. ವಿಶೇಷವಾಗಿ ಹೆಣ್ಣು ನೋಡುವ ಸಂದರ್ಭದಲ್ಲಿ ಇಂತಹ ಶಕುನಗಳನ್ನು ಬಹಳಷ್ಟು ಗಾಢವಾಗಿ ನಂಬುತ್ತಾರೆ. (ಎಲ್ಲ ಬುಡಕಟ್ಟು ಜನಾಂಗದವರು 'ಸೀನು' ಅಪಶಕುನವೆಂದು ಪರಿಗಣಿಸುತ್ತಾರೆ (ಸಂ.) ನಾಗರಿಕ ಜನಾಂಗ ಕೂಡ.

'ಕುಲಮು ದಾಟಿ ಪೋತ ಮಳ್ಳಿ ವಚ್ಚೀಟಟೆ ಟ್ಲುಲೇದು'
(ಬೇಲಿ ಜಾತಿ ದಾಟಿ ಹೋದರೆ ಬರುವ ಹಾಗಿಲ್ಲ.)

ನಡೆ-ನುಡಿ, ಆಚಾರ-ವಿಚಾರ ಮತ್ತು ರೀತಿ-ನೀತಿಯನ್ನು ಸ್ವಚ್ಛವಾಗಿಟ್ಟು ಕೊಳ್ಳುವುದರ ಕಡೆಗೆ ಸಿದ್ಧರು ಹೆಚ್ಚಿನ ಗಮನ ಕೊಡುತ್ತಾರೆ. ಅದರಲ್ಲಿಯೂ ಹೆಣ್ಣಿಗೆ ಇವೆಲ್ಲ ಬಹುಮುಖ್ಯವಾಗಿರುತ್ತವೆ. ಅವರಲ್ಲಿ ಹೆಣ್ಣು ಇಲ್ಲವೆ ಗಂಡು ಕೆಳಜಾತಿಯವರನ್ನು ಮಾಡಿಕೊಂಡರೆ ಪುನಃ ಅವರ ಸಮಾಜದಲ್ಲಿ ಸೇರಿಸಿಕೊಳ್ಳುವುದೇ ಇಲ್ಲ. ಮೇಲ್ಜಾತಿಯವರನ್ನು ಮಾಡಿಕೊಂಡರೆ ಸ್ವಾಗತಿಸುತ್ತಾರೆ. ಆದರೆ ಅವರ ಹೆಣ್ಣು ಮೇಲು ಇಲ್ಲವೆ ಕೀಳುವ ಯಾವುದೇ ಬೇರೆ ಜಾತಿಯವರನ್ನು ಮದುವೆ ಮಾಡಿಕೊಂಡರೆ ಅವರ

ಸಮಾಜದಲ್ಲಿ ಸ್ಥಳವಿಲ್ಲ. ಒಂದು ಸಲ ಅವಳು ತನ್ನ ಸಮಾಜದಿಂದ ಹೊರಗೆ ಹೋದರೆ ಬರುವ ಹಾಗಿಲ್ಲ.

'ಪೊದ್ದಲು ಚೆಪ್ಪಿನ ಮಾಟ ಪೆರಗು ಅನ್ನಮು'
(ಆಕಳು ಎಮ್ಮೆ ಜೊತೆ ಸೇರಿ ಹೆಂಡಿ ತಿಂತು)

ಮಾನವನಾಗಿ ಹುಟ್ಟಿ ಬಂದ ಮೇಲೆ ಒಳ್ಳೆಯದನ್ನು ಮಾಡಬೇಕು. ಯಾರಿಗೂ ಅನ್ಯಾಯ ಮಾಡಬಾರದು ಎಂದು ತಿಳಿಸಿ ಹೇಳಿದರೂ ಕೆಲವರು ತಮ್ಮ ಕೆಟ್ಟ ಗುಣಗಳನ್ನು ಬಿಡುವುದಿಲ್ಲ. ಇಂತಹ ನೀಚರ ಸಹವಾಸ ಮಾಡಿ ಕೆಡಾರದೆಂದು ಸಿದ್ಧರ ಸಮಾಜ ನೀತಿಯನ್ನು ಬೋಧಿಸುತ್ತದೆ. ಈ ಮಾತನ್ನು ಕಡೆಗಾಣಿಸಿ ಒಳ್ಳೆಯವನು ದಾರಿ ತಪ್ಪಿದರೆ 'ಆಕಳು ಎಮ್ಮೆ ಜೊತೆ ಸೇರಿ ಹೆಂಡಿ ತಿಂತು' ಎಂಬ ಗಾದೆಯನ್ನು ಬಳಸುತ್ತಾರೆ.

'ಪೊದ್ದಲು ಚೆಪ್ಪಿನ ಮಾಟ ಪೆರಗು ಅನ್ನಮು'
(ದೊಡ್ಡವರು ಹೇಳಿದ ಮಾತು ಮೊಸರಿನ ಬುತ್ತಿ)

ತಾನು ಮಾಡುವ ಕೆಲಸಗಳಿಂದ ಬೇರೆಯವರಿಗೆ ತೊಂದರೆ ಆಗುವಂತಿದ್ದರೆ ಸುಡುಗಾಡು ಸಿದ್ಧರ ಹಿರಿಯರು ಅದಕ್ಕೆ ಆಸ್ಪದ ಕೊಡುವುದಿಲ್ಲ. ಕನ್ಯಾ ನಿಶ್ಚಯ, ಮದುವೆ ಸಾಮಾಜಿಕ ಕೊಡು ಕೊಳ್ಳುವಿಕೆಯಲ್ಲಿ ಆಯ ತಪ್ಪುವ ಸಂದರ್ಭದಲ್ಲಿ ಹಿರಿಯರು ಆಧಾರ ಸ್ಥಂಭವಾಗಿ ನಿಂತು ಕಾರ್ಯ ಯಶಸ್ವಿಗೊಳಿಸುತ್ತಾರೆ. ಅವರ ಅನುಭವದ ಮಾತುಗಳು ಸಿದ್ದರಲ್ಲಿಯ ಕಿರಿಯರು ಪಾಲಿಸಿಕೊಂಡು ಬರಲು ಪ್ರಯತ್ನಿಸುತ್ತಾರೆ. ಹಿರಿಯ ಮಾತುಗಳು ಉಲ್ಲಂಘಿಸುವ ವ್ಯಕ್ತಿಗಳಿಗೆ 'ದೊಡ್ಡವರು ಹೇಳಿದ ಮಾತು ಮೊಸರಿನ ಬುತ್ತಿ' ಮರೆಯಬೇಡ ಎಂದು ಕಿವಿ ಮಾತು ಹೇಳುತ್ತಾರೆ.

'ತಿನ್ನೋಳು ದೂರ ಮೈರಿ ಅಯಿತೇ ನೀವು ದೂರಮುಕಾಕು'
(ತಿಂದವರು ದೂರಾದರು ಆದರೆ ನೀನು ದೂರಾಗಬೇಡ).

ಹೊಸದಾಗಿ ಮದುವೆ ಮಾಡಿಕೊಂಡ ದಂಪತಿಗಳಿಗೆ ಹಿರಿಯರು ನೀತಿಯ ಮಾತುಗಳನ್ನು ಹೇಳುತ್ತಾರೆ. ಒಂದು ಒಳ್ಳೆಯ ದಿವಸವನ್ನು ಆಯ್ಕೆ ಮಾಡಿಕೊಂಡು ಸೋಬನ ಶಾಸ್ತ್ರವನ್ನು ನೆರವೇರಿಸುತ್ತಾರೆ. ಆ ಸಂದರ್ಭದಲ್ಲಿ ತಿಂದವರು, ಉಂಡವರು ದೂರಾಗುತ್ತಾರೆ. ಆದರೆ ಕೊನೆಯವರೆಗೂ ನೀವೀರ್ವರೂ ದೂರಾಗಬೇಡಿ ಎಂದು ಬೋಧಿಸುತ್ತಾರೆ.

'ಅಡಪಿಲ್ಲಕು ಪೀಡಿಸ್ತೆ ಪುರುಗು ಔತಾಡು'
(ಹೆಣ್ಣಿಗೆ ಕಾಡಿದವನು ಹುಳ ಆಗುತ್ತಾನೆ)

ಅಗ್ನಿಸಾಕ್ಷಿಯಾಗಿ ದೈವದ ಎದುರಿನಲ್ಲಿ ಹೆಣ್ಣಿಗೆ ತಾಳಿ ಕಟ್ಟಿದ ಗಂಡ ಸಂಸಾರದಲ್ಲಿಯ

ಸಮಸ್ಯೆಗಳಿಗೆ ಹೆದರಿ ಹೆಂಡತಿಗೆ ಕಾಡುವುದು ಇಲ್ಲವೆ ಚಿತ್ರ ಹಿಂಸೆ ಕೊಡುವುದು ಅಪರಾಧವೆನಿಸುತ್ತದೆ. ಈ ಘಟನೆ ಸಿದ್ಧರ ಕುಲಪಂಚಾಯಿತಿಗೆ ತಿಳಿದು ಬಂದರೆ ಅಪರಾಧಿಗೆ ಶಿಕ್ಷೆ ಮತ್ತು ದಂಡವನ್ನು ವಿಧಿಸುತ್ತದೆ. ಅಲ್ಲದೆ ಅವರ ನಂಬಿಕೆಯ ಪ್ರಕಾರ ಹೆಣ್ಣಿಗೆ ಕಾಡಿದವನು ಮುಂದಿನ ಜನ್ಮದಲ್ಲಿ ಹುಳವಾಗಿ ಹುಟ್ಟುತ್ತಾನೆನ್ನುತ್ತಾರೆ.

**'ಪಿಲಿಸ್ತೆ ಪಿಲ್ಲಲು ದುಬುತೆ ದೂಡು'**
(ಕರದರೆ ಮಕ್ಕಳು ತುರಿಸಿದರೆ ದನ)

'ಮಕ್ಕಳು ದೇವರ ಸಮಾನ'. ಅವರನ್ನು ಪ್ರೀತಿ ವಾತ್ಸಲ್ಯದಿಂದ ಕಾಣಬೇಕು. ಮೇಲಿಂದ ಮೇಲೆ ಸಿಟ್ಟು ಮಾಡುವವರ ಇಲ್ಲವೆ ವಿನಾಕಾರಣ ಬಡಿಯುವವರ ಸುತ್ತ ಮಕ್ಕಳು ತಪ್ಪಿಯೂ ಸುಳಿಯಲಾರರು. ಸಂದರ್ಭದೊರೆತಾಗ ಮಕ್ಕಳಿಗೆ ಬುದ್ಧಿ ಮಾತುಗಳಿಂದ ತಿದ್ದಿ ತೀಡಬೇಕು. ದನಗಳನ್ನು ಸಾಕುವುದರ ಜೊತೆಗೆ ಅವುಗಳ ಯೋಗ ಕ್ಷೇಮವನ್ನು ನೋಡಿಕೊಳ್ಳಬೇಕಾಗುತ್ತದೆ. ಸಮಯಕ್ಕೆ ಸರಿಯಾಗಿ ಮೇಯಿಸಿಕೊಂಡು ನೀರು ಕುಡಿಸಬೇಕು. ಬೆಚ್ಚನೆಯ ಸ್ಥಳದಲ್ಲಿ ಕಟ್ಟಿ ಹೇನು, ಉಣ್ಣೆಗಳನ್ನು ತೆಗೆದು ಮೈ ಒರೆಸಬೇಕು. ಅಂದಾಗ ಮಾತ್ರ ದನಗಳು ಆರೋಗ್ಯದಿಂದಿರುತ್ತವೆ. ಹಾಗೆಯೇ ಯುವಕರಿಗೂ ತಿದ್ದಿ ತೀಡಿ ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ಕೆಲಸ ಹಿರಿಯರಿಗೆ ಸಂಬಂಧಿಸಿದೆ.

**'ಮುಗ್ಗುರು ಪೋತೆ ಏಮಿ ಸಿಕ್ಕದು' (ದೊರಕದು)**
(ಮೂರು ಜನರು ಹೋದರೆ ಏನು ದೊರೆಯುವುದಿಲ್ಲ.

ಮೂರು ಸಂಖ್ಯೆ ಸುಡುಗಾಡು ಸಿದ್ಧರಲ್ಲಿ ಅಪಶಕುನದ ಸಂಖ್ಯೆ ಆಗಿದೆ. ಯಾವುದೇ ಕೆಲಸವನ್ನು ಮಾಡುವಾಗ ಸಿದ್ಧರು ಮೂರು ಜನರು ಕೂಡಿಕೊಂಡು ಮಾಡುವುದಿಲ್ಲ. ಸಂಚಾರದಲ್ಲಿಯೂ ಮೂರು ಜನರು ಜೊತೆಗೂಡಿ ಭಿಕ್ಷೆ ಬೇಡಲು ಹೋಗುವುದಿಲ್ಲ. ಅಲ್ಲದೆ ಮೂರು ಜನರು ಯಾವ ಕಡೆಗಾದರೂ ಹೋದರೆ ಮೂರಾಬಟ್ಟೆ ಆಗುತ್ತದೆನ್ನುತ್ತಾರೆ. (ನಾಗರಿಕ ಜನಾಂಗದಲ್ಲಿಯೂ ಮೂರು ಸಂಖ್ಯೆ ಏಳು ಸಂಖ್ಯೆಯ ಮೂಢನಂಬಿಕೆ ಈಗಲೂ ಚಾಲ್ತಿಯಲ್ಲಿದೆ. ಸಂ.)

## ಒಡಪುಗಳಲ್ಲಿ ಸ್ತ್ರೀ ಸಂವೇದನೆಗಳು :

ಸುಡುಗಾಡು ಸಿದ್ಧರ ಹೆಂಗಸರು-ಗಂಡಸರು ಸಾಹಿತ್ಯ ಸೃಷ್ಟಿಮಾಡಲು ಹೊರಟವರಲ್ಲ ಅಥವಾ ಇತರ ಜನಾಂಗ-ಜಾತಿ, ಉಪಜಾತಿಗಳಲ್ಲಿರುವ ಹೆಂಗಸರು-ಗಂಡಸರು ಹೇಳುವಂತೆ ಒಡಪುಗಳನ್ನು ಹೆಚ್ಚಾಗಿ ಹೇಳಲಾರರು. ಮದುವೆ ಮತ್ತು ಸೋಬನ ಕಾರ್ಯಗಳಲ್ಲಿ ಅಲ್ಲಲ್ಲಿ ಒಡಪು ಹೇಳಿ ಆರತಿ ಬೆಳಗುವ ಸಂಪ್ರದಾಯಗಳನ್ನು ನಾವು ಕಾಣುತ್ತೇವೆ. ಹೀಗಾಗಿ ಸಿದ್ಧರಲ್ಲಿ ಒಡಪುಗಳು ಹೆಚ್ಚಾಗಿ ಬೆಳೆದು ಬಂದಿಲ್ಲ. ಸಿದ್ಧರ

ಹೆಂಗಸರು ಹೇಳುವ ಒಡಪುಗಳನ್ನು ಸ್ಥೂಲವಾಗಿ ಅಧ್ಯಯನ ಮಾಡಿ ೧. ಅಕ್ಕರತೆ ೨. ದಾಂಪತ್ಯ ಪ್ರೇಮ ೩. ಗಂಡನ ಗುಣ–ಸ್ವಭಾವ, ೪. ವೃತ್ತಿಗೆ ಸಂಬಂಧಿಸಿದ ಒಡಪುಗಳು ಮತ್ತು ೫. ಸಂಕೀರ್ಣ ಒಡಪುಗಳೆಂದು ವರ್ಗೀಕರಿಸಿಕೊಳ್ಳಲಾಗಿದೆ.

**ಅಕ್ಕರತೆ :**

ಅಕ್ಕ ಇಕ್ಕ ತೋಟ್ಕು
ನಡುಮುಪಗಾಕುದಿವಾಸ್ನ । ಗಾಟ
ನಾಮೊಗುಡು ಪೇರು
ಸೆಪ್ಪಿನೋಳ್ಕಿ ಮೂಡು ಗೂಟಾಲು ...
ಆಚೆ ಈಚೆ ತ್ವಾಟ
ನಡುವೆ ತಂಬಾಕದ ಫಾಟ
ನನ್ನ ಗಂಡನ ಹೆಸರು
ಕೇಳಿದವರಿಗೆ ಮೂರ ಗೂಟ ..........

ಆರತಿ ಹಿಡಿದು ಬೆಳಗುವ ಮುತ್ತೈದೆಯರೆಲ್ಲರಿಗೂ ಒಡಪುಗಳು ಬರುತ್ತವೆ ಎಂದು ಹೇಳಲು ಆಗದು. ಒಡಪು ಹೇಳದಿದ್ದರೆ ಗೆಳತಿಯರು ಬಿಡರು. ಅವರ ಒತ್ತಾಯಕ್ಕೆ ಮಣಿದು "ನನ್ನ ಗಂಡನ ಹೆಸರು ಕೇಳಿದವರಿಗೆ ಮೂರು ಗೂಟ" ಎಂದು ನುಡಿಯುತ್ತಾಳೆ.

ಸುಡುಗಾಡು ಸಿದ್ಧರಲ್ಲಿ ನೂರಾರು ಗುಡಿಸಲಿನಲ್ಲಿ ಬದುಕು ಸಾಗಿಸುವ ಜನರು ಬಡತನದಲ್ಲಿ ಜೀವನ ಕಳೆಯುತ್ತಿದ್ದಾರೆ. ಇವರೆಲ್ಲ ಊರ ಜನರು ನೀಡುವ ಭಿಕ್ಷೆಯ ಮೇಲೆ ಅವಲಂಬಿತರಾಗಿದ್ದಾರೆ. ಭಿಕ್ಷೆ ದೊರೆತರೆ ಊಟ. ಸಿಗದಿದ್ದರೆ ಉಪವಾಸ. ತಮ್ಮ ಹಿಂದಿನವರಿಂದಲೂ ಹಸ್ತಾಂತರವಾಗುತ್ತ ಬಂದಿರುವ ಭಿಕ್ಷಾಟನೆ ಬಿಡಲು ಅವರಿಗೆ ಆಗುತ್ತಿಲ್ಲ. ತುಂಬ ಬಡತನದಲ್ಲಿ ನಾವಿದ್ದೇವೆ ಎಂದು ಸಿದ್ಧರು ಹೆಂಗಸು ಈ ಒಡಪಿನಲ್ಲಿ ವ್ಯಕ್ತ ಪಡಿಸಿದ್ದಾಳೆ.

ಗಿರಗಿರಿ ಚಂದ್ರಗಿರಿ ಆಯಿನ್ನಿ ಪಿಲುವು
ಪುಲುಹನ್ಮು ಮೀದ ಸಕ್ಕರಿ
ನಾಲ್ಗು ನೂರ್ಲು ಆಕ್ಲು ಮೂಡ್ನೂಲ್ಲು ಒಕ್ಕಲು
ಒಪ್ಪಿಚ್ಚೆಯಿ ಅಂಟೆ
ತಪ್ಪಿ ಚೆಗೋನಿ ಪೋತಾಡು.......
ಗರಗರಿ ಚಂದಗಿರಿ ಆತನ ಕರಿ
ಹಾಲು ಅನ್ನ ಮೇಲು ಸಕ್ಕರೆ
ನಾನ್ನೂರು ಎಲೆ ಮುನ್ನೂರು ಅಡಿಕೆ

ಒಪ್ಪಿಸಿಕೊಂಡು ಎಂದರೆ
ತಪ್ಪಿಸಿಕೊಂಡು ಹೋಗತಾನ.........

ಸುಡುಗಾಡು ಸಿದ್ಧರ ಮದುವೆಗಳು ಜರುಗುವುದು ಹೆಚ್ಚಾಗಿ ಅಲಮಟ್ಟಿಯ ಚಂದ್ರಗಿರಿಯ ಬಯಲಿನಲ್ಲಿ. ದಸರಾ ಹಬ್ಬದಂದು ನಾಡಿನ ನೂರಾರು ಸಿದ್ಧರು ಅಲ್ಲಿ ಸೇರಿ ಹಬ್ಬವನ್ನು ಆಚರಿಸುತ್ತಾರೆ. ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇರುವುದರಿಂದ ಗಂಡಿನ ಕಡೆಯವರೆ ಹೆಚ್ಚಿನ ಖರ್ಚನ್ನು ಮಾಡಿ ಮದುವೆ ಮಾಡುತ್ತಾರೆಂಬ ವಿಷಯು ಈ ಒಗಟು ವ್ಯಕ್ತಪಡಿಸುತ್ತದೆ.

**ಒಡಪುಗಳಲ್ಲಿ ಸ್ತ್ರೀ ಸಂವೇದನೆ :**

ಭಿಕ್ಷಾವೃತ್ತಿಗಳಾದ ಸುಡುಗಾಡು ಸಿದ್ಧರು ಭಿಕ್ಷೆ ಬೇಡಿಕೊಂಡು ಜೀವನ ಸಾಗಿಸುತ್ತಾರೆ. ಒಂದು ಸಲ ತಮ್ಮ ಸ್ವಂತದ ಊರು ಬಿಟ್ಟರೆಂದರೆ ಮರಳಿ ಅಲ್ಲಿಗೆ ಯಾವಾಗ ಹೋಗುತ್ತಾರೆಂದು ಹೇಳಲು ಆಗುವುದಿಲ್ಲ. ಸಂಚಾರದಲ್ಲಿ ಬಹಳಷ್ಟು ಕಷ್ಟಗಳಲ್ಲಿ ಸಿಲುಕಿ ಅನುಭವ ಪಡೆದು ಕೊಂಡವರಾಗಿದ್ದಾರೆ. ಅವರ ಒಡಪುಗಳ ಮೇಲೆ ವೃತ್ತಿಯ ಛಾಯೆ ಇರುವುದನ್ನು ಕಾಣುತ್ತೇವೆ.

ಉಂಟೆ ಊರ್ಲಾ ಉಂಡೆಟ್ಲೇದು
ಪಂಡಿಂಡೆಗ್ವಾಡ ಕಟ್ಟಿತವ್ಲಾಡ್ರು............
"ಇದ್ದೂರಾಗ ಇರಾಂಗ ಇಲ್ಲ
ಬಿದ್ದ ಗ್ವಾಡಿ ಕಟ್ಟಾಂಗ ಇಲ್ಲ....."

ಭಿಕ್ಷೆಯಲ್ಲಿ ತೊಡಗಿದ ಮೇಲೆ ತಮ್ಮ ಸ್ವಂತದ ಊರು ಮನೆ ಮರೆತು ಬಿಡುತ್ತಾರೆನ್ನುತ್ತಾಳೆ.

ತಂತಿ ಮೀದ ತಂತಿ
ಒಸಗೇರಿ ಸಂತ
ಸಂತಕಿ ಪೋಯಂಟೆ
ಚಿಂತ ಸೇಸ್ತಾಡು.
ಸಂತಿ ಮೇಲ ಸಂತಿ
ಹೊಸಕೆರೆ ಸಂತಿ
ಸಂತಿಗೆ ಹೋಗಂದ್ರ
ಚಿಂತಿ ಮಾಡತಾನ

ಒಡವನಾದ ತನ್ನ ಗಂಡನಿಗೆ ಸಂತೆಗೆ ಹೋಗೆಂದು ಹೇಳಿದರೆ ಚಿಂತಿ ಮಾಡುತ್ತಾನೆ.

ಕಾರಣ ಸಂತೆಯಲ್ಲಿ ದವಸ ಧಾನ್ಯ, ಪದಾರ್ಥ ಕೊಂಡುಕೊಳ್ಳಲು ಅವನಲ್ಲಿ ಹಣವಿಲ್ಲ. ಅದಕ್ಕಾಗಿ ಚಿಂತಿ ಮಾಡುತ್ತಿದ್ದಾನೆನ್ನುತ್ತಾಳೆ.

ಪೆದ್ದೋಳು ಓಣಿ ಒಗಟೆ ಟಾಚರ
ವಜ್ರಮು ಪೈಲ ಗೆಜ್ಜಿಲಿ ಟಿಕ್ಕಿ
ನಲ್ಲಕ್ವಾಕ ಸೆರಗುಲಾ ಪೋಲಕ
ಸಿಕ್ಕಿ ಬಡಲಡಕಿ ಬಂಗಾರಮು ಸೇನು
ಎಂಡಿಕುಂಡ ಅವಲಕ್ಕಿ ಅನ್ನಮು
ಉತ್ತತ್ತಿ ಉಗ್ಗಿ ಉದ್ದಿನ ಹಪ್ಪಳ
ಗಮ್ಮನೆ ನೈಯಿ ನಲ್ಲಯ್ಯಪತೊಕ್ಕು
ಸಿಕ್ಕಿ ಸಮುದ್ರಮು ವಾಳ್ಳೆನಾರು
ವಾಳು ಪೇರು ಮೀಮು ಸೂಡ್ಲೇದು
ಮಾಪೇರು ವಾಳ್ಳಿ ಗೊತ್ಲೋದು....
ನಾಯಕನ ಹಟ್ಟೆಂಬುದು ಒಂದು ಟಾಚಾರ
ವಜ್ರದೊಲ್ಯಾಗ ಗೆಜ್ಜ ಟಿಕ್ಕಿ
ಕರಿಸೀರಿ ಶ್ಯಾರಗಾನ ಕುಬಸ
ಸಿಕ್ಕ ಬಡಲಡಕಿ ಬಂಗಾರದ ಹೊಲ
ಬೆಳ್ಳಿ ತಪ್ಪಲಿ ಅವಲಕ್ಕಿ ಅನ್ನ
ಉತ್ತತ್ತಿ ಹುಗ್ಗಿ ಉದ್ದಿನ ಹಪ್ಪಳ
ಕಮ್ಮನ ತುಪ್ಪ ಕರಿಬೇವಿನ ಚೆಟ್ನಿ
ಸಿಕ್ಕ ಸಮುದ್ರ ಅವರದಾರು
ಅವರ ಹೆಸರು ನಾವು ಕಾಣೇವು
ನಮ್ಮ ಹೆಸರು ಅವು ಕಾಣರು......

ಹೀಗೆ ಅವರ ಜೀವನ ವಿಧಾನ ಮತ್ತು ಸಾಹಿತ್ಯದಲ್ಲಿ ಮಹಿಳಾ ಸಂವೇದನೆಗಳು ಹಾಸು ಹೊಕ್ಕಾಗಿರುವದು ಕಂಡುಬರುತ್ತವೆ.

◆

# ಸುಡುಗಾಡು ಸಿದ್ಧರ ಜನಪದ ಪ್ರದರ್ಶನ ಕಲೆಗಳು

ಡಾ. ಹರಿಶ್ಚಂದ್ರ ದಿಕ್ಸಂಗೀಕರ

ಪ್ರಸ್ತುತ ಸಂದರ್ಭದಲ್ಲಿ ಜನಪದ ಕಲೆಗಳನ್ನು ಉಳಿಸುವುದು ಮತ್ತು ಬೆಳೆಸುವುದರ ಕುರಿತು ಮಾತನಾಡುವುದೆ ಹಾಸ್ಯಾಸ್ಪದ ಎನಿಸಿಕೊಳ್ಳುತ್ತಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲ್ಲದಂತಹ ಸಂದರ್ಭದಲ್ಲಿ ಈ ಕಲೆಗಳು ಗ್ರಾಮೀಣ ಪ್ರದೇಶಗಳಲ್ಲಿ ಮುಖ್ಯವಾದ ಮನೋರಂಜನೆಯ ಪಾತ್ರವಹಿಸಿದ್ದವು. ಇಂದು ಕಲೆಗಳು ಗ್ರಾಮೀಣ ಪ್ರದೇಶಗಳಲ್ಲಿಯೂ ಇಲ್ಲ. ಏಕೆಂದರೆ ಕಲಾವಿದರು ಇದ್ದಾಗ ಮಾತ್ರಕಲೆಗಳು ಇರಲು ಸಾಧ್ಯ. ಅವರೆ ಇಲ್ಲವೆಂದ ಮೇಲೆ ಕಲೆಗಳು ಹೇಗೆ ಅರಳುತ್ತವೆ ? ಕಲೆಗಳು ಒಂದು ನಾಡಿನ ಭವ್ಯ ಸಂಸ್ಕೃತಿಯ ಆಸ್ತಿ ಎಂದು ಹೇಳಿಕೊಳ್ಳುತ್ತೇವೆ. ಸಂಸ್ಕೃತಿ ಉಳಿಸ ಬೇಕಾದರೆ ಕಲಾವಿದರನ್ನು ಉಳಿಸಲೇಬೇಕು.

ಜಾಗತೀಕರಣದ ಸಂದರ್ಭದಲ್ಲಿ ದೇಶವನ್ನೇ ಒಂದು ಮುಷ್ಟಿಯಲ್ಲಿ ಹಿಡಿದಿಡುವಂತಹ ತಂತ್ರಜ್ಞಾನಗಳ ಆವಿಷ್ಕಾರವಾಗುತ್ತಿದೆ. ಗ್ರಾಮೀಣ ಪ್ರದೇಶದ ಗುಡಿಸಲುಗಳಿಗೂ ಕೂಡ ಜಗತ್ತಿನಲ್ಲಿ ಏನೇನು ನಡೆಯುತ್ತಿದೆ ಎಂಬ ಕ್ಷಣ ಕ್ಷಣದ ಸುದ್ದಿ ಮುಟ್ಟಿಸಲು ಸಮೂಹ ಮಾಧ್ಯಮದ ಟಿ. ವಿ. ಚಾನೆಲ್‌ಗಳು ದಾಪುಗಾಲು ಹಾಕುತ್ತಿವೆ. ಮನೋರಂಜನೆಯಂತೂ ಸಾಕಷ್ಟು ರಂಗು ರಂಗಿನ ಪರದೆಗಳ ಮೇಲೆ ಬರುತ್ತಿವೆ. ಹಾಗಾಗಿ ನಮ್ಮ ದೇಶ ಅಭಿವೃದ್ಧಿ ಹೊಂದುತ್ತಿದ್ದರು. ಇನ್ನೂ ಅನಕ್ಷರತೆ, ಅಜ್ಞಾನ, ಸಾಕಷ್ಟಿದ್ದರೂ, ಗ್ರಾಮೀಣ ಪ್ರದೇಶಗಳಲ್ಲಿ ಜನಪದ ಕಲೆಯನ್ನು ನೋಡುವ ಗೋಡವೆಗೆ ಯಾರೂ ಹೋಗುತ್ತಿಲ್ಲ.

ರೈತಾಪಿ ಜನರು ಈ ಕಲೆಗಳನ್ನು ಪೋಷಿಸಿಕೊಂಡು ಬಂದಿದ್ದರು. ಒಂದು ಗ್ರಾಮದಲ್ಲಿ ಒಬ್ಬ ವೇಷಗಾರ, ಒಬ್ಬ ಸುಡುಗಾಡುಸಿದ್ಧ, ಒಂದು ಗೀಗೀ ಮೇಳ ಬರುತ್ತಿದೆ ಎಂದರೆ ಮನೋರಂಜನೆಗೆ ಪಾರವೇ ಇರಲಿಲ್ಲ. ರೈತಾಪಿ ವರ್ಗದಲ್ಲಿ ಯಂತ್ರೋಪಕರಣದ ಹಾವಳಿ ಹೆಚ್ಚಾಗಿ ದುಡಿಯುವ ವರ್ಗ ಕಡಿಮೆಯಾಗಿದೆ. ಜನಪದ ಕಲೆ ಪ್ರದರ್ಶನ ನೀಡುವ ಕಲಾವಿದರಿಗೆ ಪ್ರೇರಣೆ–ಪೋಷಣೆ ಕೊಡುವವರು ಯಾರೂ ಇಲ್ಲ. ಹಾಗಾಗಿ ಕೂಡು ಕುಟುಂಬವಿದ್ದ ಜನಪದ ಕಲಾ ಪ್ರದರ್ಶಕರು, ಇಂದು ಒಂಟಿಯಾಗಿ ಭಿಕ್ಷೆ

ಬೇಡುತ್ತಿದ್ದಾರೆ. ಒಂದು ಕಾಲಕ್ಕೆ ವೈಭವೋಪೇತವಾಗಿ ಮೆರೆಸಿದ ಕಲೆಗಳು ನಶಿಸಿವೆ. ಆಧುನಿಕತೆಯ ಸಂದರ್ಭದಲ್ಲಿ ಜನಪದ ಕಲೆಗಳು ಹೊಸ ಆವಿಷ್ಕಾರವನ್ನು ತಾಳಿಕೊಂಡು ಕಲೆಗಳು ಜಾತಿ/ವರ್ಗವೆಂಬ ಗುಂಪಿಗೆ ಸೇರದೆ ಮನೋರಂಜನೆಯ ಸಾಧನವಾಗಿ ಬಳಕೆಯಾದಾಗ ಮಾತ್ರ ಮುಂದೆ ಉಳಿಯಲು ಸಾಧ್ಯವಾಗುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ಆಯಾಗಾರರು ತಮ್ಮ ವೃತ್ತಿಯನ್ನು ಅವಲಂಬಿಸಿಕೊಂಡು ಜೀವನಸಾಗಿಸುತ್ತಿದ್ದ ಕಾಲವೊಂದಿತ್ತು. ಈಗ ಕಡಿಮೆಯಾಗುತ್ತಿದೆ. ಹಲಗೆ ಬಾರಿಸಲು ಮಾದಿಗ ಸಮುದಾಯ, ಬಾಜಾ ಬಜಂತ್ರಿಗೆ ಕೊರವರು, ಡೊಳ್ಳು ಬಾರಿಸಲು ಹೀಗೆ ಆಯಾ ಕುಲ ಜಾತಿಗಳು ಕಲೆಯನ್ನು ನಿರ್ವಹಿಸಿಕೊಂಡು ಬಂದಿದ್ದವು. ಈಗ ಹಲಗೆಯ ಬದಲಿಗೆ 'ಬ್ಯಾಂಡ್' ಡೊಳ್ಳಿನ ಬದಲಿಗೆ ಡ್ರಮ್ ಉಪಯೋಗಿಸಿಕೊಂಡು ಕಾಲಮಾನಕ್ಕೆ ತಕ್ಕಂತೆ ಬದಲಾವಣೆ ಪಡೆದುಕೊಂಡು ಅದೇ ಸಮುದಾಯದವರು ಬರಬೇಕೆಂಬ ನಿಯಮವೇನಿಲ್ಲ. ಮನೋರಂಜನೆ ಅಷ್ಟೆ ಮುಖ್ಯವೆನ್ನುವುದು ಪ್ರಸ್ತುತದಲ್ಲಿ ಕಾಣುತ್ತೇವೆ.

ಎಲ್ಲಾ ಅಲೆಮಾರಿ ಸಮುದಾಯಗಳು ಇಂದಿಗೂ ಕೂಡ ನಿರ್ಗತಿಕ ಸ್ಥಿತಿಯಲ್ಲಿವೆ. Food, clothing & Shelter' ಇಲ್ಲದಂತಹ ಪಾಡು ನಾವು ನೋಡುತ್ತೇವೆ. "ದೇಸಿಯ ಪ್ರಭುತ್ವ ಬಳಸಿಕೊಂಡು ಬಿಸಾಡಿದ ಜನವರ್ಗವೇ ಈ ಹೊತ್ತಿನ ಅಲೆಮಾರಿಗಳು." ಅವರ ಸೇವೆ ಅಗತ್ಯ ಇರುವವರೆಗೂ ಮೇಲ್ವರ್ಗ ಬಳಸಿಕೊಂಡಿತು. ಪರಿಹಾರವಾಗಿ ಒಂದೊತ್ತಿನ ಗಂಜಿಗೆ ಕಾಳು ಕಡಿ ದವಸ ದಾನ್ಯ ಪಡೆದುಕೊಂಡು ನೆಮ್ಮದಿ ಸಾಧಿಸಿತು. ಆದರೆ ಇಂದು ಆ ಸ್ಥಿತಿಯಿಲ್ಲ. ಶ್ರಮಪಟ್ಟು ದುಡಿಯುವವರೆಗೂ ಒಂದು ಬಿಡಿಗಾಸು ಸಿಗುವುದಿಲ್ಲ. ಅಲೆಮಾರಿಗಳು ತಮ್ಮದೆ ಸಮುದಾಯದಲ್ಲಿ ಬದುಕಿರುವುದರಿಂದ ಜನ ಸಾಮಾನ್ಯರ ಜೊತೆ ಸಾರ್ವತ್ರಿಕವಾಗಿ ಬೇರೆಯುವುದನ್ನು ರೂಢಿಸಿಕೊಂಡಿಲ್ಲ. ಅಲೆಮಾರಿಗಳಾಗಿ ಊರ ಹೊರಗಿನ ಗುಡಿಸಲುಗಳಲ್ಲಿ ನೆಲೆಸಿರುವಂತೆಯೇ ಇಂದಿಗೂ ಅವರು ಪ್ರತ್ಯೇಕತೆಯನ್ನೇ ಅನುಸರಿಸಿಕೊಂಡು ಬರುತ್ತಿದ್ದಾರೆ. ಅಂತಹವರಲ್ಲಿ ಹಾವಾಡಿಗರು, ದುರಗ ಮುರುಗಿಯರು, ಬುಡಬುಡಕಿಯರು ಹಾಗೂ ಸುಡುಗಾಡುಸಿದ್ಧರು.

ನನ್ನ ಈ ಲೇಖನಕ್ಕೆ ಸೀಮಿತಗೊಳಿಸಿಕೊಂಡಂತೆ ಸುಡುಗಾಡುಸಿದ್ಧರ ಕಲೆಗೆ ಮಾತ್ರ ಸಂಬಂಧಿಸಿದ ಉಲ್ಲೇಖವಿದೆ. ಕರ್ನಾಟಕದ ಅಲೆಮಾರಿ ಸಮುದಾಯಗಳಲ್ಲಿ ಸುಡುಗಾಡುಸಿದ್ಧರ ಸಮುದಾಯವು ಒಂದು. ಈ ಅಲೆಮಾರಿಗಳು ಒಂದು ನಾಡಿನ ವ್ಯಾಪ್ತಿಗೆ ಒಳಪಡುವುದಿಲ್ಲ. ಹೊಟ್ಟೆಪಾಡಿಗಾಗಿ ಎಲ್ಲಾ ನಾಡನ್ನು ಸುತ್ತುತ್ತಾರೆ. ದೇಶ ಸಂಚಾರಿಯಾದ ಇವರು ವಿವಿಧ ಭಾಷೆಯಲ್ಲಿ ಮಾತನಾಡುತ್ತಾರೆ. ತಮ್ಮ Identityಗೆ ಆಂಧ್ರ ಮೂಲದವರು, ಶ್ರೀಶೈಲ ಮಲ್ಲಿಕಾರ್ಜುನನ ಭಕ್ತರು ಎಂದು ಹೇಳಿಕೊಳ್ಳುತ್ತಾರೆ. ಹಲವಾರು ಬುಡಕಟ್ಟು/ಅಲೆಮಾರಿ ಸಮುದಾಯಗಳು ತಮ್ಮ ಪಾರಂಪರಿಕ ಜ್ಞಾನವನ್ನು

ಉಳಿಸಿಕೊಂಡು ಬಂದಂತೆ, ಸುಡುಗಾಡು ಸಿದ್ದರು ಉಳಿಸಿಕೊಂಡಿದ್ದಾರೆ. ಆ ಮೂಲಕವೇ ಸಮುದಾಯ ಗುರುತಿಸಿಕೊಳ್ಳುತ್ತಿದೆ.

## ಸುಡುಗಾಡು ಸಿದ್ದರ ಜನಪದ ಕಲೆ :

ಜನಪದ ಕಲೆಗಳು ಜನಪದರ ಜೀವದಲ್ಲಿ ಹಾಸುಹೊಕ್ಕಾಗಿ ಬೆರೆತಿವೆ. ಧಾರ್ಮಿಕ, ಲೌಕಿಕ, ಆರಾಧನಾ ಹಾಗೂ ಆಚರಣಾ ಕಲೆಗಳೆಂದು ಗ್ರಾಮೀಣ ಪ್ರದೇಶಗಳಲ್ಲಿ ಸಮೂಹ ಮಾಧ್ಯಮಗಳು ಇಲ್ಲದಂತಹ ಈ ಹಿಂದಿನ ಕಾಲದಲ್ಲಿ ಜನಸಮೂಹಕ್ಕೆ ನೈತಿಕತೆ, ಆದರ್ಶ ಮತ್ತು ತತ್ವಗಳನ್ನು ರಾಮಾಯಣ, ಮಹಾಭಾರತದ ಕಥೆಯನ್ನಿಟ್ಟುಕೊಂಡು ನೀತಿ ಬೋಧಿಸಿವೆ. ಹಾಗಾಗಿ ಜನಪದರ ಮೇಲೆ ಹೆಚ್ಚಿನ ಪ್ರಭಾವ ಬೀರತ್ತ ಬಂದಿವೆ. ಆಧುನಿಕತೆಯ ಗಾಳಿಸೋಂಕದ ದಿನಗಳಲ್ಲಿ ಈ ಕಲೆಗಳು ಮನೋರಂಜನೆಯ ಸಾಧನಗಳಾಗಿದ್ದವು. ಆ ಕಾಲದಲ್ಲಿ ತಾವು ಎಷ್ಟೇ ಕಷ್ಟಪಟ್ಟರು ತಾವು ನಕ್ಕು ಜನರನ್ನು ನಗಿಸುವ ಕೆಲಸ ಮಾಡುತ್ತಾರೆ. ಹಾಗಾಗಿ ಇವರಿಗೆ ಜನರಿಂದ ಹೆಚ್ಚಿನ ಪ್ರೇರಣೆ ಮತ್ತು ಪ್ರೋತ್ಸಾಹ ಸಿಗುತ್ತಿತ್ತು. ಪ್ರದರ್ಶನ ನೋಡಿದ ಪ್ರೇಕ್ಷಕ ವರ್ಗ ತಮ್ಮಲ್ಲಿರುವ ಆಹಾರ ಧಾನ್ಯವನ್ನು, ಹಳೆಯ ಬಟ್ಟೆಗಳನ್ನು ಮತ್ತು ಹಣ ಇವುಗಳಲ್ಲಿ ಯಾವುದಾದರೂ ಒಂದು ಕೊಟ್ಟು ಸಮಾಧಾನ ಹೊಂದುತ್ತಿದ್ದರು. ಇಂತಹ ಹೊಟ್ಟೆಪಾಡಿಗೆ ಸಿಗುವ ಪರಿಹಾರಕ್ಕೆ ಮೆಚ್ಚಿಕೊಂಡು ಹವ್ಯಾಸಿ ಕಲಾವಿದರಾಗಿರುವಂತವರೆಲ್ಲ ವೃತ್ತಿ ಕಲಾವಿದರಾಗಿದ್ದು ದುರ್ದೈವದ ಸಂಗತಿ ಏಕೆಂದರೆ ಜನಪದ ಕಲೆಯನ್ನು ಯಾರೂ ನೋಡುತ್ತಿಲ್ಲ. ಆ ಕಲೆಯ ಮೇಲೆಯೇ ಅವಲಂಬನೆಯಾದದ್ದು ಹೆಚ್ಚಿನ ಅತಂತ್ರತೆಯಾಗಿದೆ

ಸುಡುಗಾಡುಸಿದ್ಧರ ಜನಪದ ಕಲೆಯು ಇತರ ಜನಪದ ಕಲೆಗಳಂತೆ ಗೀತ, ನೃತ್ಯ, ಆರಾಧನಾ ಮತ್ತು ಶೃಂಗಾರ ಮುಂತಾದ ಕಲೆಗಳ ಪಟ್ಟಿಗೆ ಸೇರುವುದಿಲ್ಲ. ಇದೊಂದು ಅಪ್ಪಟ ಮನೋರಂಜನೆಯ ಹಾಗೂ ಕೈಚಳಕದ ಕಲೆಯಾಗಿ ಕಂಡು ಬರುತ್ತದೆ. ಸುಡುಗಾಡು ಸಿದ್ಧರ ಕಲೆಗೆ ಯಾವುದೇ ಸಾಹಿತ್ಯದ ಅಬ್ಬರದ ಧ್ವನಿಯಿಲ್ಲ. ಜೋರಾಗಿ ಬರಿಸುವ ವಾದ್ಯಗಳಿಲ್ಲ. ಹಾಗಾಗಿ ಜನಪದ ಕಲೆಗಳಲ್ಲಿಯೇ ಇದು ಅಲಕ್ಷ್ಯಕ್ಕೆ ಗುರಿಯಾಗಿದೆ. ಇದನ್ನು ಸಂಕೀರ್ಣ ಕಲೆಯೆಂದು ಕೂಡ ಗುರುತಿಸಲಾಗಿದೆ.

## ಕಲೆಯ ಪ್ರದರ್ಶನಕ್ಕೆ ಕಾಲಮಿತಿಯಿಲ್ಲ :

ಆರಾಧನಾ ಮತ್ತು ಆಚರಣಾ ಕಲೆಗಳಿಗೆ ಮಾತ್ರ ಸಮಯ, ಸಂದರ್ಭ ಮತ್ತು ಕಾಲಮಿತಿಯಿದೆ. ಹವ್ಯಾಸಿ ಮತ್ತು ಮನೋರಂಜನಾ ಕಲೆಗಳ ಪ್ರದರ್ಶನಕ್ಕೆ ಕಾಲಮಿತಿಯಿಲ್ಲ. ಮನೋರಂಜನೆಯೇ ಮುಖ್ಯ. ಜನಪದ ಮನೋರಂಜಕನಿಗೆ ಉಪಜೀವನವೆ ಮುಖ್ಯ. ಬೇರೆ ಕಲೆಗಳಿಗೆ ಆಚರಣೆಯ ಸಂದರ್ಭದಲ್ಲಿ ವೀಳ್ಯೆಕೊಟ್ಟು ಪ್ರದರ್ಶನ ಕೊಡಲು ಆಹ್ವಾನಿಸುತ್ತಾರೆ. ಆದರೆ ಸುಡುಗಾಡುಸಿದ್ಧರ ಕಲೆಗಳಿಗೆ ಹಾಗಿಲ್ಲ. ಸಿದ್ಧ ಪ್ರದರ್ಶನ ಕೊಡಬೇಕಾದಾಗ ಊರ ಗೌಡನ ಅನುಮತಿ ಪಡೆದುಕೊಂಡು ಕಲೆಯನ್ನು

ಪ್ರದರ್ಶಿಸಬೇಕು. ಒಂದು ಹೋಬಳಿ ಮಟ್ಟಿನಲ್ಲಿ ತನ್ನ ಗುಡಿಸಲು ಹಾಕಿಕೊಂಡು ಆ ಊರಿನ ಸುತ್ತೆಲ್ಲ ವ್ಯಾಪ್ತಿಯಲ್ಲಿರುವ ಹಳ್ಳಿಗಳಿಗೆ ತನ್ನ ಕಾಲ್ನಡಿಗೆಯಿಂದ ಹೋಗಿ ಪ್ರದರ್ಶನ ಕೊಡುತ್ತಾನೆ. ಈ ಪ್ರದರ್ಶನ ಕಾಲಾವಧಿಯು ೧ ಅಥವಾ ೨ ತಾಸಿನದಾಗಿರಬಹುದು. ಹೆಚ್ಚಿನ ಸಮಯ ಪ್ರದರ್ಶನಕ್ಕೆ ತಗಲುವುದಿಲ್ಲ. 'ಜನಪದ ಕಲೆಗಳು ಒಂದು ನಾಡಿನ ಒಂದು ಪ್ರದೇಶದ ಭವ್ಯ ಪರಂಪರೆಯ ಅಪೂರ್ವ ಸ್ವತ್ತು. ಜನತೆಯ ಜೀವನದ ವಿಧಾನದ ಮೇಲೆ, ಸಾಂಸ್ಕೃತಿಯ ಪರಂಪರೆಯ ಮೇಲೆ ಈ ಕಲೆಗಳು ಬೆಳಕು ಚೆಲ್ಲುತ್ತವೆ. ಜನಪದ ಕಲೆಗಳು ಮಾನವನ ಸಾಂಸ್ಕೃತಿಕ ಇತಿಹಾಸವನ್ನು ಅರಿಯುವಲ್ಲಿ ತುಂಬಾ ಅರ್ಥಪೂರ್ಣ ಮತ್ತು ಸಹಾಯಕಾರಿ ಎನಿಸುತ್ತವೆ.' ಜನಪದ ಕಲೆ ಅದು ಸಾಮಾನ್ಯ ಜನತೆಯ ಕಲೆಯಾಗಿದ್ದರೂ, ಕರ್ನಾಟಕದ ಚಾರಿತ್ರಿಕ ಸಂಧರ್ಭದಲ್ಲಿ ಅದನ್ನು ಗುರುತಿಸಲೇ ಬೇಕಾಗುತ್ತದೆ. ಹಬ್ಬ ಮತ್ತು ಜಾತ್ರೆಯ ಸಂದರ್ಭಗಳಲ್ಲಿ ಈ ಕಲೆ ಪ್ರದರ್ಶನಗೊಳ್ಳುವುದಿಲ್ಲ. ಬೇಸಿಗೆಯ ದಿನಗಳಲ್ಲಿ ಜನಪದರ ಕೆಲಸಕಾರ್ಯಗಳೆಲ್ಲ ಮುಗಿಸಿಕೊಂಡ ಮೇಲೆ ಕಲೆಯ ಪ್ರದರ್ಶನಕ್ಕೆ ಗ್ರಾಮಗಳಲ್ಲಿ ಅವಕಾಶವಿರುತ್ತದೆ.

**ಪ್ರದರ್ಶನದ ಸಿದ್ಧತೆ :**

ಜಾತ್ರಾಮಹೋತ್ಸವ, ಧಾರ್ಮಿಕ ಆಚರಣೆ, ಹಬ್ಬ ಹರಿದಿನಗಳಲ್ಲಿ ಊರಿನ ಹಿರಿಯರು ಸೇರಿಕೊಂಡು ಕಲಾಮೇಳಗಳನ್ನು ಕರೆಸುವುದುಂಟು. ಮುಖ್ಯವಾಗಿ ಹಾಡು, ನೃತ್ಯ, ದೊಡ್ಡಾಟ ಮತ್ತು ಯಕ್ಷಗಾನದಂತಹ ಮೇಳಗಳನ್ನು ಆಹ್ವಾನಿಸುವುದು ವಾಡಿಕೆ. ಈ ಮೇಳಗಳು ಹಗಲು–ರಾತ್ರಿಯೆನ್ನದೆ ಉತ್ಸವದಲ್ಲಿ ಕಲಾಪ್ರದರ್ಶನವನ್ನು ನೀಡುತ್ತವೆ. ಆಹ್ವಾನವಿತ್ತ ಕಲಾಮೇಳದವರಿಗೆ ಊರಿನವರು ಉಟೋಪಚಾರದ ವ್ಯವಸ್ಥೆ ಮಾಡುವರು. ಅಂತಹ ವ್ಯವಸ್ಥೆಯು ಸುಡುಗಾಡುಸಿದ್ಧರಿಗೆ ಸಿಗುವುದಿಲ್ಲ. ಇವರು ಅಲೆಮಾರಿಗಳಾಗಿರುವುದರಿಂದ ಜಾತ್ರಾ ಮಹೋತ್ಸವದಲ್ಲಿ ಮಾನ್ಯತೆ ಸಿಗುವುದಿಲ್ಲ. ಆ ಕಾರಣಕ್ಕಾಗಿ ಸುಡುಗಾಡುಸಿದ್ಧರು ಸಂಪೂರ್ಣವಾಗಿ ವೈಶಾಖ ಮಾಸದಲ್ಲಿ ತಾವು ಉಂಬಳಿಯಾಗಿ ಪಡೆದುಕೊಂಡಂತಹ ಊರುಗಳಲ್ಲಿ ಭಿಕ್ಷಾಟನೆಗಾಗಿ ಸಂಚರಿಸುತ್ತಾರೆ. ಒಂದು ಊರು ಪ್ರವೇಶಿಸುತ್ತಿದ್ದಂತೆಯೇ ಊರಿನ ಮುಖಂಡನ ಅಪ್ಪಣೆ ಪಡೆಯಬೇಕಾದುದು ಅವಶ್ಯ. ಏಕೆಂದರೆ ಈ ಕಲೆಯು ಪ್ರೇಕ್ಷಕರಲ್ಲಿ ಭಯವನ್ನುಂಟು ಮಾಡುತ್ತದೆ ಮತ್ತು ಭಾನಾಮತಿ, ಕೇಗಾಮತಿಗೆ ಸಮನಾಗಿದೆ ಎಂದು ತಿಳಿದುಕೊಂಡ ಜನಪದರು ಈ ಕಲೆಯ ಪ್ರದರ್ಶನವನ್ನು ನೋಡಲು ಗೃಹಿಣಿಯರಿಗೆ ಮುಕ್ತವಾದ ಅವಕಾಶವಿಲ್ಲ. ಏನಿದ್ದರೂ ಮುದುಕರು–ಮುದುಕಿಯರು ಮತ್ತು ವಯಸ್ಕರು ಮಾತ್ರ ಕಲೆಯ ಪ್ರದರ್ಶನವನ್ನು ವೀಕ್ಷಿಸುತ್ತಾರೆ. ಇವರು ಯಾವುದೆ ಹಳ್ಳಿಗೆ ಹೋದರೂ ಸ್ಮಶಾನದಲ್ಲಿಯೇ ಟೆಂಟ ಹೊಡೆದುಕೊಂಡು ನೆಲೆಸಿರುತ್ತಾರೆ.

ಸಿದ್ಧನು ತನ್ನ ಕಲೆಯನ್ನು ಪ್ರದರ್ಶಿಸಬೇಕಾದರೆ, ಪ್ರದರ್ಶನ ಕೊಡುವುದಕ್ಕಾಗಿಯೇ ಮೀಸಲಾದಂತಹ ಉಡುಗೆ ತೊಡುಗೆಗಳಿವೆ. ಇನ್ನುಳಿದಂತಹ ಸಮಯದಲ್ಲಿ

ಸಾಮಾನ್ಯರಂತೆಯೇ ಇರುತ್ತಾನೆ. ಇವರು ಸುಡುಗಾಡಿನಲ್ಲಿ ವಾಸಮಾಡುವುದರಿಂದ 'ಸುಡುಗಾಡು' ಎಂದು, ಒಂದು ಕಲೆಯ ಪ್ರದರ್ಶನ ತನ್ನ ಸಿದ್ಧಹಸ್ತದಿಂದ (ಕರಗತ) ಕೊಡುವುದರಿಂದ 'ಸಿದ್ಧ'ನೆಂದು ಕರೆದಿರಬಹುದು. ಸಿದ್ಧ ಪ್ರದರ್ಶನ ಕೊಡಬೇಕಾದರೆ ತಾನೊಂದು ಕಟ್ಟಿಕೊಂಡ ಗುಡಿಸಲಿನಲ್ಲಿಯೇ ಭಸ್ಮ ಮತ್ತು ಕುಂಕುಮ ಹಾಗೂ ಅರಿಷಿಣವನ್ನು ಹಚ್ಚಿಕೊಂಡು ಪ್ರದರ್ಶನಕ್ಕೆ ತಯ್ಯಾರಿಯಾಗುತ್ತಾನೆ. ವೇಷಭೂಷಣದಲ್ಲಿ ವಿವಿಧ ಬಟ್ಟೆಗಳಿಂದ, ವಿವಿಧ ಬಣ್ಣಗಳಿಂದ ಹೊಲಿದುಕೊಂಡಿದ್ದು ಉದ್ದನೆಯ ನಿಲುವಂಗಿ, ಕೊರಳಲ್ಲಿ ರುದ್ರಾಕ್ಷಿಮಣಿ ತಲೆಗೆ ಕಟ್ಟಿದ ರುಮಾಲಿನ ಮುಂಭಾಗಕ್ಕೆ ಸಿಕ್ಕಿಸಿದ ನವಿಲಿನ ಗರಿ, ಕಾಲಿಗೆ ತಾಮ್ರದ ಬಳೆ, ಕೈಯಲ್ಲಿ ಕಮಂಡಲ ಬಗಲಿಗೆ ಉದ್ದವಾದ ಜೋಳಿಗೆ, ಕೈಗೆ ಭಸ್ಮ ಧಾರಣೆ ಮಾಡಿಕೊಂಡಿರುತ್ತಾನೆ. ಈ ಉಡುಪು ಧರಿಸಿ ಅಲಂಕಾರವಾದ ಮೇಲೇನೆ ಭಿಕ್ಷಾಟನೆ ಮಾಡಲು ಅಥವಾ ಕಲಾಪ್ರದರ್ಶನ ಮಾಡಲು ಊರೊಳಗೆ ಪ್ರವೇಶಿಸುತ್ತಾನೆ. ಇದು ಪ್ರದರ್ಶನಕ್ಕೆ ಸಿದ್ಧನಾದ ಸುಡುಗಾಡುಸಿದ್ಧನ ವೇಷಭೂಷಣ.

## ಸಿದ್ಧರಾಟಕ್ಕೆ ಬೇಕಾಗುವ ವಸ್ತುಗಳು ಮತ್ತು ಪ್ರದರ್ಶನ :

ಸುಡುಗಾಡುಸಿದ್ಧರು ಪ್ರದರ್ಶಿಸುವ ಕಲೆಗೆ ವಿಶೇಷವಾದ ಸ್ಥಳವೇನು ಬೇಕಾಗಿಲ್ಲ. ಬೇರೆ ಬೇರೆ ಜನಪದರ ಕಲಾಪ್ರದರ್ಶನಕ್ಕೆ ಅಟ್ಟ ಅಥವಾ ವೇದಿಕೆ ಬೇಕು. ಇದಕ್ಕೆ ನೆಲಸಮವಾದ ಜಾಗವೊಂದಿದ್ದರೆ ಸಾಕು. ಹತ್ತಾರು ಜನರು ಒಂದೆಡೆ ಸೇರುವಂತಹ ಸ್ಥಳವಿದ್ದರೂ ಆಗಬಹುದು. ಸಿದ್ಧರು ಪ್ರದರ್ಶಿಸುವ ಕಲೆಗೆ ಪ್ರೇಕ್ಷಕರು ಕಲಾವಿದನ ಸಮೀಪವೆ ಹಾಗೂ ಅವರ ಎದುರಿನಲ್ಲಿಯೇ ಇರಬೇಕು ಅಂದಾಗಲೆ ಕಲೆಯ ಕಲಾತ್ಮಕತೆ ಗೊತ್ತಾಗುತ್ತದೆ. ಸಿದ್ಧರ ಕೈಚಳಕದ ಆಟಕ್ಕೆ 'ಲಾಗಹಾಕು' ಎಂದು ಕರೆಯುತ್ತಾರೆ. ಈ ಕೈಚಳಕದ ಆಟಕ್ಕೆ ವಿಶೇಷವಾದ ಸಾಮಾನು ಸಲಕರಣೆಗಳು ಬೇಕಾಗಿಲ್ಲ. ಸ್ಥಳೀಯವಾದಂತಹ ದೇಸಿಯ ವಸ್ತುವನ್ನೇ ಬಳಕೆ ಮಾಡಿಕೊಂಡು ಅದ್ಭುತ ಮನೋರಂಜನೆಯನ್ನು ಕೊಡುತ್ತಾರೆ. ಅವರಿಗೆ ಬೇಕಾಗುವ ವಸ್ತುಗಳೆಂದರೆ ವಿಭೂತಿ, ಕುಂಕುಮ, ಲಿಂಬೆಹಣ್ಣು, ಚೇಳು, ಕಲ್ಲಿನ ಗುಂಡು, ನಾಣ್ಯ, ಲಿಂಗ, ಬಸವಣ್ಣ, ಹಾವಿನತಲೆ ಕಪ್ಪೆತಲೆ, ಬಸವಣ್ಣ, ಬಾಣತಿ ಹಸ್ತ, ಜಿಂಕೆ ಚರ್ಮ ಡೋಗಿ, ಅಲಗೂರುನಾಗಮ್ಮ, ಚೌಡಮ್ಮ, ಹೆಣ್ಣು ದೇವತೆಯ ಮೂರ್ತಿಗಳು ತಮ್ಮ ಜೋಳಿಗೆಯಲ್ಲಿ ಇರಿಸಿಕೊಂಡಿರುತ್ತಾರೆ. ಇವೆಲ್ಲ ವಸ್ತುಗಳಿದ್ದರೆ ವಿವಿಧ ನಮೂನೆಯ ಕೈಚಳಕಮಾಡಬಲ್ಲ. ಇಲ್ಲದಿದ್ದರೆ ಯಾವುದೇ ಪ್ರದರ್ಶನ ಕೊಡಲು ಸಾಧ್ಯವಿಲ್ಲ.

## ಜೋಳಿಗೆ ಜೊತೆ ಸಂವಾದ :

ಯಾವುದೆ ಒಂದು ಜನಪದ ಕಲೆ ಏಕಪಕ್ಷೀಯವಾಗಿ ಕಲೆಯ ಪ್ರದರ್ಶನ ಮಾಡುತ್ತಿದ್ದರೆ ಪ್ರೇಕ್ಷಕರಿಗೆ ಹೆಚ್ಚಿನ ಮನೋರಂಜನೆ ಕೊಡಲು ಸಾಧ್ಯವಿಲ್ಲ. ಈಗಾಗಲೆ

ಏಕಪಕ್ಷೀಯ ಕಲೆಗಳೆಲ್ಲ ದ್ವಿಪಕ್ಷೀಯವಾಗುತ್ತಿವೆ. ಅದರಲ್ಲೂ ಸವಾಲ್ ಮತ್ತು ಜವಾಬಗಳಿದ್ದಂತೆ. ಅದು ಹೆಣ್ಣು ಗಂಡಿನ ಕುರಿತಾಗಿರುತ್ತದೆ. ಇಲ್ಲವೆ ಗಂಡು-ಗಂಡಸರ ಪಕ್ಷವೇ ಆಗಿರಬಹುದು. ಅಲ್ಲಿ ಸ್ಪರ್ಧಾ ಮನೋಭಾವವಿರುತ್ತದೆ. ಹಾಗಾಗಿ ಪ್ರೇಕ್ಷಕರಿಗೆ ಸಂವಾದದಲ್ಲಿ ಸವಾಲ್-ಜವಾಬಿನಲ್ಲಿ ವಾದ-ಪ್ರತಿವಾದದ ಹಾಡುಗಳಲ್ಲಿ ಹೆಚ್ಚಿನ ಆಸಕ್ತಿಯುಂಟು. ಆದರೆ ಸುಡುಗಾಡುಸಿದ್ದರ ಕಲೆಯಲ್ಲಿ ಸಿದ್ಧ ಒಬ್ಬನೆ ಕಲಾವಿದ. ಇದು ಗಂಡಸರು ಪ್ರದರ್ಶಿಸುವ ಕಲೆ. ಇಲ್ಲಿ ಯಾರಿಗಾರು ಸ್ಪರ್ಧಿದಾರರಿಲ್ಲ. ಅದಕ್ಕಾಗಿ ಕಲಾವಿದ ಜೋಳಿಗೆಯಲ್ಲಿರುವ ಮಲ್ಯಾಡದ ಸುಬ್ಬಿ, ಚೌಡಿ, ನಾಗಿ ಎನ್ನುವಂತಹ ಹೆಣ್ಣಿನ ಮೂರ್ತಿಯನ್ನು ಮಾಡಿಕೊಂಡು ಅವುಗಳ ಜೊತೆಯಲ್ಲಿಯೇ ಸಂವಾದ ನಡೆಸುತ್ತಾನೆ. ಇದು ಆ ಕಲೆಯಲ್ಲಿಯೇ ವಿಶಿಷ್ಟವಾದ ಪ್ರಸಂಗ.

ಸಿದ್ಧನ ಜೋಳಿಗೆಯಲ್ಲಿ ಸರ್ವವೇ ಅಡಗಿರುತ್ತದೆ ಇದು ಶಿವನಿಂದ ದತ್ತವಾದ ಜೋಳಿಗೆಯಾಗಿದೆ. ತಂದೆಯಿಂದ ಮಗನಿಗೆ ಬರುವ ಆಸ್ತಿಯಲ್ಲಿ ಈ ಜೋಳಿಗೆಯು ಒಂದು. ಜೋಳಿಗೆಯು ಸಾಮಾನ್ಯವಾಗಿ ನಾಲ್ಕೈದು ಪದರಿನದಾಗಿರುತ್ತದೆ. ಅದರಲ್ಲಿ ಜನಪದ ವೈದ್ಯದ ಬೇರುಗಳು ಸಹ ಇರುತ್ತದೆ. ಪ್ರದರ್ಶನ ಮುಗಿದ ನಂತರ ಅನಾರೋಗ್ಯದಿಂದ ಬಳಲುತ್ತಿರುವವರು ಇವರಲ್ಲಿ ಚಿಕಿತ್ಸೆಯನ್ನು ಪಡೆಯುತ್ತಾರೆ. ಜಡಿಬೂಟಿಯಲ್ಲಿ ಆ ಒಂದು ಶಕ್ತಿಯಿದೆ ಎನ್ನುವುದು ಜನಪದರ ನಂಬಿಕೆಯಾಗಿದೆ. ಜೋಳಿಗೆಯನ್ನು ಕೆಳಗಿಟ್ಟು ಅದರಲ್ಲಿರುವ ಪ್ರತಿಯೊಂದು ವಸ್ತುವನ್ನು ಖಾಲಿಮಾಡಿ ತನ್ನೆದುರಿಗಿಟ್ಟುಕೊಳ್ಳುತ್ತಾನೆ. ಆ ಖಾಲಿಯಾದ ಜೋಳಿಗೆಯನ್ನು ಪ್ರೇಕ್ಷಕರಿಗೆ ತೋರಿಸಿ 'ಮಲ್ಯಾಡದ ಮಲ್ಲಿ' ಎಂದು ಜೋಳಿಗೆ ಹಿಸುಕುತ್ತಾನೆ. ಜೋಳಿಗೆಯಿಂದ 'ಚಿಂವಕ್' ಎಂಬ ಶಬ್ದ ಬರುತ್ತದೆ. ಖಾಲಿಯಾದ ಜೋಳಿಗೆಯಿಂದ ಶಬ್ದ ಬರುವುದೆ ಒಂದು ಅಚ್ಚರಿಯ ಸಂಗತಿಯಾಗಿ ಪ್ರೇಕ್ಷಕರಿಗೆ ಕಾಣುತ್ತದೆ. ಹೀಗೆ ಅವನ ಮಾತು ಜೋಳಿಗೆಯೊಳಗಿನ ಮಲ್ಲಿಯ ಜೊತೆ ಮುಂದುವರೆಯುತ್ತದೆ. ಹಾಗೆ ಮುಂದುವರೆಸುವಾಗ ಜೋಳಿಗೆಯ ಮೇಲೆ ಘೋಲ್ಡಮಾಡಿದ ಜಿಂಕೆಯ ಚರ್ಮದಿಂದ ಬಡಿಯುತ್ತಾನೆ. 'ಮಲ್ಯಾಡದ ಮಲ್ಲಿ' ಎಂದಾಗ ಒಂದೇಟು ಚರ್ಮದಿಂದ ಆಕುತ್ತಾನೆ ಆಗ ಚಿಂವಕ ಅನ್ನುತ್ತದೆ. ಮಲ್ಯಾಡದಾಗ ಇದ್ಯಾ/ಒಂದೇಟು/ಚಿಂವಕ್ ಶಬ್ದ ಮಲ್ಯಾಡ ಬಿಟ್ಟುಬಂದ್ಯಾ/ಒಂದೇಟು/ಚಿಂವಕ್ ಶಬ್ದ ಹೀಗೆ ಸಿದ್ದನ ಮಾತಿನ ಪ್ರತಿಕ್ರಿಯೆಯಾಗಿ ಜೋಳಿಗೆಯಿಂದ ಪಕ್ಷಿಯ ಶಬ್ದ ಹೊರಬರುತ್ತಿರುತ್ತದೆ. ಮನೋರಂಜಕ ಸಿದ್ದ ಪುರುಷನಾಗಿರುವುದರಿಂದ ಆತ ಹೆಣ್ಣಿನ ಜೊತೆ ಸಂವಾದ ನಡೆಸುತ್ತಿದ್ದಾನೆಂಬುದು ಕೇಳುಗರಿಗೆ ಕುತೂಹಲದ ಸಂಗತಿಯಾಗಿ ಕಂಡು ಬರುತ್ತದೆ.

**ಕಣ್ಕಟ್ಟು-ಕೈಚಳಕ :**

ಕಣ್ಕಟ್ಟು ಮತ್ತು ಕೈ ಚಳಕದಿಂದ ಕೆಲವೊಂದು ಚಮತ್ಕಾರಿಕವಾದ ವಿದ್ಯೆಯನ್ನು

ಮಾಡಿ ತೋರಿಡುತ್ತಾನೆ. 'ಅ ಜಾ ಜಾ ಜಾ ಜಾ ಜಾ ಹೂಪ್, ಅ ಗ ಗ ಗ ಗ ಹೂಪ್' ಹೀಗೆ ಜನರನ್ನು ಕೇಂದ್ರಿಕೃತವಾದ ನೋಟಕ್ಕೆ ಕರೆದೊಯುತ್ತಾನೆ. ಬಾಯಿಂದ ಮಾತನಾಡುತ್ತಾ, ಕೈಯಿಂದ ಸಂಜ್ಞೆಮಾಡುತ್ತ ಇರುವುದರಿಂದ ಜನರು ಅಚ್ಚರಿಯ ದೃಷ್ಟಿ ಮೂಡಿಸಿ ಏನೋ ಮಾಡುತ್ತಾನೆಂಬ ಅಚ್ಚರಿ ಇರುತ್ತದೆ. ಜೋಳಿಗೆಯಿಂದ ಒಂದು ಗಜ್ಜುಗ ಬಾಯಿಯಲ್ಲಿ ಹಾಕಿಕೊಂಡು ಹತ್ತಾರು ಗಜ್ಜುಗಗಳನ್ನು ಬಾಯಿಯಿಂದ ಹೊರಗೆ ತೆಗೆಯುತ್ತಾನೆ. ಒಂದೊಂದು ತೆಗೆಯುತ್ತಲೆ ಇನ್ನೂ ಗಂಟಲಲ್ಲಿ ಇವೆ ಎಂದು ಕೈಬೆರಳಿನಿಂದ ಗಂಟಲನ್ನು ಬಡಿದು ತೋರಿಸುತ್ತಾನೆ. ಗಜ್ಜುಗ ಮೂಗಿನಲ್ಲಿಟ್ಟು ಕಿವಿಯಿಂದ ಅಥವಾ ಬಾಯಿಯಿಂದ ಹೊರಗೆ ತೆಗೆಯುತ್ತಾನೆ. ನಾಣ್ಯಗಳನ್ನು ನೋಟುಗಳನ್ನಾಗಿ ಮಾಡುವುದು, ಗಾಜಿನ ಗುಂಡುಗಳಿಂದ ಬಸವಣ್ಣ ಮಾಡುವುದು, ಕಪ್ಪೆಯಿಂದ ನಾಸಿಡಬ್ಬಿ ಮಾಡುವುದು, ಲಿಂಗವನ್ನು ಮಾಯಮಾಡಿ ಈಶ್ವರನನ್ನಾಗಿ ಮಾಡುವುದು. ಇಂತಹ ಕಲೆಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಬೇಡಿಕೆ ಜಾಸ್ತಿ. ಇವನ್ನು ಗ್ರಾಮ ಪರಿಸರದಲ್ಲಿ ನೋಡಿ ರಂಜಿಸಬೇಕು. ವೈಜ್ಞಾನಿಕ ಮತ್ತು ವೈಚಾರಿಕ ದೃಷ್ಟಿಕೋನ ಹಚ್ಚಲು ಹೋದರೆ, ರಸಭಂಗವಾಗುತ್ತದೆ. ಈ ಕಲೆ ಬುದ್ಧಿಗೆ ಸಂಬಂಧಿಸಿದ್ದಲ್ಲ, ಭಾವಕ್ಕೆ ಸಂಬಂಧಿಸಿದ್ದಾಗಿದೆ. ಸಿದ್ಧ ತನ್ನ ಕೈಚಳಕವನ್ನು ತೋರಿಸುವಾಗ ಜೋಳಿಗೆ ಬಿಟ್ಟು ದೂರ ಇರುವುದಿಲ್ಲ. ಜೋಳಿಗೆ ಇಲ್ಲದಿದ್ದರೆ ಸಿದ್ಧನಾಟ ನಡೆಯುವುದಿಲ್ಲ. ಅದಕ್ಕಾಗಿ ಈ ನುಡಿ ಹೇಳಿರಬೇಕು.

ಗೌಡರಾಟ ಚಾವಡ್ಯಾಗಂತ
ಹಾವಿನಾಟ ಹುತ್ತ್ಯಾಗಂತ
ಮಂಗನಾಟ ಗಿಡದಾಗಂತ
ಸಿದ್ಧರಾಟ ಜೋಳಗ್ಯಾಗಂತ
ಇವೆಲ್ಲ ಖರೆ ಆಗಿದ್ರೆ
ನಾವೆಲ್ಲ ಇಲ್ಯಾಕ ಬರತಿದ್ವಿ
ಎಲ್ಲಾ ಖಾಲಿ ನೋಡಾಕೊಂದ ಚಮತ್ಕಾರ
ಆಗಾಟ ಬೋಗಾಟ ಒಂದಿನ ಲಾಗಾಟ.

ಯಾರ್‍ಯಾರ ಆಟ ಯಾವುದರಲ್ಲಿ ನಡೆಯುತ್ತದೆ ಎಂದು ಹೇಳುತ್ತ ಜೋಳಿಗೆಯ ಮಹತ್ವವನ್ನು ಹೇಳುತ್ತಾನೆ. ತಾವು ತೋರಿಸುವ ವಿದ್ಯೆ ಸತ್ಯ ಆಗಿದ್ರೆ, ನಮಗೇಕೆ ಇಂತಹ ಪರಿಸ್ಥಿತಿ ಬರುತ್ತದೆ. ಕಾಗದಕ್ಕೆ ನೋಟು ಮಾಡುವವರು ನಾವಾಗಿದ್ದರೇ ಭಿಕ್ಷೆ ಏಕೆ ಬೇಡುತ್ತೇವೆ. ಇದೆಲ್ಲ ಕಣ್ಕಟ್ಟು ಎಂಬ ಸತ್ಯವನ್ನು ಕಲೆ ಪ್ರದರ್ಶನವಾದ ಮೇಲೆ ದುಡ್ಡು ಅಥವಾ ಧಾನ್ಯವನ್ನು ಬೇಡಿಕೊಳ್ಳುವಾಗ ಈ ಮಾತನಾಡುತ್ತಾನೆ. ಎಲ್ಲರು ಒಂದಿನ 'ಲಾಗಾಟ' ಅನ್ನುವ ಮಾತಿನ ಹಿನ್ನೆಲೆಯಲ್ಲಿ ಅವರ ವಿರಕ್ತಿ ಭಾವವನ್ನು ಕಾಣುತ್ತೇವೆ.

ಪ್ರದರ್ಶನದ ಸಮಯದಲ್ಲಿ ಜನರ ಮನಸ್ಸನ್ನು ಒಂದೇ ಕಡೆಗೆ ಕೇಂದ್ರಿಕರಿಸಲು, ಏರು ಧ್ವನಿಯಲ್ಲಿ ಧ್ವನಿ ಸಂಜ್ಞೆ ಮಾಡುತ್ತಾನೆ. ಅದ್ಹೇಗೆಂದರೆ 'ಆ ಜ್ಯಾ ಜ್ಯಾ ಜ್ಯಾ..... ಗಪ್' ಎಂದಾಗ ಎಲ್ಲರು ಅವನ ಬಾಯಿಯ ಕಡೆಗೆ ನೋಡುತ್ತಿರುತ್ತಾರೆ. ಈ ಸಂದರ್ಭದಲ್ಲಿ ಜನರ ದೃಷ್ಟಿ ಸಾಮಾನ್ಯವಾಗಿ ಸಿದ್ಧನ ಜೋಳಿಗೆ ಕಡೆಗೆ ಇರುವುದಿಲ್ಲ. ಆಗ ತನ್ನ ಕೈಚಳಕದಲ್ಲಿ ಒಂದೊಂದು ದೃಶ್ಯವನ್ನು ಪ್ರದರ್ಶನ ಮಾಡುತ್ತಾನೆ. ಆಗ ಪ್ರೇಕ್ಷಕರ ದೃಷ್ಟಿ ಕೈಯಲ್ಲಿರುವ ವಸ್ತುವಿನ ಕಡೆಗಿರುತ್ತದೆ. ಈ ಸಮಯವನ್ನು ಉಪಯೋಗಿಸಿಕೊಂಡು ಸಿದ್ಧ ಪ್ರದರ್ಶನದ ಭಿನ್ನ ವಸ್ತುಗಳನ್ನು ತನ್ನ ಜೋಳಿಗೆಯಿಂದಲೆ ಅತ್ಯಂತ ಚಮತ್ಕಾರಿಕ ರೀತಿಯಲ್ಲಿ ಹೊರಗೆ ತೆಗೆದು ತೋರಿಸುತ್ತಾನೆ. ಸಿದ್ಧ ಇಲ್ಲಿ ಯಾವುದೆ ಮಾಟ ಮಂತ್ರ ಮಾಡುವುದಿಲ್ಲ. ಬರೀ ಕೈ ಚಳಕದ ಆಟಗಾರನಷ್ಟೆ. ಭಯಾನಕವಾದ ಸತ್ತ ಹೆಣದ ಡೋಗಿಯನ್ನು ತಮ್ಮ ಹತ್ತಿರ ಇಟ್ಟುಕೊಳ್ಳುವುದರಿಂದ ಜನರು ಭಯಪಡುವುದು ಸಹಜವಾಗಿದೆ.

## ಪವಾಡ ರಹಸ್ಯ ಬಯಲು ರಹಸ್ಯ ಮತ್ತು ಸಿದ್ಧ :

ಇಂದಿನ ಜನ ಜಾಗೃತಿಯಂತಹ ಕಾರ್ಯಕ್ರಮಗಳಲ್ಲಿ ಪವಾಡ ರಹಸ್ಯ ಬಯಲು ಮಾಡುವಂತಹ ಕಾರ್ಯಕ್ರಮಗಳು ಎಷ್ಟೋ ನೋಡುತ್ತೇವೆ. ಗಾಜು ತಿನ್ನುವುದು, ನಿಂಬೆಹಣ್ಣು ರಕ್ತ ಮಾಡುವುದು, ಕಾಗದ ರೂಪಾಯಿ ಮಾಡುವುದು ಇದೆಲ್ಲವು ಕೂಡ ಕಣ್ಕಟ್ಟು ವಿದ್ಯೆಯೇ. ಇದೇ ಜನಪದರ ಮುಗ್ಧ ಭಾವನೆಯಲ್ಲಿ ಭಾನಾಮತಿ, ಕೇಗಾಮತಿಗಳಾಗಿ ಕಾಡುವುದುಂಟು. ಸುಡುಗಾಡು ಸಿದ್ಧರಿಗೂ ಇಂದಿನ ಜನಜಾಗೃತಿ ಜಾತಾಗಳಲ್ಲಿ ಮಾಡುವ ಪವಾಡಗಳಿಗೂ ಇಷ್ಟೆ ವ್ಯತ್ಯಾಸ, ಸಿದ್ಧ ತನ್ನ ಹೊಟ್ಟೆಪಾಡಿಗಾಗಿ ಜನರಿಗೆ ತನ್ನ ರಹಸ್ಯವನ್ನು ತಿಳಿಯ ಹೇಳುವುದಿಲ್ಲ. ಅದಕ್ಕಾಗಿ ಜನ ಭಯಭೀತ ರಾಗಿರುತ್ತಾರೆ. ಇಂತಹ ಭಯವನ್ನು ಮೂಢನಂಬಿಕೆಯನ್ನು ಹೋಗಲಾಡಿಸಲು ಸರಕಾರವೇ ತನ್ನ ನಿರ್ದೇಶನದಲ್ಲಿ ಇಂತಹ ಜಾದುವನ್ನು (ಕಣ್ಕಟ್ಟು) ವಿದ್ಯೆಯನ್ನು ಮಾಡಿ ಜಾಗೃತಿ ಮೂಡಿಸುತ್ತಿರುವುದು ನಮಗೆಲ್ಲ ತಿಳಿದ ವಿಷಯವೇ, ಹಾಗಾಗಿ ಸಿದ್ಧನ ಜಾದೂಗಾರಿಕೆ ಅವನ ಜೋಳಿಗೆಯಲ್ಲಿದೆ. ಅದು ಬಿಟ್ಟರೆ ಸಿದ್ಧ ಸಾಮಾನ್ಯ ಮನುಷ್ಯನೆ ಎಂಬ ತಿಳುವಳಿಕೆ ಅಕ್ಷರಸ್ಥರದಲ್ಲಿದೆ. ಆದರೆ ನಮ್ಮ ಗ್ರಾಮೀಣ ಪ್ರದೇಶದ ಜನರಿಗೆ ಅವನ ಕುರಿತಾಗಿರುವ ಭಯ ಹೋಗಲಾಡಿಸುವುದು ಕಷ್ಟದ ಕೆಲಸ.

## ನಿಷಿದ್ಧಗಳು :

ಸುಡುಗಾಡು ಸಿದ್ಧರನ್ನು ಕಂಡರೆ ಗುಲಬರ್ಗಾ, ಬೀದರ್ ಭಾಗದಲ್ಲಿ ಭಯ ಪಡುತ್ತಾರೆ. ಅಲೆಮಾರಿಗಳಾದ ಸಿದ್ಧರು ಸುಡುಗಾಡಿನಲ್ಲಿದ್ದುಕೊಂಡು ಕ್ರಿಯಾ ವಿಧಿಗಳನ್ನು ಮಾಡುವುದರಿಂದ ಸಹಜವಾಗಿ ಜನರಲ್ಲಿ ಭಯ ಆವರಿಸಿದೆ. ಅವರನ್ನು ನೋಡಿದ ಗ್ರಾಮಸ್ಥರು ಹೆದರುವುದು ಸಹಜ. ಕಲೆಯ ಪ್ರದರ್ಶನದ ವೇಳೆಯಲ್ಲಿ ಬಾಣಂತಿಯ ಬಲಗೈ, ಹಸ್ತ, ತಲೆಯ ಡೋಗಿ, ಮಲ್ಯಾಡದ ಚೌಡಿ, ಮಲ್ಯಾಡದ ಸುಬ್ಬಿ ಎನ್ನುವ

ಆಕಾರ ವಿಕಾರವಾದ ಹೆಣ್ಣಿನ ರೂಪದ ಮೂರ್ತಿಗಳನ್ನು ನೋಡಿ, ಅಲ್ಲದೆ ಅವನು ಹಾಕಿರುವ ವೇಷ ಭೂಷಣ, ಅವನು ಮಾಡಿಕೊಂಡಿರುವ ಅಲಂಕಾರ, ಮನುಷ್ಯನ ಸಹಜವಾದ ನಡಾವಳಿ ಅವನಲ್ಲಿ ಇರದೆ ಇರುವುದರಿಂದ ನಂಬುವದು ಕಷ್ಟ.

೧. ಹಸಿ ಮೈ ಬಾಣಂತಿ ಹೆಣ್ಣು–ಮಗಳು ಸಿದ್ಧರಿಗೆ ಭಿಕ್ಷೆ ನೀಡಬಾರದು.

೨. ಮೈ ಮೇಲಿನ ಹಸಿರು ನರಗಳು ಕಾಣುವ ಹೆಂಗಸರು ಸಿದ್ಧರಿಗೆ ಕಾಣಬಾರದು.

ಹೀಗೆ ಕಂಡರೆ ಸಿದ್ಧ ಅಂತಹವರನ್ನು 'ಕರಿನಾಯಿ'ಯಾಗಿಸಿ ತನ್ನ ಬೆನ್ನ ಹಿಂದೆಯೇ ಕರೆದುಕೊಂಡು ಹೋಗುತ್ತಾನೆಂಬ ನಂಬಿಕೆ ಇಂದಿಗೂ ಇದೆ. ಕರೆದುಕೊಂಡು ಹೋದ ಸಿದ್ಧ ಅವನನ್ನು ಮನುಷ್ಯನನ್ನಾಗಿ ಮಾಡಿ ದುಡಿಸಿಕೊಳ್ಳುತ್ತಾನೆ ಎಂಬ ಕಥೆ ಜನಜನಿತವಾಗಿತ್ತು. ಈಗ ಸಿದ್ಧರು ಇಲ್ಲ, ಆ ಕಥೆಯು ಇಲ್ಲ. ಅಚಾನಕ್ಕಾಗಿ ಸಿದ್ಧ ಭಿಕ್ಷೆ ಬೇಡಲು ಬಂದರೆ ಮುದುಕರು ಅಥವಾ ಗಂಡಸು ಭಿಕ್ಷೆ ನೀಡುತ್ತಾರೆ. ಹೆಂಗಸರು ಸಿದ್ಧ ಹೋಗುವವರೆಗೂ ಮನೆಯ ಹೊರಗಡೆ ಬರುವುದಿಲ್ಲ.

## ಆಧುನಿಕರಣದ ದಾಳಿ :

ಒಟ್ಟಾರೆ ಜನಪದ ಕಲೆಗಳು ನಮ್ಮಿಂದ ದೂರವಾಗುತ್ತಿವೆ. ಮನೋರಂಜನೆಗೆ ಸೀಮಿತವಾದಂತಹ ಕಲೆಗಳಂತೂ ಹೇಳ ಹೆಸರಿಲ್ಲದೆ ಹೋಗಿವೆ. ಈ ಕಲೆಗಳ ಪ್ರದರ್ಶನದಿಂದ ಹೊಟ್ಟೆ ತುಂಬುವುದಿಲ್ಲವೆಂದು ಬೇರೆ ಬೇರೆ ಕೆಲಸಗಳಲ್ಲಿ ತೊಡಗಿ ಕೊಂಡಿದ್ದಾರೆ. ಹಳೆಯ ತಲೆಮಾರಿನ ಜನರು ನಮ್ಮ ವಂಶಸ್ಥರು ಪ್ರದರ್ಶಿಸಿಕೊಂಡು ಬರುತ್ತಿದ್ದ ಕಲೆಯೆಂದು ತಿಳಿದು ಸಮುದಾಯದ ಐಡೆಂಟಿಟಿಯಾಗಿ ಪ್ರದರ್ಶನ ಮಾಡುವುದು ಮುಂದುವರೆಸಿದ್ದಾರೆ. ಇವರ ಮನೋರಂಜನೆಯನ್ನು ಜನರು ನೋಡದೆ ಇರುವುದರಿಂದ ಇವರು ಭಿಕ್ಷೆ ಬೇಡುವುದಕ್ಕೆ ಪರಿವರ್ತನೆ ಹೊಂದಿದ್ದಾರೆ. ಆಧುನಿಕತೆಯ ಸಮೂಹ ಮಾಧ್ಯಮದ ದಾಳಿಯಿಂದಾಗಿ ಸಿದ್ಧರ ಕಲೆ ನಸಿಸಿದೆ. ಅವರು ಕಲೆ ಪ್ರದರ್ಶನ ಮಾಡುವುದು ಕಡಿಮೆ ಮಾಡುತ್ತಿದ್ದಾರೆ.

ಜಾತಿ ಶೈಕ್ಷಣೀಕರಣದ ವ್ಯವಸ್ಥೆಯಲ್ಲಿ ಅಲೆಮಾರಿಗಳು ಭಿಕ್ಷೆ ಬೇಡುವುದಕ್ಕೆ ಬದಲಾಗಿ ಶ್ರಮವಹಿಸಿ ಮನೋರಂಜನೆಯನ್ನು ಕೊಟ್ಟುಕೊಂಡು ಸ್ವಾಭಿಮಾನದಿಂದ ಬದುಕುತ್ತಿದ್ದರು. ದುಡ್ಡು ಅಥವಾ ಧಾನ್ಯ ಅವರ ಪರಿಶ್ರಮದ ಫಲವಾಗಿ ದೊರೆಯುತ್ತಿತ್ತು. ಈಗ ಅದು ಇಲ್ಲದಂತಾಗಿದೆ. ಅನ್ನ, ಬಟ್ಟೆಗೆ ಇಲ್ಲದಿರುವಾಗ ಕಲೆಗೆ ಅಂಟಿಕೊಂಡಿರುವುದು ಕಷ್ಟವಾಗುತ್ತದೆ.

ಒಂದು ಕಾಲದಲ್ಲಿ ಜನರು ದೇಸಿಯ ಜ್ಞಾನ ಪರಂಪರೆಯನ್ನು ಒಪ್ಪಿಕೊಂಡು ಗ್ರಾಮೀಣ ಪ್ರದೇಶದವರು ನಿಜವಾಗಿ ಜನಪದ ಕಲೆಯನ್ನು ಮೋಷಿಸಿಕೊಂಡು

ಬರುತ್ತಿದ್ದರು. ಈಗ ಹಳ್ಳಿ ಹಳ್ಳಿಗಳಲ್ಲಿ ಸಮೂಹ ಮಾಧ್ಯಮಗಳು ಕಾಣಿಸಿಕೊಳ್ಳುತ್ತಿರುವುದರಿಂದ ನಿಜವಾದ ಜನಪದ ಕಲೆಗಳಿಗೆ ಬೆಲೆ ಇಲ್ಲದಂತಾಗಿದೆ. ಇದ್ದಂತಹ ಕೆಲವು ಕಲೆಗಳಿಗೂ ಕೂಡ ಸಮಾಜ ಅವರನ್ನು ಮನೋರಂಜನೆಗಾಗಿ ಬಳಸಿಕೊಂಡು ಗೌರವದಿಂದ, ಮಾನವೀಯತೆಯಿಂದ ಕಾಣುತ್ತಿಲ್ಲ. ಇದೆಲ್ಲದಕ್ಕೂ ಕಾರಣ ಇಂದಿನ ಜಾಗತೀಕರಣ ಮತ್ತು ಆಧುನೀಕರಣ. ಹಾಗಾಗಿ ಜನಪದ ಕಲಾವಿದರು ಕಂಗಾಲಾಗಿದ್ದಾರೆ. ಕಲೆಯ ಪ್ರದರ್ಶನದಿಂದ ಏನೂ ಪ್ರಯೋಜನವಿಲ್ಲವೆಂದು ನಿರಾಶರಾಗಿದ್ದಾರೆ. ಅವರ ತಲೆಮಾರಿಗೆ ಆ ಕಲೆಯ ಅಂತ್ಯವನ್ನು ಕಾಣುತ್ತೇವೆ.

ಗ್ರಾಮೀಣ ಪ್ರದೇಶದಲ್ಲಿರುವಂತಹ ಅಲೆಮಾರಿ ಕಲಾವಿದರು, ಮಹಾನಗರಗಳಿಗೆ ವಲಸೆ ಹೋಗುತ್ತಿದ್ದಾರೆ. ಮಹಾನಗರಗಳಲ್ಲಿ ಯಾವುದೇ ಒಂದು ಕೆಲಸ ಮಾಡಿಕೊಂಡು ಜೀವನ ಸಾಗಿಸಬೇಕು. ಹಳ್ಳಿಯ ಬದುಕಿನಿಂದ ಪ್ರಯೋಜನವಿಲ್ಲವೆಂದು ತಿಳಿದಿದ್ದಾರೆ.

ಜನಪದ ಕಲೆಯ ಸಂವರ್ಧನೆಯಾಗಬೇಕಾದರೆ, ನಿಜವಾದ ಪ್ರೋತ್ಸಾಹ ಕಲಾವಿದರಿಗೆ ಸಿಗಬೇಕು. ಜನಪದಕಲೆಯು ಆಧುನಿಕತೆಗೆ ತಕ್ಕಂತೆ ಮಾರ್ಪಾಟು ಮಾಡಿ ಜನರನ್ನು ರಂಜಿಸುವಂತಹ ಕೆಲಸವಾಗಬೇಕು ಅಂದಾಗ ಕಲೆ ಉಳಿಯುತ್ತದೆ. ಕಲೆ ಉಳಿಯಬೇಕಾದರೆ ಕಲಾವಿದರೂ ಉಳಿಯಬೇಕಲ್ಲವೇ ? ಹಾಗಾಗಿ ಇಂದು ಸರಕಾರ ಹಲವಾರು ಯೋಜನೆಗಳನ್ನು ಬುಡಕಟ್ಟು ಅಲೆಮಾರಿ ಜನಾಂಗಗಳ ಅಭಿವೃದ್ಧಿಗಾಗಿ ಹಾಕಿಕೊಳ್ಳುತ್ತಿದೆ. ಸರಕಾರದ ಒಂದು ಆಶ್ರಯ ಯೋಜನೆಯಲ್ಲಿ ದೊರಕಿದ ಮನೆ ಇದ್ದರೆ ಸಾಕೇ ? ಅಲೆಮಾರಿಗಳಿಗೆ ಮೂಲಭೂತವಾದ ಬೇಡಿಕೆಗಳ ಅಗತ್ಯವಿದೆ ಆ ಕಾರಣಕ್ಕಾಗಿಯೇ ಆ ಸಮುದಾಯಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿಯುತ್ತಿವೆ. ಹಾಗಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಅವರ ಕುರಿತಾದ ಅಧ್ಯಯನದ ಕಾಳಜಿ ನಮ್ಮ ನಿಮ್ಮೆಲ್ಲರ ಹೊಣೆಯಾಗಿದೆ.

◆

---

ಆಧಾರ ಪುಸ್ತಕಗಳು :

೧. ಸುಡುಗಾಡು ಸಿದ್ಧರು ಸಾಂಸ್ಕೃತಿಕ ಅಧ್ಯಯನ ಡಾ. ಟಿ. ಎಂ. ಭಾಸ್ಕರ್.

೨. ಸುಡುಗಾಡ ಸಿದ್ಧರು ಉಪಸಂಸ್ಕೃತಿ ಮಾಲೆ, ಡಾ. ಪಿ. ಕೆ. ಖಂಡೋಬಾ.

೩. ಅವಲೋಕನ.

# ಸುಡುಗಾಡ ಸಿದ್ಧರ ನ್ಯಾಯಪಂಚಾಯತಿ ವ್ಯವಸ್ಥೆ

ಶ್ರೀ ಎಮ್. ಎಸ್. ಗಂಟಿ

ವೇದಗಳ ಕಾಲದಲ್ಲಿ ಅಸ್ತಿತ್ವದಲ್ಲಿರುವ ಜಾತಿ ವ್ಯವಸ್ಥೆಯು ಯಾವದೇ ಜಾತಿಗೆ ಸೇರದೆ ಪ್ರತ್ಯೇಕವಾಗಿ ಕಾಡುಗಳಲ್ಲಿ ಉಳಿದಿರುವ ಬುಡಕಟ್ಟು ಜನಾಂಗಗಳು ಸಾಕಷ್ಟು ಇವೆ. ಯಾವುದೇ ಒಂದು ಜಾತಿಯ ಸಂಸ್ಕೃತಿಯನ್ನು ಅಭ್ಯಸಿಸಿದಾಗ ಆ ಜನಾಂಗ ವಾಸಿಸುವ ಪ್ರದೇಶ ಮತ್ತು ಅವರ ಸಂಪ್ರದಾಯತೆ ಆಂತರಿಕ ಸಮಾಜ ರಚನೆ, ಸ್ಥಾನಮಾನಗಳು, ಕೌಟುಂಬಿಕ ವ್ಯವಸ್ಥೆ, ಆಚಾರ-ವಿಚಾರ, ಉಡಿಗೆ-ತೊಡಿಗೆ ಅವರ ಜಾತಿಯ ಕಸಬು ಇವೆಲ್ಲವುಗಳನ್ನೂ ಅಗತ್ಯವಾಗಿ ಗಮನಿಸಬೇಕಾಗುತ್ತದೆ.

ಈ ದಿಶೆಯಲ್ಲಿ ಸುಡುಗಾಡಸಿದ್ಧರ ಮೂಲ ಸಂಸ್ಕೃತಿ ಸ್ವರೂಪವನ್ನು ಗಮನಿಸಿದಾಗ ಈ ಜನಾಂಗದ ಸಂಕ್ಷಿಪ್ತ ಪರಿಚಯವಾಗುತ್ತದೆ. ಈ ನಿಟ್ಟಿನಲ್ಲಿ ಈ ಜನಾಂಗದ ಬಗ್ಗೆ ಅಧ್ಯಯನಮಾಡಿ ಸಮೀಕ್ಷೆಯನ್ನು ಪೂರೈಸಿದ ಶ್ರೀ ಎನ್. ಅನಂತಾಚಾರಿಯವರು ಸುಡಗಾಡಸಿದ್ಧರ ಮೂಲಸ್ವರೂಪ ಜಾತಿಯ ಸಂಪ್ರದಾಯ ಅವರ ಆಂತರಿಕ ರಚನೆ ಜಾತಿಯ ಉದ್ಯೋಗ ಇತ್ಯಾದಿ ವಿವರಣೆಯನ್ನೂ ೧೯೮೮ರಲ್ಲಿ ಬುಡಕಟ್ಟಿನ ಜನರೆಂದು ಹೆಸರಿಸಿದ್ದಾರೆ. ಈ ಜನರು ಹೊಟ್ಟೆಯಪಾಡಿಗಾಗಿ ಬೇರೆ ಬೇರೆ ವೇಷಗಳನ್ನು ಹಾಕಿಕೊಂಡು ಬೇಡ ಜಂಗಮರಾಗದೆ ಬೇಡಿಕೊಂಡು ತಿನ್ನುವವರಾಗಿದ್ದಾರೆ. ಇವರು ನೆರೆಯ ರಾಜ್ಯವಾದ ಆಂಧ್ರಪ್ರದೇಶದಿಂದ ಬಂದ ವಲಸೆ ಜನಾಂಗವಾಗಿದ್ದು ಕಾಡಿನಿಂದ ನಾಡಿಗೆ ಬಂದು ಊರೊಂದಿಗೆ ಅಲೆದಾಡುವ ಅಲೆಮಾರು ಜನಾಂಗದವರಾಗಿದ್ದಾರೆ. ಸುಡಗಾಡ ಸಿದ್ಧರು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ಸಂಸ್ಕೃತಿಯಿಂದ ಹೇಳಿಕೊಳ್ಳುವಂತಹ ಪ್ರಾಮುಖ್ಯತೆ ಇರುವದಿಲ್ಲ. ಈ ಜನರಲ್ಲಿ ಸಾಂಪ್ರದಾಯಿಕ ಆಚರಣೆಗಳು ವಿಶೇಷ ಹಬ್ಬ, ಹರಕೆಗಳು, ಮೂಢನಂಬಿಕೆಯ ನೆರಳಲ್ಲಿ ಬದುಕುತ್ತಾರೆ. ಪ್ರತಿ ವರ್ಷಕ್ಕೊಮ್ಮೆ ಸೇರಿ ನಡೆಸುವ ಬಯಲು ಕುಲಪಂಚಾಯಿತಿ ನ್ಯಾಯ ತನ್ನದೇ ಆದ ವೈಶಿಷ್ಟ್ಯಪೂರ್ಣ ಸ್ಥಾನ ಮಾನ ಹೊಂದಿದೆ.

## ನ್ಯಾಯ ಪಂಚಾಯತ ವಿಶಿಷ್ಟತೆ

ಕರ್ನಾಟಕದಲ್ಲಿ ಸುಮಾರು ೩.೦%ರಷ್ಟು ಜನರು ಪರಿಶಿಷ್ಟ ವರ್ಗಕ್ಕೆ

ಸೇರಿದವರಾಗಿದ್ದಾರೆ. ಇದರಲ್ಲಿ ತಮ್ಮದೇ ಆದ ವೈವಾಹಿಕ, ಧಾರ್ಮಿಕ, ಸಮಾಜಿಕ, ಸಾಂಸ್ಕೃತಿಕ ಪದ್ಧತಿಗಳಾಗಿವೆ. ಇವರದೇ ನ್ಯಾಯ ಮಾಡುವ ನ್ಯಾಯದಕಟ್ಟೆ ಅಥವಾ ಪಂಚಾಯತ್ ಕಟ್ಟೆ ಇರುವದು. ಸುಡಗಾಡಸಿದ್ಧರು ಬಡತನ ರೇಖೆಗಿಂತ ಕೆಳಗೆ ಇರುವ ಜನಾಂಗವಾಗಿದ್ದು, ಇವರ ದುಡಿಮೆಯ ಗಳಿಕೆ ಅತಿಕಡಿಮೆ ಪ್ರಮಾಣವಾಗಿರುತ್ತದೆ. ಇವರು ಭಿಕ್ಷಾಟನೆಯ, ಸಲುವಾಗಿ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ತಿರುಗಾಡಿ ತಮ್ಮ ಕೈಚಳಕದ ಕಲೆ ಪ್ರದರ್ಶಿಸುತ್ತಾ ಜೀವನ ಸಾಗಿಸುವದೇ ಇವರ ಉದ್ಯೋಗವಾಗಿದೆ. ಇವರಲ್ಲಿ ಸಣ್ಣ ಮಟ್ಟ ಜನಾಂಗಗಳಿದ್ದರೂ ಯಾವುದೇ ರೀತಿಯಿಂದ ಕೋರ್ಟ, ಕಛೇರಿಗೆ ತಮಗೆ ನ್ಯಾಯ ದೊರೆಕಿಸುವ ಕಡೆಗೆ ಹೋಗಿರುವದಿಲ್ಲ. ಇವರ ನ್ಯಾಯ ಪಂಚಾಯತಿಗೆ ತನ್ನದೇ ಆದ ಸಂಪ್ರದಾಯ ಕಟ್ಟು ನಿಟ್ಟಿನ ನಿಯಮಗಳಿವೆ. ಹಲವಾರು ಬುಡಕಟ್ಟಿನ ಜನಾಂಗಗಳಿಗೆ ಸಂಪ್ರದಾಯಕ್ಕಿಂತಲೂ ಇದು ಬೇರೆಯಾಗಿದೆ. ಇವರದೇ ಆದ ನ್ಯಾಯ ಪೀಠದಲ್ಲಿ ಜನಾಂಗದ ಯಜಮಾನರು ಅಂದರೆ ಪ್ರತಿಯೊಂದು ತಮ್ಮ ಕುಲದೈವದ ಜನರುಗಳು. ಈ ಜನರು ವಾಸಿಸುವ ಸ್ಥಳಗಳಲ್ಲಿ ದೈವದ ಹಿರಿಯರನ್ನೂ ಕರೆಸಿಕೊಂಡು ಒಂದು ಬಯಲು ಪ್ರದೇಶದಲ್ಲಿ ಕೂಡಿಕೊಂಡು ನ್ಯಾಯ ನಡೆಸುವರು. ಸುಡಗಾಡಸಿದ್ಧರು ನ್ಯಾಯ ಮಾಡುವವರ ಸಲುವಾಗಿ ವಿಶೇಷವಾಗಿ ದಸರಾ, ದೀಪಾವಳಿ ಹಬ್ಬದ ದಿನಗಳನ್ನು ಗೊತ್ತು ಮಾಡಿಕೊಳ್ಳುವ ಪದ್ಧತಿ ಉಂಟು. ಈ ಜನರು ಮುಖ್ಯವಾಗಿ ಕೊಪ್ಪಳದ ಸುತ್ತಮುತ್ತಲಿನ ಊರುಗಳಾದ ಕಲಕೇರಿ ಕನಕಾಪೂರ, ಬುಡಸೆಟ್ನಾಳ ಮತ್ತು ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಕಟ್ಟೆಯ ಹಂಪಾಪಟ್ಟಣ, ಓಬಳಾಪೂರ, ಆನೇಕಲ್ ಹಾಗೂ ಧಾರವಾಡ ಜಿಲ್ಲೆಯ ಜಾವಳ್ಳಿ ಗಿಣಿವಾಲ, ದ್ಯಾವನಕೊಪ್ಪ, ಬೆಳಗಾಂವ್ ಜಿಲ್ಲೆಯ ರಾಮದುರ್ಗ, ನಿಡಗುಂದಿ, ಸುರೇಬಾನ, ಮುನವಳ್ಳಿ, ಅರಭಾವಿ ಮತ್ತು ಬಿಜಾಪೂರ ಜಿಲ್ಲೆಯ ಆಲಮಟ್ಟಿ, ಚಂದ್ರಗಿರಿ ಇವು ನ್ಯಾಯ ಮಾಡುವ ಮುಖ್ಯಕೇಂದ್ರಗಳಾಗಿವೆ. ಎಲ್ಲ ಊರಿನ ಸುಡಗಾಡಸಿದ್ಧ ಜನರು ವಾಸಿಸುವ ಸ್ಥಳಗಳಿಂದ ಕೆಲವೊಬ್ಬ ಮುಖಂಡರು ಬಂದು ನ್ಯಾಯದ ಬಗ್ಗೆ ತಪ್ಪು-ಒಪ್ಪುಗಳ ತೀರ್ಪನ್ನೂ ನೀಡುವರು. ಹಾಗಾಗಿ ಇವರಿಗೆ ತಮ್ಮದೆ ಆದ ನ್ಯಾಯ ಪಂಚಾಯತ್ ವ್ಯವಸ್ಥೆ ಇದೆ. ಈ ಸಮಾಜದಲ್ಲಿ ಪ್ರತಿಯೊಬ್ಬರು ಸಮಾಜದ ನಿಯಮ ಕಟ್ಟು ಪಾಡುಗಳನ್ನು ಪಾಲಿಸಿಕೊಂಡು ಹೋಗುತ್ತಾರೆ. (ನ್ಯಾಯಪಂಚಾಯತ್‌ಗೆ ತನ್ನದೆ ಆದ ಸಂಪ್ರದಾಯ ಕಟ್ಟು ನಿಟ್ಟಿನ ನಿಯಮವಿದೆ. ಹಲವಾರು ಬುಡಕಟ್ಟು ಜನಾಂಗಗಳ ಸಾಂಪ್ರದಾಯಕ್ಕಿಂತಲೂ ಇದು ಬೇರೆಯಾಗಿದೆ. ಇವರೆಲ್ಲರು ಕೂಡಿ ತಮ್ಮದೇ ಆದ ಜೀವನ ವಿಧಾನ ಹಾಗೂ ಸಾಮಾಜಿಕ ಪರಿಸ್ಥಿತಿ, ಭಾಷೆ ಸಂಸ್ಕೃತಿ ಇವರ ಆಚರಣೆ ಇವರಲ್ಲಿರುವ ಕಲೆ ಮತ್ತು ನ್ಯಾಯ ಪದ್ಧತಿ ವ್ಯವಸ್ಥಿತವಾಗಿ ರೂಢಿಸಿಕೊಂಡು ಬಂದಿದ್ದಾರೆ. ಇವರಿಗೆ ತಮ್ಮದೆ ಆದ ನ್ಯಾಯ ಪಂಚಾಯತ್ ಇದೆ. ಸಮಾಜದ ಪ್ರತಿಯೊಬ್ಬರು ಸಮಾಜದ ನಿಯಮ ಕಟ್ಟು ಪಾಡುಗಳನ್ನು ಪಾಲಿಸಿಕೊಂಡು ಹೋಗುತ್ತಾರೆ. ಅವರದೆ ಆದ ರೂಢಿ ಭಾಷೆಯಲ್ಲಿ ಕರೆದಂತೆ ಕುಲಮಿಡಿಸಿನ ಕೋತಿಲೇದು ವನಮಿಡಿಸಿದ ಪಕ್ಷಿಲೇದು. ಹೀಗಾಗಿ

ಸಮಾಜದ ಬಗ್ಗೆ ಬಹಳ ಅಭಿಮಾನದಿಂದ ಕುಲದ ಕಟ್ಟಾಚಾರವನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡ ಬಂದಿರುತ್ತಾರೆ. ಇವರು ವರ್ಷದುದ್ದಕ್ಕೂ ಊರಿಂದ ಊರಿಗೆ ಅಲೆಧಾಡುತ್ತ ಸಮಾಜ ಭಾಂದವರು ನಿರ್ದಿಷ್ಟಪಡಿಸಿದಂತೆ ವರ್ಷಕ್ಕೊಮ್ಮೆ ಒಂದೆಡೆ ಸೇರಿ ಸಮಾಜದ ಆಗು ಹೋಗುಗಳ ಬಗ್ಗೆ ಮತ್ತು ಕುಟುಂಬ ಸಮಸ್ಯೆಗಳ ಬಗ್ಗೆ ಹಾಗೂ ಬಂಧು ಬಾಂಧವರನ್ನು ಕೂಡಿಕೊಳ್ಳಲು ಕಾಳಜಿ ವಹಿಸಿ ಒಂದೆಡೆ ಸೇರುತ್ತಾರೆ.) ಈ ಸಂದರ್ಭಗಳಲ್ಲಿ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಇದರಲ್ಲಿ ನ್ಯಾಯಪಂಚಾಯತಿಯ ವಿಧಾನಗಳು ಕುಲದ ಪಂಚಾಯತಿಯ ನಿಯಮಗಳನ್ನೂ ಚಾಚೂ ತಪ್ಪದೇ ಪಾಲಿಸಿಕೊಂಡು ಬಂದಿರುತ್ತಾರೆ. ನ್ಯಾಯಧೀಶರೆಂದರೆ ಯಾರು ನ್ಯಾಯವನ್ನು ನಿರ್ಣಯ ಮಾಡುವಾಗ ಯಾವ ಯಾವ ಷರತ್ತುಗಳನ್ನು ಪಾಲಿಸುತ್ತಾರೆ ಎಂಬುದು ವೈಚಿತ್ರ್ಯಪೂರ್ಣವಾಗಿದೆ. ಕುಲಪಂಚಾಯಿತಿಯು ನ್ಯಾಯ ಬಟ್ಟ ಬಯಲಲ್ಲಿಯಾಗಲಿ, ಗಿಡಮರನೆರಳಲ್ಲಾಗಲಿ ನಡೆಸುತ್ತಾರೆ. ಇದಕ್ಕೆ ಯಾವದೇ ಸಮಾಜದ ಅಥವಾ ಸರಕಾರದ ಅನುದಾನ ಬೇಕಿಲ್ಲ. ಅಧಿಕಾರಿಗಳ ಮರ್ಜಿಕಾಯಬೇಕಾದ ಅವಶ್ಯಕತೆ ಇಲ್ಲ. ನ್ಯಾಯದಾನ ಸಮಿತಿಯಲ್ಲಿ ಸೇರಿರುವರೆಲ್ಲರು ಸಮಾನರು. ನ್ಯಾಯದ ಸಮಿತಿಯಲ್ಲಿ ಕೆಲವು ಹಿರಿಯರು ವ್ಯಾಜ್ಯ ಸಲಹೆಯನ್ನು ನೀಡುವಲ್ಲಿ ಪಳಗಿದವರಾಗಿರುತ್ತಾರೆ. ಏನೇ ಇದ್ದರೂ ಒಮ್ಮತದ ನಿರ್ಧಾರ ಇವರ ಸಮ್ಮುಖದಲ್ಲಿ ನಡೆಯುವ ಬಹುತೇಕ ನ್ಯಾಯಗಳು ಇವರ ಕುಲಬಾಂಧವರಲ್ಲಿ ತೀರ್ಮಾನವಾಗುತ್ತದೆ. ಬೇರೆ ಜನಾಂಗಗಳ ಸಲಹೆಗೆ ಅವಕಾಶವಿರುವದಿಲ್ಲ. ಯಾವದೇ ವ್ಯಾಜ್ಯವಿರಲಿ ೨ ರಿಂದ ೫ ದಿನಗೊಳಗಾಗಿ ಪಂಚಾಯಿತಿ ನಡೆಸಿ ತೀರ್ಮಾನಿಸುತ್ತಾರೆ. ನ್ಯಾಯ ಪಡೆದು ಕೊಳ್ಳುವ ವ್ಯಕ್ತಿಗಳು ನ್ಯಾಯ ಕಟ್ಟೆಯ ನಿಯಮದಂತೆ ಚಾಚು ತಪ್ಪದೆ ನಡೆದುಕೊಳ್ಳಬೇಕು. ನ್ಯಾಯಪಂಚಾಯತಿ ಸಮಯದಲ್ಲಿ ಬೇರೆ ಜನಾಂಗದ ಸದಸ್ಯರಿಗೆ ಅವಕಾಶವಿರುವದಿಲ್ಲ. ಎಂತಹ ಕಠಿಣ ಪರಿಸ್ಥಿತಿ ಇದ್ದರೂ ತಮ್ಮ ಕುಲಬಾಂಧವರಿಂದಲೆ ಬಗೆಹರಿಸಿಕೊಳ್ಳಬೇಕು. ನ್ಯಾಯವಾದಿ ಪರವಾಗಿ ಎಷ್ಟೇ ದೊಡ್ಡ ವ್ಯಕ್ತಿ ಇದ್ದರೂ ನ್ಯಾಯ ಕಟ್ಟೆಯ ನಿಯಮಗಳನ್ನು ಪಾಲಿಸಬೇಕು. ಹೆಚ್ಚಾಗಿ ತಮ್ಮ ಊರಿನ ಸಮೀಪ, ಊರಿನ ಜನರಿಂದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುತ್ತಾರೆ. ನ್ಯಾಯ ಪಡೆಯಬೇಕಾದ ವ್ಯಕ್ತಿಗಳು ಕುಲಪಂಚರನ್ನು ಕೂಡಿಸಿ ಜಗಳವನ್ನು ಪರಿಹರಿಸಕೊಳ್ಳಬೇಕಾದರೆ ಒಂದೆರಡು ದಿನ ಮುಂಚಿತವಾಗಿ ಕುಲಬಾಂಧವರನ್ನೂ ಭೆಟ್ಟಿಯಾಗಿ ನ್ಯಾಯ ದೊರಕಿಸಿಕೊಡಲು ದಿನವನ್ನು ಗೊತ್ತು ಮಾಡುತ್ತಾರೆ. ನ್ಯಾಯ ಕಟ್ಟೆಯ ಸೇರುವ ದಿನದಂದು ಎಲ್ಲಾ ಊರುಗಳಿಗೆ ನಸುಕಿನಲ್ಲಿಯೆ ಅಥವಾ ಒಂದು ದಿನ ಮುಂಚಿತವಾಗಿ ಜೋಡಾಳುಗಳನ್ನು ಅಥವಾ ಓಲೇಕಾರರನ್ನು ಕಳುಹಿಸಿ ನ್ಯಾಯದ ಬಗ್ಗೆ ಸೇರಲು ಸುದ್ದಿ ಮುಟ್ಟಿಸಿ ನಿರ್ದಿಷ್ಟ ಪಡಿಸಿದ ಊರಿಗೆ ಬರಲು ತಿಳಿಸುತ್ತಾರೆ. ಇಂತಹ ಕೆಲಸಗಳಿಗೆ ಅವರ ಭಾಷೆಯಲ್ಲಿ ಮಹಾಂತಗಾಡು ಎಂಬ ಹೆಸರಿನವರಿಂದ ಕೆಲಸ ಪಡೆಯುತ್ತಾರೆ. ಅಲ್ಲದೆ ಈತನ ಮುಖಾಂತರ ಕುಲಬಾಂಧವರನ್ನು

ಸೇರಿಸುವದು ಪ್ರತಿ ಊರುಗಳಿಗೆ ಜನರಿಗೆ ವಿಷಯ ತಲುಪಿಸುವದು ಮತ್ತು ವಾದಿ, ಪ್ರತಿ ವಾದಿ ಕರೆತರಲು ಅಥವಾ ನ್ಯಾಯಕ್ಕೆ ಸಂಬಂಧಿಸಿದ ಹೆಣ್ಣು ಮಕ್ಕಳಿದ್ದರೆ ಕರೆ ತರುವದು ಮತ್ತು ಹೆಣ್ಣು ಮಕ್ಕಳು ನ್ಯಾಯ ಬಯಸಿ ಬಂದರೆ ಇವನ ಸಹಾಯದಿಂದ ವಿಚಾರಿಸುತ್ತಾರೆ. ಇಂತಹ ಸಮಯದಲ್ಲಿ ಮಹಿಳೆಯರಿಗೆ ಸಭೆಯಲ್ಲಿ ಕುಳಿತು ಕೊಳ್ಳಲು ಅನುಮತಿ ಕೊಡದೆ ಸಭೆಯಿಂದ ದೂರ ಕುಳಿತುಕೊಂಡು ನ್ಯಾಯ ವಿಚಾರಿಸಲಾಗುತ್ತದೆ. ಕುಲಪಂಚರು ವಾದಿ ಪ್ರತಿವಾದಿಯಿಂದ ಒಬ್ಬೊಬ್ಬರ ಅಹವಾಲು ಅವಲೋಕಿಸಿ ಇವರಿಬ್ಬರಲ್ಲಿ ನಡೆದ ಜಗಳದ ಬಗ್ಗೆ ಪರಸ್ಪರ ಚರ್ಚಿಸಿ ಒಂದು ನಿರ್ಣಯಕ್ಕೆ ಬಂದು ಇವರಿಗೆ ತೀರ್ಪು ನೀಡುತ್ತಾರೆ. ಒಂದು ವೇಳೆ ಒಂದೇ ದಿನದಲ್ಲಿ ನ್ಯಾಯಕ್ಕೆ ಪರಿಹಾರ ಸಿಗದಿದ್ದರೆ ಅಲ್ಲದೇ ಅವರಲ್ಲಿ ಬಗೆ ಹರಿಯದಿದ್ದರೆ ಈ ನ್ಯಾಯಕ್ಕೆ ಬೇರೆ ದೂರದ ಊರಿನ ಕಟ್ಟೆಯವರನ್ನು ಕರೆಸಿಕೊಂಡು ವಿಚಾರಿಸಿ ತೀರ್ಪುಗಳನ್ನು ನೀಡುತ್ತಾರೆ. ಅಪರಾಧಿಗಳಿಗೆ ಈ ತೀರ್ಪು ಒಪ್ಪಿಗೆಯಾಗದಿದ್ದಲ್ಲಿ ಮತ್ತೆ ಬೇರೆ ಊರಿಗೆ ಹೋಗಿ ಅಲ್ಲಿಯ ಜನರೊಂದಿಗೆ ಈ ಜನರನ್ನು ಸೇರಿಸಿ ನ್ಯಾಯ ಬಯಸುತ್ತಾರೆ. ಕುಲಪಂಚರ ವಿಚಾರ ವಿನಿಮಯ ಮಾಡಿಕೊಂಡು ತೀರ್ಪು ನೀಡುತ್ತಾರೆ. ಇಂತಹ ಸಮಯದಲ್ಲಿ ಅಪರಾಧಿಗಳು ತಮ್ಮ ತಪ್ಪನ್ನು ಒಪ್ಪಿಕೊಂಡು ಸಮಾಜದವರು ನೀಡಿದ ದಂಡವನ್ನು ತೆತ್ತಬೇಕಾಗುತ್ತದೆ. ಅಪರಾಧಿಗಳು ತಮ್ಮ ಸಮಸ್ಯೆಗೆ ಪರಿಹಾರ ಮಾಡಿ ಬರುವದರ ಜೊತೆಗೆ ಪ್ರತಿಯೊಬ್ಬ ವಾದಿಯು ಸಮಾಜದ ಕಟ್ಟು ಪಾಡುಗಳನ್ನು ಪರಿಪಾಲಿಸಿಕೊಂಡು ಬರುವ ಮನೋಭಾವನೆ ಹೊಂದಿದವನಾಗಿರುತ್ತಾನೆ. ಉದ್ದೇಶ ಪ್ರಾಣಕ್ಕಿಂತ ಮಾನ ಮುಖ್ಯ ಹಾಗೂ ನುಡಿದಂತೆ ನಡೆದುಕೊಳ್ಳುವದು ಇವರಿಗೆ ಯಾವದೇ ತರಹದ ಅವ್ಯವಹಾರ ಅನ್ಯಾಯಗಳು ಆಗದಂತೆ ಸಮಾಜದ ಮುಖ್ಯಸ್ಥರು ಅಪರಾಧಿಗಳಿಗೆ ಕುಲಪಂಚಾಯತಿ ವತಿಯಿಂದ ಎಚ್ಚರ ವಹಿಸುತ್ತಾರೆ. ನ್ಯಾಯ ಪಂಚಾಯತಿಯಲ್ಲಿ ವಿಧಿಸುವ ದಂಡ, ಕೊಡುವ ಶಿಕ್ಷೆಗೆ ಅಪರಾಧಿಗಳು ತಲೆ ಬಾಗುವರು. ಪಂಚರ ತೀರ್ಮಾನವೇ ಅಂತಿಮ.

## ನ್ಯಾಯದಾನ ಸಮಿತಿ :

ನ್ಯಾಯ ಪಂಚಾಯತಿ ಮುಖ್ಯಸ್ಥರು ಹಾಗೂ ಮೇಲುಸ್ತುವಾರಿ ನೋಡಿಕೊಳ್ಳುವವರು ಓದು ಬರೆಯಲು ಬಂದಿದ್ದರೂ ಪಂಚಾಯತಿ ನಡೆಯುವ ಸಮಯದಲ್ಲಿ ಆಗು ಹೋಗುಗಳ ಖರ್ಚನ್ನು ಸರಿಯಾಗಿ ಲೆಕ್ಕವಿಟ್ಟು ಒಪ್ಪಿಸುವದು ಮತ್ತು ಪಂಚಾಯಿತಿ ನಡೆಯುವಾಗ ಯಜಮಾನರುಗಳ ಸಲಹೆಯನ್ನು ಪಾಲಿಸಿ ಅವರು ವಹಿಸಿದ ಕಾರ್ಯವನ್ನೂ ಮಾಡಲು ಓಲೇಕಾರನ ಸಹಾಯ ಪಡೆಯುತ್ತಾರೆ. ನ್ಯಾಯ ಬಯಸಿ ಬಂದವರ ಅಹವಾಲುಗಳನ್ನೂ ಆಲಿಸುತ್ತಾರೆ. ಕುಲಪಂಚಾಯತರೆಲ್ಲರು ಚರ್ಚಿಸಿ ನ್ಯಾಯದ ತಿರುಳನ್ನೂ ಸ್ಪಷ್ಟವಾಗಿ ತಿಳಿದುಕೊಂಡು ಯಾರದು ಸರಿ, ಯಾರದು ತಪ್ಪೆಂದು ನಿರ್ಣಯಿಸುತ್ತಾರೆ. ತಪ್ಪಿತಸ್ಥನಾದವನು ದಂಡವನ್ನು ಕೊಡುವದರ ಜೊತೆಗೆ ನ್ಯಾಯ ಪಂಚಾಯತಿಯ ಖರ್ಚುವೆಚ್ಚಗಳನ್ನು ಕೊಡಬೇಕಾಗುತ್ತದೆ. ಆ ಸಮಯದಲ್ಲಿ

ಅಪರಾಧಿಯು ಖರ್ಚು ವೆಚ್ಚ ದಂಡಕೊಡಲಿಕ್ಕೆ ಹಣವಿಲ್ಲದ ಬಗ್ಗೆ ನೆಪಹೇಳಿದಲ್ಲಿ ಅವನು ಸಮಾಜದಿಂದ ಉಗ್ರ ಶಿಕ್ಷೆಗೆ ಗುರಿಯಾಗುತ್ತಾನೆ. ಜೊತೆಗೆ ಅವನ ಕುಟುಂಬ ಸಮೇತ ಬಹಿಷ್ಕಾರದಲ್ಲಿಡುತ್ತಾರೆ. ಅದೇ ಸಮಯದಲ್ಲಿ ಸಮಸ್ತ ಜನರೆದುರಿಗೆ ಈ ಕುಟುಂಬದೊಂದಿಗೆ ಬಳಕೆಮಾಡುವದಾಗಲಿ ಹಾಗೂ ಯಾವದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸದಂತೆ ಘೋಷಣೆ ಮಾಡುತ್ತಾರೆ ಮತ್ತು ಈ ಕುಟುಂಬದಲ್ಲಿ ಜನನ, ಮರಣ ಮದುವೆ ಸಮಾರಂಭಗಳಲ್ಲಿ ಯಾರೂ ಭಾಗವಹಿಸುವದಿಲ್ಲ. ನಂತರ ಈ ಕುಟುಂಬದವರು ಕುಲವನ್ನು ಬಯಸಿ ಸಮಾಜದಲ್ಲಿ ಸೇರ ಬಯಸಿದರೆ ಮತ್ತೆ ಸಮಾಜದ ಜನರು ಸೇರಿ ಅವನಿಂದ ದಂಡವನ್ನು ಪಡೆದು ಸಾರ್ವಜನಿಕವಾಗಿ ಎಲ್ಲರೆದರು ಬೊಟ್ಟು (ತಿಲಕ) ಹಚ್ಚಿಸಿಕೊಂಡು ಸಮಾಜದ ಕಟ್ಟು ಪಾಡುಗಳಿಗೆ ತಲೆಬಾಗಿ ಜಾತಿಯನ್ನು ಸೇರಲು ಅನುಕೂಲ ಮಾಡಿಕೊಡುತ್ತಾರೆ.

ಸಾಮಾಜಿಕ ನ್ಯಾಯ : ತವರು ಮನೆಯಲ್ಲಿ ಬೆಳೆದು ಮುಪ್ಪಿಗೆ ಬಂದ ಹೆಣ್ಣು ಮಗಳಿಗೆ ಇದೇ ಸುಡಗಾಡಸಿದ್ಧರ ಜಾತಿಯವರು ಕರೆದುಕೊಂಡು ಓಡಿ ಹೋಗಿದ್ದಾರೆ. ಈ ಎರಡು ಮನೆಯವರನ್ನು ಸಮಾಜದಿಂದ ಹೊರಗೆ ಇಡುವದು. ಇವರಿಗೆ ಕುಲಕೆಟ್ಟವರು (ಬಹಿಷ್ಕರಿಸಿ ನಿಷೇಧಿಸಲ್ಪಡುವರು) ಎಂದು ಹೇಳುತ್ತಾರೆ. ನಂತರ ಗಂಡಾಗಲಿ ಹೆಣ್ಣಾಗಲಿ ನಂತರ ಮರಳಿ ಮನೆಗೆ ಬಂದರೆ ಅಥವಾ ಇವೆರಡು ಮನೆಯವರಲ್ಲಿ ಯಾರಾದರೊಬ್ಬರು ಕರೆದುಕೊಂಡು ಬಂದಿದ್ದರೆ, ಅವರನ್ನು ಬಹಿಷ್ಕಾರದಲ್ಲಿಡುವರು, ಆಮೇಲೆ ಎರಡು ಕುಟುಂಬಗಳು ನ್ಯಾಯವನ್ನು ಬಯಸಿ ಬಂದರೆ ಸಮಾಜದವರು ಪಂಚಾಯತಿ ಕಟ್ಟೆ ಕೂಡಿಸುವರು. ಈ ಸಂದರ್ಭದಲ್ಲಿ ಎರಡು ಮನೆಯವರ ಕಡೆಯಿಂದ ಕುಲ ದೈವದವರಿಗೆ ಒಪ್ಪಿಗೆ ಆಗುವಷ್ಟು ಅವರಿಂದ ಕತಬಾ ಅಥವಾ ಕಡ್ಡಿಯನ್ನು (ಹಣದ ರೂಪದಲ್ಲಿ) ಕಟ್ಟಿಸಿಕೊಳ್ಳುವರು, ನ್ಯಾಯದಲ್ಲಿ ಹೆಣ್ಣಿನವರ ಕಡೆ ತಪ್ಪಾಗಿದ್ದರೆ ದಂಡ ವಿಧಿಸುವರು. ಅಲ್ಲಿ ನಡೆದ ಎಲ್ಲಾ ಖರ್ಚು-ವೆಚ್ಚಗಳನ್ನು ಹೆಣ್ಣಿನ ಮನೆಯವರ ಕಡೆಯಿಂದ ತೆಗೆದುಕೊಳ್ಳುವರು. ಅಲ್ಲದೆ ಮಗಳ ತಪ್ಪಿಗಾಗಿ ತಂದೆಗೆ ಹಿರಿಯರ ಸಮ್ಮುಖದಲ್ಲಿ ತಪ್ಪು ಒಪ್ಪಿಕೊಳ್ಳುವದರ ಜೊತೆಗೆ ತಪ್ಪಾಯಿತು ಎಂದು ಎಲ್ಲರ ಕಾಲುಗಳಿಗೆ ನಮಸ್ಕರಿಸುವದು. ಒಂದು ವೇಳೆ ಗಂಡಿನವರಿಂದ ತಪ್ಪು ಜರುಗಿದ್ದರೆ ಅವರಿಂದ ಕೂಡಾ ಮೇಲಿನಂತೆ ದಂಡ ಹಾಗೂ ಸಮಾಜದ ಹಿರಿಯರಿಗೆ ತಪ್ಪು ಒಪ್ಪಿಕೊಂಡು ಅವರ ಕಾಲುಗಳಿಗೆ ನಮಸ್ಕರಿಸುವನು. ಅಲ್ಲದೆ ಇವರಿಗೆ ಸಮಾಜದ ಹಿರಿಯರು ದಂಡ ಕಟ್ಟಿಸಿಕೊಳ್ಳುವರು, ಮೇಲಾಗಿ ಅವರಿಬ್ಬರಿಗೆ (ಹುಡುಗ ಮತ್ತು ಹುಡಿಗಿಗೆ) ಮತ್ತು ಅವರ ತಂದೆ-ತಾಯಿಯವರಿಗೆ ಇವರ ಮದುವೆ ಮಾಡಿಕೊಳ್ಳುವ ಬಗ್ಗೆ ತೀರ್ಮಾನೀಡುತ್ತಾರೆ. ಮುಂದೆ ಸರಿಯಾಗಿ ಬಾಳಲು ತಿಳಿಸುವರು.

ಹೆಣ್ಣು ಗಂಡು ಮದುವೆಗಾಗಿ ನಂತರ ಅವರಲ್ಲಿ ಹೊಂದಾಣಿಕೆಯಾಗದೇ ಹೋದಾಗ ಗಂಡು-ಹೆಣ್ಣು ವಿಚ್ಛೇದನ ಮಾಡಿಕೊಳ್ಳುವರು. ಮಾಡಿಕೊಳ್ಳುವಾಗ ಗಂಡ ಕಟ್ಟಿದ ತಾಳಿ ಮತ್ತು ಮೂಗಬಟ್ಟು ಮರಳಿಸುವ ಪದ್ಧತಿ ಉಂಟು ಅಥವಾ ಗಂಡು-ಹೆಣ್ಣನ್ನು ಬಿಡಬೇಕಾದರೆ ಗಂಡನಾದವನು ಸಮಾಜಕ್ಕೆ ಹೆಣ್ಣಿನ ಮೇಲೆ ಅಪರಾಧ ತಿಳಿಸಿ ಹಿರಿಯರಿಗೆ ಒಪ್ಪಿಗೆಯಾದರೆ ಗಂಡಿನ ಕಡೆಯವರಿಂದ ರಕ್ಷಣೆ ಪಡೆದು ಆ ಹೆಣ್ಣಿನ ಮೂಗತಿ ತಾಳಿ ತೆಗೆದುಕೊಂಡು ಆ ಹೆಣ್ಣನ್ನು ಬಿಟ್ಟುಕೊಡುವರು. ಇವೆಲ್ಲ ನಿಯಮಗಳ ಸಮಾಜದ ಹಿರಿಯರ ಸಮ್ಮುಖದಲ್ಲಿ ನ್ಯಾಯಕಟ್ಟೆಯಲ್ಲಿ ನಡೆಯುತ್ತದೆ.

ಗಂಡು ಬೇರೆ ಜಾತಿಯವಳನ್ನೂ ಮದುವೆಯಾಗಿದ್ದರೆ ಮದುವೆಯಾದ ಹೆಣ್ಣು ಹೆಚ್ಚಿನ ಜಾತಿಯವರಾಗಿದ್ದರೆ, ಅವನನ್ನು ಸುಡಗಾಡಸಿದ್ಧರ ಸಮಾಜದಿಂದ ಬಹಿಷ್ಕಾರಮಾಡಿ ನಂತರ ಸಮಾಜ ಬೇಕು ಎಂದು ಅವನು ಬಯಸಿ ಬಂದಲ್ಲಿ ಅವನಿಗೆ ಪಂಚಾಯಿತಿ ಸೇರಿಸಿ ದಂಡ ಹಾಕಿ ಪುನಃ ಅವಳ ಸಂಪರ್ಕ ಮಾಡದೆ ಸಲಹೆ ಕೊಟ್ಟು ಸಮಾಜದಲ್ಲಿ ಸೇರಿಸಿಕೊಳ್ಳುವರು.

ವಯಸ್ಸಿಗೆ ಬಂದ ಹೆಣ್ಣುಮಗಳು ತವರು ಮನೆಯಲ್ಲಿದ್ದಾಗ ಅಥವಾ ಗಂಡನ ಮನೆಯಲ್ಲಿದ್ದಾಗ ಆ ಹೆಣ್ಣುಮಗಳು ಸುಡಗಾಡಸಿದ್ಧರ ಜಾತಿ ಬಿಟ್ಟು ಬೇರೆ ಜಾತಿಯ ಪುರುಷನ ಜೊತೆ ಲೈಂಗಿಕ ಸಂಪರ್ಕ ಇಟ್ಟುಕೊಂಡು ಸಿಕ್ಕಿಕೊಂಡರೆ ಇವರನ್ನು ನ್ಯಾಯಪಂಚಾಯತಿಯವರು ಕೊನೆಯವರೆಗೂ ಸಮಾಜದಿಂದ ಹೊರಗೆ ಇಡುವರು. ಯಾರು ಅವರ ಜೊತೆಗೆ ಸಂಬಂಧವಾಗಲಿ, ಸಂಪರ್ಕವಾಗಲಿ ಬಯಸುವುದಿಲ್ಲ. ಆ ಹೆಣ್ಣಿನ ತಂದೆ-ತಾಯಿಯವರು ನ್ಯಾಯ ಬಯಸಿ ಸಮಾಜ ಪಂಚರನ್ನೂ ಕೇಳಿಕೊಂಡರೆ ನ್ಯಾಯ ಪಂಚಾಯತಿ ಮಾಡಿ ಸಮಾಜದವರು ದಂಡ ಹಾಕಿ ಜೊತೆಗೆ ದೈವದಲ್ಲಿ ಸೇರಿಸಿಕೊಳ್ಳುವರು. ಓಡಿಬಂದ ಹೆಣ್ಣುಮಗಳು ತಂದೆ-ತಾಯಿಯವರ ಮನೆಯ ಸಂಪರ್ಕವನ್ನು ಇಟ್ಟುಕೊಂಡಿರುವದು ಕಂಡು ಬಂದಲ್ಲಿ ಅವರಿಗೆ ಮತ್ತೆ ಬಹಿಷ್ಕಾರವಿಟ್ಟು ಬೇರೆ ಕುಟುಂಬಗಳ ಜೊತೆ ಸಂಪರ್ಕವಿರದ ಹಾಗೆ ಎಚ್ಚರ ವಹಿಸುವರು. ನಂತರ ಸಮಾಜವನ್ನು ಬಯಸಿ ಆ ಹೆಣ್ಣಿನ ತಂದೆ-ತಾಯಿಯವರು ಬಂದಿದ್ದರೆ ಮತ್ತೊಮ್ಮೆ ಕುಲ ಪಂಚಾಯತಿ ಸೇರಿಸಿ ಎರಡು ಪಟ್ಟು ದಂಡವಿಧಿಸಿ ಸಮಾಜದಲ್ಲಿ ಸೇರಿಸಿಕೊಳ್ಳುವರು.

ಮದುವೆಯಾಗಿ ಕೆಲವು ದಿನಗಳನಂತರ ಆಕಸ್ಮಿಕ ಗಂಡ ತೀರಿಕೊಂಡರೆ ಅಥವಾ ಅವಳಿಗೆ ಮಕ್ಕಳಾಗದಿದ್ದರೆ, ಅವಳು ಕೊನೆಯವರೆಗೂ ಗಂಡನ ಮನೆಯಲ್ಲಿ ಜೀವನ ಸಾಗಿಸಬೇಕು. ಒಂದು ವೇಳೆ ಅವಳಿಗೆ ಮಕ್ಕಳಾಗದಿದ್ದರೆ ಗಂಡನು ಆ ವರ್ಷದಲ್ಲಿ ಅಥವಾ ನಂತರ ತೀರಿಕೊಂಡರೆ ಅವಳು ಪುನಃ ಮರಳಿ ತವರು ಮನೆಗೆ ಬಂದು ಜೀವನ ಸಾಗಿಸುವಳು. ಅಲ್ಲದೆ ಅವಳ ತಂದೆ-ತಾಯಿ ಮಗಳು ವಯಸ್ಸಿನವಳಾದ ಮೇಲೆ ಪುನಃ ಮದುವೆಗೆ ವಿಚಾರಿಸಿ ಮತ್ತೊಂದು ಮದುವೆ ಮಾಡಲು ತೀರ್ಮಾನಿಸಿದರೆ ಅವರು

ಸಮಾಜದ ಹಿರಿಯರ ಗಮನಕ್ಕೆ ತಂದು ಅವಳಿಗೆ ಉಡಕಿ ರೂಪದಲ್ಲಿ ಮದುವೆ ಮಾಡುವರು. ಈ ಸಮಯದಲ್ಲಿ ಆ ಹೆಣ್ಣಿನ-ಗಂಡಿನ ಮನೆಯವರ ಅಪ್ಪಣೆ ಪಡೆದು ಗಂಡಿನ ತಾಳಿ ಹಾಗೂ ಮೂಗುತಿಯನ್ನು ಸಮಾಜದ ನ್ಯಾಯ ಪಂಚಾಯತಿ ಮುಖಾಂತರ ಪಡೆಯುತ್ತಾರೆ.

ಈ ಮೇಲೆ ತಿಳಿಸಿದ ವ್ಯಾಜ್ಯಗಳು ಇಂದಿನ ದಿನಮಾನಗಳಲ್ಲಿ ಸಮಾಜದ ಜನರಲ್ಲಿ ಸಾಕಷ್ಟು ಬೆಳವಣಿಗೆ ಕಂಡು ಬಂದಿದ್ದು ಸಮಾಜದ ಜನರಲ್ಲಿ ಸಾಮಾಜಿಕ ಪ್ರಜ್ಞೆ ಹೆಚ್ಚಿದೆ. ಹೀಗಾಗಿ ಸಮಾಜದಲ್ಲಿ ಮೇಲೆ ತಿಳಿಸಿದ ಕಾರಣಗಳಿಗೆ ಸಮಾಜದ ಹಿರಿಯರಿಂದ ತೀರ್ಪುಗಳ ಕುಲಪಂಚಾಯಿತಿಯಲ್ಲಿ ಬಹಳ ಬದಲಾವಣೆ ಕಂಡುಕೊಳ್ಳಬೇಕಾಗಿದೆ. ಜನರು ಜಾಗೃತರಾಗಿ ಮೊದಲು ಹೆಚ್ಚು ತಪ್ಪುಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಈಗಿರುವ ಸಮಾಜದಲ್ಲಿ ಕೆಲವು ಅನಿಷ್ಟ ಪದ್ಧತಿಗಳನ್ನು ಕಿತ್ತೊಗೆಯಬೇಕು. ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಬೆಳೆದು ಸಮಾಜದ ಶ್ರೇಯಸ್ಸಿಗಾಗಿ ಪ್ರಯತ್ನಿಸುವಂತರಾಗಬೇಕು.

**ವೈವಾಹಿಕ ಸಂಬಂಧ (ನ್ಯಾಯ) :** ಮದುವೆಯ ಮಾತುಕತೆ ಸುಡಗಾಡಸಿದ್ಧರ ಹಿರಿಯರ ಕುಲ ದೈವದ ಪಂಚಾಯತಿಯಲ್ಲಿ ನಡೆಯುವದು. ಮದುವೆಗೆ ಮುಂಚಿತವಾಗಿ ಹುಡುಗ-ಹುಡುಗಿ ಒಬ್ಬರಿಗೊಬ್ಬರು ನೋಡುವಂತಿಲ್ಲ. ಮನೆಯ ಹಿರಿಯರೆ ಹೆಣ್ಣು-ಗಂಡನ್ನು ನೋಡಿ ನಿರ್ಧಾರ ತೆಗೆದುಕೊಳ್ಳುವರು. ಮದುವೆಯು ಗಂಡಿನ ಮನೆಯವರೆ ಮಾಡಿಕೊಳ್ಳುತ್ತಾರೆ. ಮದುವೆಯ ಖರ್ಚು ವೆಚ್ಚಗಳನ್ನು ಕೂಡಾ ಗಂಡಿನ ಕಡೆಯವರೆ ನೋಡಿಕೊಳ್ಳುತ್ತಾರೆ ಹಾಗೂ ಹೆಣ್ಣಿನವರಿಗೆ ಉಪಚಾರಮಾಡುವ ಪದ್ಧತಿವುಂಟು. ವಧುವಿನ ತಂದೆ ತಾಯಿಯವರಿಗೆ ೧೬ ರೂಪಾಯಿಗಳನ್ನು ಹೋಲಿ ಕೊಡಬೇಕಾಗುತ್ತದೆ. ಮದುವೆಯ ನಂತರ ಹೆಣ್ಣು ಮಗಳನ್ನು ಗಂಡನ ಮನೆಗೆ ಕಳಿಸಿಕೊಡುವಾಗ ಈ ಎರಡು ಮನೆಯವರು ಹಿರಿಯರನ್ನು ಸೇರಿಸಿ ಮುಂದೆ ಆಗು-ಹೋಗುಗಳ ಬಗ್ಗೆ ಅವರಿಂದ ಸಲಹೆ ಪಡೆದುಕೊಳ್ಳುತ್ತಾರೆ. ನಂತರ ಹೆಣ್ಣು ಕೊಟ್ಟವರು ತೆಗೆದುಕೊಂಡವರು ಇವೆರಡು ಕುಟುಂಬಗಳಲ್ಲಿ ಸಮಸ್ಯೆಗಳಾಗಲಿ ಅಥವಾ ವೈಮನಸ್ಸು ಹೆಂಡತಿಗೆ ಕಿರುಕುಳ ಇನ್ನಾವ ಸಮಸ್ಯೆಗಳು ತಂದು ಒಡ್ಡಿದರೆ ಪುನಃ ಮದುವೆಯಲ್ಲಿ ಸಾರಿದ ಸಮಾಜದ ಹಿರಿಯರನ್ನು ಒಂದೆಡೆ ಸೇರಿಸಿ ಅವರಿಬ್ಬರ ತಪ್ಪುಗಳನ್ನು ತಿದ್ದಿಕೊಳ್ಳುವದರ ಬಗ್ಗೆ ಅವರಿಂದ ಸಲಹೆ ಪಡೆದುಕೊಳ್ಳುತ್ತಾರೆ. ಒಳ್ಳೆಯವರಾಗಿ ಬಾಳಲು ಸಲಹೆಗಳನ್ನು ಕೊಟ್ಟು ಬಂದ ಸಮಸ್ಯೆಗಳಿಗೆ ನಿವಾರಿಸಿ ಒಬ್ಬರಿಗೊಬ್ಬರನ್ನು ಕೂಡಿ ಬಾಳಲು ಮಾರ್ಗದರ್ಶನ ಮಾಡುತ್ತಾರೆ. ಎಲ್ಲರ ಜೊತೆಗೆ ಒಂದಾಗಿ ಬಾಳಲು ಹೇಳಿ ಮುಂದೆ ಈ ಸಮಸ್ಯೆಗಳು ಬರದ ಹಾಗೆ ನಡೆದುಕೊಳ್ಳಲು ಕಠೋರವಾಗಿ ಹೇಳಿ ನ್ಯಾಯ ಮುಗಿಸುತ್ತಾರೆ.

ಸುಡಗಾಡಸಿದ್ಧರಲ್ಲಿ ಬಾಲ್ಯವಿವಾಹ ಪದ್ಧತಿ ಇತ್ತು. ಹೆಣ್ಣು ಮಕ್ಕಳು ಬಾಲ್ಯವಿವಾಹವನ್ನು ಗುರುತಿಸಿ ಮದುವೆ ಮಾಡುತ್ತಿದ್ದರು. ಅವಳ ತಂದೆ-ತಾಯಿ

ದೊಡ್ಡವಳಾಗುವವರೆಗೆ ತಂದೆ-ತಾಯಿ ಮನೆಯಲ್ಲಿ ಇರುವದರಿಂದ ಅವಳಿಗೆ ಗಂಡನ ಮನೆಯವರು ಪ್ರತಿ ವರ್ಷ ಸೀರೆ ಕುಪ್ಪಸ ಕೊಡುವ ಪದ್ಧತಿ ಇತ್ತು. ಇತ್ತೀಚಿನ ದಿನಗಳಲ್ಲಿ ಈ ಸಮಾಜದ ಜನರಲ್ಲಿ ಬಾಲ್ಯವಿವಾಹದ ಪದ್ಧತಿ ಬಗ್ಗೆ ಸರಿಯಾದ ಕಲ್ಪನೆ ಬಂದಿರುವದರಿಂದ ಬಾಲ್ಯವಿವಾಹವನ್ನು ನಿಲ್ಲಿಸಿದ್ದಾರೆ. ಈ ಸಮಾಜದಲ್ಲಿ ತಮ್ಮ ತಮ್ಮಲ್ಲಿಯೆ ಸಂಬಂಧ ಬೆಳಿಸಿ ಕೊಳ್ಳುವದುಂಟು. ಹಿರಿಯರು ಈರ್ವರು ಯುವತಿಯರನ್ನು ಪರಸ್ಪರ ಮೆಚ್ಚಿ ಮದುವೆ ಮಾಡಿಕೊಳ್ಳುತ್ತಾರೆ. ತಂದೆ-ತಾಯಿ ಬಂಧುಗಳ ಮಾರ್ಗದರ್ಶನದ ಮೇರೆಗೆ ಸಮಾಜದ ಮುಖಂಡರ ಸಮ್ಮುಖದಲ್ಲಿ ನಿಶ್ಚಿತಾರ್ಥ ಮಾಡುತ್ತಾರೆ. ನಂತರ ಮದುವೆ ಸಮಾರಂಭಗಳು ನಡೆಯುತ್ತವೆ. ಮದುವೆಯ ನಂತರ ಅವರಲ್ಲಿ ಮನಸ್ತಾಪಗಳಾಗಿದ್ದಲ್ಲಿ ಗಂಡನ ಕಿರುಕುಳ ತಾಳದೆ ವಿಚ್ಛೇದನೆ ಬಯಸಿ ಬಂದರೆ ನ್ಯಾಯ ಸಮಿತಿಯವರು ಸರಿಯಾಗಿ ವಿಚಾರಿಸಿ ತಪ್ಪಿತಸ್ತರಿಗೆ ಒಳ್ಳೆಯ ಮಾರ್ಗದರ್ಶನ ನೀಡುತ್ತಾರೆ. ಎಂತಹ ಸಂದರ್ಭದಲ್ಲಿಯೂ ವಿಚ್ಛೇದನಕ್ಕೆ ಹಿರಿಯರು ಅವಕಾಶ ಮಾಡಿಕೊಡುವುದಿಲ್ಲ.

**ಚೌಕಟ್ಟಿಲ್ಲದ ಬದುಕು :** ಇವರಿಗೆ ಸ್ಥಿರವಾದ ನೆಲೆ ಇಲ್ಲದೆ ಊರಿಂದೂರಿಗೆ ಉದರ ಪೋಷಣೆಗಾಗಿ ಅಲೆಮಾರಿಗಳಾಗಿದ್ದು, ಗುಡಿ-ಗುಂಡಾರ-ಮಸಿದೆಗಳು ಇವರ ವಾಸದ ಸ್ಥಾನಗಳಾಗಿವೆ. ತಮ್ಮ ಕುಲಕಸಬು ವಿದ್ಯೆಯಿಂದ ಹಾಗೂ ತಮ್ಮಲ್ಲಿರುವ ಕೈಚಳಕದ ಚಮತ್ಕಾರದಿಂದ ಕಲೆಯನ್ನು ಪ್ರದರ್ಶಿಸಿ ದಿನದ ಬದುಕಿಗೆ ಅನ್ನ ಪಡೆಯುತ್ತಾರೆ. ಇತ್ತೀಚಿಗೆ ಸರಕಾರದವರು ಭಿಕ್ಷಾಟನೆಮಾಡಿಕೊಂಡು ಜೀವನ ಸಾಗಿಸುವ ಜನಾಂಗಕ್ಕೆ ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಜಾರಿಗೆ ತಂದು ಬೇಡಿಕೊಂಡು ತಿನ್ನುವ ಜನರನ್ನು ಶಿಕ್ಷಿಸುತ್ತಾರೆ. ಹೀಗಾಗಿ ಈ ಜನರ ಬದಕು ಅತಂತ್ರವಾಗಿದೆ.

ಮನುಷ್ಯನ ಹುಟ್ಟು ಆಕಸ್ಮಿಕ. ಹುಟ್ಟಿನಿಂದಲೆ ಯಾರು ಕೀಳಲ್ಲ ಯಾರು ಮೇಲಲ್ಲ. ನಿರ್ದಿಷ್ಟ ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ಯಾರ ಬದಕು ಬರಡಾಗಕೂಡದು. ಆದರೆ ಜಾತಿಯನ್ನೊಳಗೊಂಡ ವ್ಯವಸ್ಥೆಯಲ್ಲಿ ನೂರಾರು ವರುಷಗಳಿಂದ ನಿರ್ಲಕ್ಷಕ್ಕೊಳಗಾಗಿದ್ದ ಅಲೆಮಾರಿ ಜನಾಂಗವನ್ನು ಕರ್ನಾಟಕ ಸರ್ಕಾರವು ಗಂಭೀರವಾಗಿ ಪರಿಗಣಿಸಿ ಈ ಜನರ ಅಭಿವೃದ್ಧಿಗಾಗಿ ಸಾಮಾಜಿಕ ಸ್ಥಾನಮಾನ ಶೈಕ್ಷಣಿಕ ಪ್ರಗತಿ ಕಾನೂನು ಜಾರಿಯಲ್ಲಿ ತಂದು ಅಲೆಮಾರಿ ಜನಾಂಗದವರಿಗೆ ಪ್ರತ್ಯೇಕ ಕಾನೂನು ರಚಿಸಿ ಜೊತೆಗೆ ಪ್ರತ್ಯೇಕ ಇಲಾಖೆಯನ್ನು ತೆರೆಯಬೇಕು. ಮನೆ ಇಲ್ಲದವರಿಗೆ ಮನೆಗಳನ್ನು ಕಟ್ಟಿಸಿಕೊಡುವದು ಮತ್ತು ಸರಕಾರದಿಂದ ವ್ಯವಸಾಯ ಮಾಡಲು ಭೂಮಿ ಹಾಗೂ ಮಾಧ್ಯಮಿಕ ಶಿಕ್ಷಣದಿಂದ ಸ್ನಾತಕೋತ್ತರ ಶಿಕ್ಷಣದವರೆಗೆ ವಿದ್ಯಾರ್ಥಿಗಳಿಗೆ ಊಟ, ವಸತಿ, ಪಠ್ಯಪುಸ್ತಕ ಶಿಷ್ಯವೇತನ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಕೃಷಿ ಹೈನುಗಾರಿಕೆ ಮುಂತಾದ ಲಾಭದಾಯಕ ಕಸಬುಗಳಿಗೆ ಸಹಾಯ ಧನ ನೀಡಬೇಕು. ಈ ಕುಟುಂಬಗಳಿಗೆ ಬಡತನ ರೇಖೆಯಿಂದ ಮೇಲೆ ಬರಲು ಸಹಾಯವಾಗುವಂತಹ ಯೋಜನೆಗಳನ್ನು ಕೈಕೊಂಡು ಈ ಜನಾಂಗಕ್ಕೆ ಸೂಕ್ತ ನೆಲೆ

ಒದಗಿಸುವಲ್ಲಿ ಸರಕಾರ ಹಾಗೂ ಸಂಘ ಸಂಸ್ಥೆಗಳು ಮುಂದೆ ಬರಬೇಕು. ಆಗ ಈ ಜನರ ಬದಕು ಸುಧಾರಿಸಬಹುದು.

೧೯೦೧ರಲ್ಲಿ ಭಾರತೀಯ ಜನಗಣತಿಯ ವರದಿಯಲ್ಲಿ ಸುಡಗಾಡಸಿದ್ಧರನ್ನು ಜೋಗಿಗಳೆಂದು ಅಲೆಮಾರಿ ಜನಾಂಗವೆಂದು ವರ್ಣಿಸಲಾಗಿದೆ. ಎಡ್‌ವರ್ಡ್ ಥರಸ್ಟನ ಅವರು ಹೀಗೆ ದಾಖಲಿಸಿದ್ದಾರೆ.

The name is derived from Sudugadu a burial ground. The Inter marry among themselves and office of the agent is hereditary. They have particular tracts of country assigned to them. When on tour collecting burial fees. They can recognised by the wooden bell in the addition to usual metal one which they always carry about, without this no one would acknowledge the agents right to collect the fees.

ಇನ್ನೂ ಬಸವರಾಜ ನೆಲ್ಲಿಸರ ಇವರ ಸಮೀಕ್ಷೆಯ ಪ್ರಕಾರ ಈ ಜನಾಂಗದ ವಾಸಿಸುತ್ತಿರುವ ಪ್ರದೇಶ ಧಾರ್ಮಿಕ ವ್ಯವಸ್ಥೆ ಕಾಂರುಕ ನಂಟುಗಳನ್ನು ಇಟ್ಟುಕೊಂಡಂತಹವರಾಗಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಕನ್ನಡ ಸಾಹಿತ್ಯ ಅಕಾಡಮಿಯವರ ನೇಮಿಸಿದ ಸಮೀಕ್ಷೆ ವರದಿಯ ಪ್ರಕಾರ ಈ ಜನಾಂಗದ ಒಳ್ಳೆಯ ಅಭಿಪ್ರಾಯ ಹೊಂದಿರುವದಿಲ್ಲ. ಕಾರಣ ಇದೇ ಜನಾಂಗದ ವಿದ್ಯಾವಂತರನ್ನಾಗಲಿ ಅಥವಾ ಸಮಾಜದ ತಿಳುವಳಿಕೆಯನ್ನು ಹೊಂದಿದಂಥವರನ್ನು ಸಂಪರ್ಕಿಸದೆ ಅನಕ್ಷರಸ್ಥರನ್ನು ಹಾಗೂ ಮೂಢನಂಬಿಕೆಗಳನ್ನೂ ಇಟ್ಟುಕೊಂಡ, ಭಿಕ್ಷಾಟನೆ ವೃತ್ತಿಯನ್ನು ಇಟ್ಟುಕೊಂಡು ಬದುಕುವವರು ಜನರೊಂದಿಗೆ ಸಮೀಕ್ಷೆ ನಡೆಸಿ ವಿಚಿತ್ರ ರೀತಿಯ ಹೇಳಿಕೆಯನ್ನು ಕೊಟ್ಟಿದ್ದಾರೆ. ಇದಲ್ಲದೆ ತಮಗೆ ಯಾವದೇ ವೈಯಕ್ತಿಕ ರೂಪದಲ್ಲಿ ಲಾಭ ದೊರೆಯುತ್ತದೆ ಎಂಬ ದುರಾಶೆಗಾಗಿ ಅವರಿಂದ ತಪ್ಪು ಮಾಹಿತಿ ಪಡೆದು ಅವುಗಳನ್ನು ಲೇಖನಿಯ ಮುಖಾಂತರ ಪುಸ್ತಕಗಳ ಮುಖಾಂತರ ಹೊರತಂದಿದ್ದಾರೆ. ಇದೇ ಜನಾಂಗದ ಸರಿಸಮಾನರಾದ ಬೇರೆ ಬುಡಕಟ್ಟು ಜನಾಂಗದವರಿಂದ ಹಾಗೂ ಮೇಲ್ಜಾತಿಯವರ ಜನಾಂಗದ ದೃಷ್ಟಿಯಲ್ಲಿ ಕೀಳುಮಟ್ಟದಲ್ಲಿ ಕಾಣಲು ಅವಕಾಶ ಮಾಡಿಕೊಟ್ಟಿದ್ದಾರೆ.

ಈ ಜನಾಂಗದವರು ಹೊಟ್ಟೆಯ ಪಾಡಿಗಾಗಿ ಕೈಚಳಕವಿದ್ಯೆಯನ್ನು ಪ್ರದರ್ಶಿಸಿ ಪ್ರಾಮಾಣಿಕವಾಗಿ ಬೇಡುವ ಜನರಾಗಿದ್ದು, ಮಾಹಿತಿಯಲ್ಲಿ ತಿಳಿಸಿದಂತೆ ಇವರು ಹೆಣ ಸುಟ್ಟ ಉಳಿದ ಕಟ್ಟಿಗೆಯಿಂದ ಹಾಗೂ ಸ್ಮಶಾನದಲ್ಲಿಯೇ ಹೆಣದ ಸಂಬಂಧಿಕರಿಂದ ಅಕ್ಕಿಯನ್ನು ಪಡೆದು ಅಡಿಗೆಮಾಡುತ್ತಾರೆ ಹಾಗೂ ಸತ್ತ ಬಾಣಂತಿಯ ಕೈಯನ್ನು ಇಟ್ಟುಕೊಂಡು ಮಾಟ, ಯಂತ್ರ, ಮಂತ್ರ, ವಶೀಕರಣ ಮಾಡುವರೆಂದು ತಿಳಿಸಿದ್ದಾರೆ. ಇಂತಹ ಹೇಳಿಕೆಯಿಂದ ಒಂದು ಜನಾಂಗದ ಇತಿಹಾಸವನ್ನೂ ಅವಹೇಳನ ಮಾಡುವದರ

ಜೊತೆಗೆ ಅವರಿಗೆ ಬೇರೆ ಸಮಾಜದವರೊಂದಿಗೆ ಸ್ಥಾನ-ಮಾನ ದೊರೆಯದಂತಾಗುತ್ತದೆ. ಮುಂದಾದರು ಕೂಡಾ. ಈ ಜನಾಂಗದ ನಿಖರವಾದ ಮಾಹಿತಿಯನ್ನು ಪಡೆದು ಮುಂದಾಗುವ ಅನಿಷ್ಟತೆಯನ್ನು ತಡೆಯಬಹುದು. ಇವರು ತಮ್ಮದೇ ಆದ ಆಂತರಿಕ ವ್ಯವಸ್ಥೆಯನ್ನು ಹೊಂದಿದ್ದು ಸಮಾಜದ ಯಾವದೇ ಬಗೆಯ ವ್ಯವಹಾರಗಳನ್ನು ಅವರಲ್ಲಿಯೆ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಅಲ್ಲದೆ ಪ್ರತಿಯೊಬ್ಬರು ಸಮಾಜದ ಕಟ್ಟುಪಾಡುಗಳನ್ನು ಪಾಲಿಸಿಕೊಂಡು ಬರುವ ಮನೋಭಾವನೆಯನ್ನು ಹೊಂದಿದವರಾಗಿದ್ದಾರೆ. ಸಮಾಜದ ಜನರ ಉದ್ದೇಶ ಪ್ರಾಣಕ್ಕಿಂತ ಮಾನವೇ ಮುಖ್ಯ ನುಡಿದಂತೆ ನಡೆದುಕೊಳ್ಳುವದು ಮತ್ತು ಸಮಾಜದಲ್ಲಿ ಅತ್ಯಾಚಾರ, ಅವ್ಯವಹಾರ, ಅನ್ಯಾಯಗಳು ನಡೆಯದಂತೆ ಸಮಾಜದ ಮುಖ್ಯಸ್ಥರು ಎಚ್ಚರ ವಹಿಸುತ್ತಾರೆ. ಒಂದುವೇಳೆ ಸಮಾಜದ ನಿಯಮುಗಳನ್ನು ಉಲ್ಲಂಘಿಸಿದವರನ್ನು ಕುಲದಿಂದ ಬಹಿಷ್ಕರಿಸುವ ಕಠಿಣ ಶಿಕ್ಷೆ ಇವರಲ್ಲಿದೆ. ಹೀಗಾಗಿ ಸಮಾಜದ ಕಟ್ಟುಪಾಡುಗಳಿಗಾಗಿ ತಲೆಬಾಗಿ ನಡೆದುಕೊಳ್ಳುತ್ತಾರೆ.

ಇತ್ತೀಚಿನ ದಿನಗಳಲ್ಲಿ ದಾನ-ಧರ್ಮಗಳಲ್ಲಿ ನಂಬಿಕೆಗಳು ಕಡಿಮೆ ಯಾಗಿರುವದರಿಂದ ಕುಲಕಸಬು ಅಂದರೆ. ಸುಡಗಾಡಸಿದ್ಧರ ಭಿಕ್ಷಾಟನೆಯ ವೃತ್ತಿಯನ್ನು ನಿಲ್ಲಿಸಲಾಗಿದೆ. ಹೀಗಾಗಿ ಅನೇಕ ಕುಟುಂಬಗಳು ಕೂಲಿ, ನಾಲಿ ಹಾಗೂ ಹೊಲ ಗದ್ದೆಗಳನ್ನು ಮಾಡಿಕೊಂಡು ಕಷ್ಟದ ಜೀವನ ಸಾಗಿಸುತ್ತಿದ್ದಾರೆ. ಇನ್ನೂ ಕೆಲವರು ಸಣ್ಣ ಪುಟ್ಟವ್ಯವಹಾರಗಳನ್ನು ಹೊಂದಿದ್ದಾರೆ.

ಈ ಜನಾಂಗದವರು ಇತರ ರಾಜ್ಯಗಳಾದ ಆಂಧ್ರಪ್ರದೇಶ ಹಾಗೂ ಮಹಾರಾಷ್ಟ್ರಗಳಲ್ಲಿ ತಮಗೆ ಅನುಕೂಲವಾದ ಸ್ಥಳದಲ್ಲಿ ನೆಲಸಿದ್ದಾರೆ. ಈ ಜನಾಂಗದಲ್ಲಿ ಸುಡುಗಾಡಸಿದ್ಧರ ಹೆಸರಿನಲ್ಲಿ ಭೀಕ್ಷಾಟನೆ ಮಾಡುವದರ ಜೊತೆಗೆ ಇನ್ನುಳಿದ ಭಿಕ್ಷಾಟನೆ ವೃತ್ತಿಯಲ್ಲಿ ಬೇರೆ ಬೇರೆ ವೇಷವನ್ನು ಹಾಕಿಕೊಂಡು ಬೇರೆ ಬೇರೆ ಹೆಸರಿನಿಂದ ಕರೆಯಲ್ಪಡುತ್ತಾರೆ. ೧. ನಿರಂಜನ ಭಿಕ್ಷಾಟನೆ ವೃತ್ತಿಯಲ್ಲಿ ನಿರಂಜನನೆಂದು ೨. ಜಂಗಾಲು (ರಾಮಕೊಂಡಾಡಿ) ೩. ವೇಷಗಾರರು, (ಬುಡಗಜಂಗಮ) ೪. ದೇವಿಯ ಮುಖವಾಡವನ್ನಿಟ್ಟುಕೊಂಡು ಬೇಡುವ ಬಹಾಬಂತರೆಂದು ಹೀಗೆ ಕುಲಕಸಬಿನೊಂದಿಗೆ ಈ ಜಾತಿಗಳ ಹೆಸರಿನಲ್ಲಿ ಕಂಡು ಉಪಜೀವನದ ವೃತ್ತಿಯನ್ನಾಗಿ ಮಾಡಿಕೊಂಡಿದ್ದಾರೆ.

ದಕ್ಷಿಣ ವಲಯದಲ್ಲಿ ಬುಡಕಟ್ಟು ಜನಾಂಗಗಳ ಬಗ್ಗೆ ಶ್ರೀ ಹೆಚ್. ವ್ಹಿ. ನಂಜುಂಡಯ್ಯ ಹಾಗೂ ಎಲ್. ಕೆ. ಅನಂತಕೃಷ್ಣ ಅಯ್ಯರ ಹಿಂದಿನ ಮೈಸೂರ ರಾಜ್ಯದಲ್ಲಿ ಮಾನವ ವಿಜ್ಞಾನದ ಕ್ಷೇತ್ರಕ್ಕೆ ಉಪಯುಕ್ತ ಗ್ರಂಥಗಳಾದ The Mysore Tribe and Cast ಎನ್ನುವ ನಾಲ್ಕು ಸಂಪುಟಗಳಲ್ಲಿ ರಚಿಸಿದ್ದಾರೆ. ಅದರಂತೆ ಎಡ್‌ವರ್ಡ್ ಥರಸ್ಟನ್‌ರವರು ಹಗಲು ವೇಷಗಾರರನ್ನು (pogalu Veshan) ಕುರಿತು A class of Felager beggers who put in disguises (Veshalu) while begging

at the annual Festival at Tirupathi in honour of Gods Gangamma Custom requiries people to appear is different disguise every morning and evening these disguises includes those of Bairagi Serpent etc. ಎಂದು ಎಚ್ಚರಿಸಿದ್ದಾರೆ.

೧೯೫೧ ಜನಗಣತಿಯ ಪ್ರಕಾರ ಬೇಡ (ಬುಡಗ) ಜಂಗಾಲು ಜನಾಂಗವನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಗುರುತಿಸಲಾಗಿದೆ. ೧೯೭೬ರ ಪೂರ್ವದಲ್ಲಿ ಮೇಲಿನ ಜಾತಿಗಳೆಲ್ಲವು ಸಂಚಾರಿ, ಅರೇ ಸಂಚಾರಿ ಜನಾಂಗದವರೆಂದು ಪರಿಗಣಿಸಿದ್ದರು. ನಂತರ ಹಾವನೂರರವರ ವರದಿಯ ಸಮಯದಲ್ಲಿ ಅಲ್ಪ ಸಂಖ್ಯೆಯುಳ್ಳ ಜನರು ಹಾಗೂ ಕೆಲವೆ ವಿದ್ಯಾವಂತ ಜನರನ್ನು ಹೊಂದಿದ್ದು ಪ್ರತಿ ಜಿಲ್ಲೆಗಳಿಂದ ಈ ಜಾತಿಯವನ್ನು ಪರಿಶಿಷ್ಠ ಜಾತಿಗೆ ಸೇರಿಸಲು ಹೋರಾಟ ಮಾಡಿ ಯಶಸ್ವಿಯನ್ನು ಪಡೆದೆವು. ಇತ್ತೀಚಿನ ಈ ಜನಾಂಗವು ಅಲ್ಲಲ್ಲಿ ನೆಲಸಿ ಒಳ್ಳೆಯ ವಿದ್ಯಾವಂತರಾಗಿದ್ದಾರೆ. ಅಲ್ಲದೆ ಉತ್ತಮ ಹುದ್ದೆಯನ್ನೂ ಕೂಡಾ ಹೊಂದಿದ್ದಾರೆ. ಆದಾಗ್ಯೂ ಪ್ರತಿಶತ ೯೦% ರಷ್ಟು ಜನ ಅವಿದ್ಯಾವಂತರಾಗಿದ್ದಾರೆ. ಹೀಗಾಗಿ ಸರಕಾರ ಸೌಲಭ್ಯಗಳಿಂದ ವಂಚಿತರಾಗಿದ್ದಾರೆ. ಇವರಿಗೆ ಇಲ್ಲಿಯವರೆಗೆ ರಾಜಕೀಯ ಕ್ಷೇತ್ರವಂತು ತುಂಬ ಬಡವಾಗಿದೆ ಹಾಗೂ ಇದುವರೆಗೆ ರಾಷ್ಟ್ರದಲ್ಲಾಗಲಿ ರಾಜ್ಯದಲ್ಲಾಗಲಿ ಕೊನೆಯಪಕ್ಷ ತಾಲೂಕ ಮತ್ತು ಜಿಲ್ಲಾ ಪಂಚಾಯತ್ ಮಟ್ಟದಲ್ಲಾಗಲಿ ರಾಜಕೀಯ ವ್ಯಕ್ತಿಗಳಿರುವದಿಲ್ಲ ಹೀಗಾಗಿ ರಾಜಕೀಯವಾಗಿ ನಿರ್ಲಕ್ಷಿತ ಜನರೆಂದು ತೀರ್ಮಾನಿಸಲ್ಪಟ್ಟಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಈ ಜನಾಂಗದವರು ಕರ್ನಾಟಕದಲ್ಲೆಡೆ ಸುತ್ತಿ ಯಾವ ಯಾವ ಜನರು ವಾಸಿಸುತ್ತಿದ್ದಾರೆ. ಯಾವ ವೃತ್ತಿಯನ್ನು ಕೈಕೊಂಡಿದ್ದಾರೆ. ವಿದ್ಯಾವಂತರೆಷ್ಟು ಹಾಗೂ ಸರಕಾರಿ ಸೇವೆಯಲ್ಲಿ ಇದ್ದವರನ್ನು ಗುರುತಿಸಿ ಸಂಪರ್ಕವನ್ನು ಬೆಳೆಸುವ ವ್ಯವಸ್ಥೆಯನ್ನು ಕೈಕೊಂಡಿದ್ದಾರೆ. ನಂತರ ಸುಡಗಾಡಸಿದ್ಧರ ಜೊತೆಗೆ ಇನ್ನುಳಿದ ಮೇಲೆ ತಿಳಿಸಿದ ಉಪಜಾತಿಗಳೊಂದಿಗೆ ಸಾಮಾಜಿಕ ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ.

ಮೊಟ್ಟಮೊದಲು ಬೆಳಗಾವಿ ಜಿಲ್ಲೆಯಲ್ಲಿ ಸುಡಗಾಡಸಿದ್ದರ ಸಂಘವನ್ನು ಸ್ಥಾಪಿಸಲಾಯಿತು. ನಂತರ ರಾಜ್ಯ ಮಟ್ಟದ ಸಂಘಟನೆಯನ್ನು ಕೈಕೊಳ್ಳುವದರ ಜೊತೆಗೆ ಪ್ರತಿ ಜಿಲ್ಲೆಗಳಲ್ಲಿ ಸಂಘ ರಚಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇವರು ಶೈಕ್ಷಣಿಕವಾಗಿ ಆರ್ಥಿಕವಾಗಿ ಬಹಳ ಹಿಂದೆ ಇರುವದರಿಂದ ಸಂಘಟನೆಯ ಶಕ್ತಿಯ ಕೊರತೆ ಎದ್ದು ಕಾಣುತ್ತದೆ. ನಾವು ಮೇಲಿಂದ ಮೇಲೆ ಸಂಘಟನೆಯ ಮೂಲಕ ಜನಾಂಗದ ಪರಿಸ್ಥಿತಿಯನ್ನು ಗುರತಿಸಿಕೊಂಡು ಸರಕಾರಕ್ಕೆ ನಮ್ಮ ಅಸಹಾಕತೆ ನಮ್ಮ ಜನರಿಗೆ ಅನುಕೂಲಕರವಾದ ಸಮಾಜಪರ ಕೆಲಸಮಾಡುವ ಗುರುತರವಾದ ಜವಾಬ್ದಾರಿ ನಮ್ಮದಾಗಿದೆ. ಕಾರಣ ಈ ಕೆಳಗೆ ತಿಳಿಸಿದ ನಮ್ಮ ಮೂಲಭೂತ ಬೇಡಿಕೆಗಳನ್ನು ಸರಕಾರದ ಗಮನಕ್ಕೆ ತರುವದರಲ್ಲಿ ಪ್ರಾಮಾಣಿಕ ಪ್ರಯತ್ನ ನಮ್ಮದಾಗಬೇಕು.

೧. ಸುಡಗಾಡ ಸಿದ್ಧರು : ೧. ನಿರಂಜನ ೨. ಜಂಗಾಲು (ರಾಮಕೊಂಡಾಡಿ) ೩. ಬುಡಕ ಜಂಗಾಲು (ವೇಷಗಾರರು) ೪. ಬಾಜಬಂತರು

**ಈ ಉಪಜಾತಿಗಳನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು.**

೨. ಬುಡಕಟ್ಟು ಜನಾಂಗ ಅಥವಾ ಅಲೆಮಾರಿ ಜನಾಂಗ ಇವರಿಗೆ ಸರಕಾರದ ಸೇವೆಯಲ್ಲಿ ಪ್ರತ್ಯೇಕ ಮಿಸಲಾತಿ.

೩. ಶೈಕ್ಷಣಿಕವಾಗಿ ಹೆಚ್ಚಿನ ಅಭ್ಯಾಸಕ್ಕಾಗಿ ವಿಶೇಷ ರಿಯಾಯಿತಿಕೊಡುವದು.

೪. ಸರಕಾರದವರು ಭಿಕ್ಷಾಟನೆ ನಿಷೇಧ ಕಾಯ್ದೆಯನ್ನು ಕಾರ್ಯರೂಪಕ್ಕೆ ತರುವದರಿಂದ ಭಿಕ್ಷಾಟನೆ ಕೈಕೊಂಡ ಜನರಿಗೆ ಸ್ವಯಂ ಉದ್ಯೋಗವನ್ನು ಒದಗಿಸುವದು.

೫. ಅಲೆಮಾರಿ ಜನಾಂಗದವರಾದ ಇವರು ಅವರು ಬಯಸಿದ ಊರಿನಲ್ಲಿ ಶಾಶ್ವತವಾಗಿ ವಾಸಿಸಲು ಸ್ಥಳ ಮನೆ ಹಾಗೂ ಮನೆಗಳನ್ನು ಕಟ್ಟಿಕೊಡುವದು.

೬. ವಿದ್ಯಾವಂತರಿಗೆ ನೌಕರಿಯ ಭರವಸೆ ಹಾಗೂ ಸ್ವಯಂ ಉದ್ಯೋಗ ಕೈಕೊಳ್ಳಲು ಆರ್ಥಿಕ ಸಹಾಯ ಮಾಡುವದು ಹಾಗೂ ಸರಕಾರವು ಇತ್ತೀಚಿನ ಉದಾರೀಕರಣ ಬಗ್ಗೆ ಹೇಳುತ್ತಾ ಖಾಸಗಿ ಕಂಪನಿಗಳಲ್ಲಿ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿ ಸೌಲಭ್ಯವನ್ನು ಕಡ್ಡಾಯಗೊಳಿಸುವದು.

೭. ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಕೊಳ್ಳಲು ಆರ್ಥಿಕ ಸಹಾಯ ನೀಡುವದು.

೮. ಈ ಜನಾಂಗಕ್ಕೆ ಸರ್ಕಾರದ ಭೂಮಿಯನ್ನು ಪುಕ್ಕಟೆಯಾಗಿ ಒದಗಿಸುವದು.

೯. ಸ್ವಾತಂತ್ರ್ಯ ಸಿಕ್ಕು ೬೦ ವರ್ಷ ಕಳೆದರೂ ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ಜನಾಂಗಕ್ಕೆ ರಾಜಕೀಯ ಸ್ಥಾನಮಾನ ಕಲ್ಪಿಸಿಕೊಡುವದು.

◆

# ಎರಡನೆಯ ಗೋಷ್ಠಿಯ ಅಧ್ಯಕ್ಷರ ಭಾಷಣ

ಶ್ರೀ ಎಚ್. ಎಸ್. ಪಾಟೀಲ.

ಎರಡನೆಯ ಗೋಷ್ಠಿಯಲ್ಲಿ ಪಾಲ್ಗೊಂಡಿರುವ ಡಾ. ಟಿ. ಎಂ. ಭಾಸ್ಕರವರೇ, ಡಾ. ಹರಿಶ್ಚಂದ್ರ ದಿಗ್ಸಂಗೀಕರವರೇ ಹಾಗೂ ಶ್ರೀ ಎಂ. ಎಸ್. ಗಂಟಿಯವರೇ ಜಿಲ್ಲಾ ಸುಡುಗಾಡುಸಿದ್ಧ ಸಮಾಜದವರೇ ಹಾಗೂ ನಾಗರಿಕ ಬಂಧುಗಳೇ ತಮಗೆಲ್ಲ ನಮಸ್ಕಾರ.

ಡಾ. ಟಿ. ಎಂ. ಭಾಸ್ಕರವರು ಗುಲಬರ್ಗಾ ವಿವಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದಾರೆ. ಇವರು ಸುಡುಗಾಡು ಸಿದ್ಧರು ಸ್ತ್ರೀ ಸಂವೇದನೆ ಎಂಬ ವಿಷಯದ ಮೇಲೆ ತಮ್ಮ ಪ್ರಬಂಧ ಮಂಡಿಸಿದ್ದಾರೆ. ಇವರು ಗುಲಬರ್ಗಾ ವಿಶ್ವವಿದ್ಯಾಲಯದಿಂದ ಸುಡುಗಾಡುಸಿದ್ಧರು ಕುರಿತು ಮಹಾ ಪ್ರಬಂಧವನ್ನು ಸಿದ್ಧಪಡಿಸಿ ಪಿಎಚ್.ಡಿ. ಪದವಿಯನ್ನು ಪಡೆದುಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯ ಸುಡುಗಾಡು ಸಿದ್ಧರು ಹಾಗೂ ರಾಜ್ಯದ ಎಲ್ಲ ಕಡೆಯ ಸುಡುಗಾಡು ಸಿದ್ಧರನ್ನು ಕುರಿತು ಆಳವಾದ ಅಧ್ಯಯನ ಮಾಡಿದ್ದಾರೆ. ಕ್ಷೇತ್ರ ಕಾರ್ಯದಲ್ಲಿ ಸುಡುಗಾಡು ಸಿದ್ಧರ ಸ್ತ್ರೀ ಸಂವೇದನೆಯನ್ನು ಕಣ್ಣಾರೆ ಕಂಡಿದ್ದಾರೆ. ಇದರಿಂದಾಗಿ ಇವರ ಪ್ರಬಂಧದಲ್ಲಿ ಗಟ್ಟಿಯಾದ ವಿಚಾರಗಳು ಮಂಡಿಸಲ್ಪಟ್ಟಿವೆ.

ಸುಡುಗಾಡು ಸಿದ್ಧರು ಒಂದು ಅಲೆಮಾರಿ ಜನಾಂಗವಾಗಿದ್ದರೂ ಕುಟುಂಬ ಪದ್ಧತಿ ಇರುವುದರಿಂದ ಮಹಿಳೆ ತನ್ನ ಗಂಡನೊಂದಿಗೆ ವಾಸವಾಗಿರುತ್ತಾಳೆ. ತಮ್ಮ ಗಂಡಸರು ತಾವು ಸಂಪಾದಿಸಿದ ಹಣ ತಮ್ಮ ಪ್ರಯಾಣ ವೆಚ್ಚ ಹಾಗೂ ತಮ್ಮ ಹವ್ಯಾಸದ ವೆಚ್ಚವನ್ನು ತೆಗೆದು ಮನೆತನಕ್ಕೆ ನೀಡುತ್ತಾರೆ. ಉಳಿದೆಲ್ಲ ಕುಟುಂಬದ ವೆಚ್ಚಗಳನ್ನು ಈಕೆ ನಿಭಾಯಿಸುತ್ತಾಳೆ. ತನ್ನ ಕರಕುಶಲತೆಯಿಂದ ಈಚಲು ಚಾಪೆ ಹೆಣೆಯುತ್ತಾಳೆ. ಮಾರಿ ಬಂದ ಹಣವನ್ನು ಕುಟುಂಬದ ನಿರ್ವಹಣೆಗೆ ಹಾಕುತ್ತಾಳೆ. ಈ ಬುಡಕಟ್ಟು ಜನಾಂಗದಲ್ಲಿ ದೇವದಾಸಿ ಪದ್ಧತಿ ಇಲ್ಲ. ಮಹಿಳೆಗೆ ಈ ಜನಾಂಗದಲ್ಲಿ ದೊಡ್ಡಗೌರವವಿದೆ. ಇವರಲ್ಲಿ ಅನೈತಿಕತೆ ಕಂಡು ಬರುವುದಿಲ್ಲ. ಈ ವಿಷಯಗಳನ್ನು ತಿಳಿಸಿ ಉಪಕಾರಮಾಡಿದ್ದಾರೆ. ಇದು ಈ ಸಮಾಜದ ಬಗ್ಗೆ ಹೆಮ್ಮೆಪಡುವ ಸಂಗತಿಯಾಗಿದೆ.

ಡಾ. ಹರಿಶ್ಚಂದ್ರ ದಿಗ್ಸಂಗೀಕರವರು ಹಂಪಿ ಕನ್ನಡ ವಿ.ವಿ.ಯಲ್ಲಿದ್ದಾರೆ. ಸುಡುಗಾಡು ಸಿದ್ಧರು ಮತ್ತು ಅವರ ಜಾನಪದ ಕಲೆಗಳು ಎಂಬ ವಿಷಯದ ಮೇಲೆ ತಮ್ಮ ಪ್ರಬಂಧ

ಮಂಡಿಸಿದ್ದಾರೆ. ಪ್ರತಿಯೊಂದು ಬುಡಕಟ್ಟು ಜನಾಂಗಕ್ಕೂ ತಮ್ಮದೇ ಜಾನಪದ ಕಲೆಗಳಿವೆ. ಸುಡುಗಾಡುಸಿದ್ಧರು ನಡೆಸುವ ಆಟಗಳು ಮಹತ್ವದ ಕಲೆಯಾಗಿವೆ. ಕೈಚಳಕದ ಆಟ. ಗುಂಡು ನುಂಗುವುದು ಅವುಗಳನ್ನು ಬಾಯಿಂದ ಹೊರತರಿಸುವುದು. ಕೆಲವೊಮ್ಮೆ ಮೂಗಿನಿಂದ ಇಲ್ಲವೆ ಕಣ್ಣಿಂದ ಹೊರ ಬಂದಂತೆ ಮಾಡಿ ತೋರಿಸುವ ಜಾನಪದ ಕಲೆ ಅಗಾಧವಾಗಿದೆ. ಮೋಡಿ–ಮಂತ್ರ, ಇಂದ್ರಜಾಲ ವಿದ್ಯೆ ಕುರಿತು ಬಹಳಷ್ಟು ಪರಿಶ್ರಮವಹಿಸಿ ವಿಷಯ ಸಂಗ್ರಹಿಸಿದ್ದು ತುಂಬ ಸರಳವಾಗಿ ಸಭಿಕರಿಗೆ ವಿಷಯದ ಮನದಟ್ಟು ಮಾಡಿಕೊಟ್ಟಿದ್ದಾರೆ.

'ಸುಡುಗಾಡು ಸಿದ್ಧರು : ನ್ಯಾಯ ಪಂಚಾಯಿತಿ' ಕುರಿತು ಮಾತನಾಡಿರುವ ಶ್ರೀ ಎಂ. ಎಸ್. ಗಂಟಿಯವರು ಸ್ಥಳೀಯ ಶ್ರೀ ಗವಿಸಿದ್ಧೇಶ್ವರ ಕಾಲೇಜಿನ ಮುಖ್ಯ ಗ್ರಂಥಪಾಲಕರು, ಸುಡುಗಾಡುಸಿದ್ಧರು ಜನಾಂಗದವರೇ ಆಗಿದ್ದಾರೆ. ತಮ್ಮ ಜನಾಂಗದ ಬಗ್ಗೆ ವಿಶೇಷ ಆಸಕ್ತಿ ತಾಳಿದ್ದಾರೆ. ನ್ಯಾಯ ಪಂಚಾಯಿತಿ ಕಟ್ಟೆಗಳ ಮೇಲೆ ವಿಶೇಷ ಬೆಳಕು ಬೀರಿದ್ದಾರೆ. ಹರಪನಹಳ್ಳಿ ಕಟ್ಟೆ ಮತ್ತಿತರ ನ್ಯಾಯ ಪಂಚಾಯಿತಿ ಕಟ್ಟೆಗಳನ್ನು ಕುರಿತು ತಿಳಿಸಿಕೊಟ್ಟಿದ್ದಾರೆ.

ಈ ಎಲ್ಲ ವಿದ್ವಾಂಸರು ತಮ್ಮ ವಿದ್ವತ್ಪೂರ್ಣ ಪ್ರಬಂಧಗಳನ್ನು ಮಂಡಿಸಿದ ಮೇಲೆ ನಾನು ಮಾತನ್ನಾಡುವುದು ಏನೂ ಇಲ್ಲ, ಆದರೂ ಸುಡುಗಾಡು ಸಿದ್ಧರು ಹಾಗೂ ನನ್ನ ಬಾಲ್ಯದ ಅನುಭವಗಳನ್ನು ತಮ್ಮೆಲ್ಲರೊಂದಿಗೆ ಹಂಚಿಕೊಳ್ಳಲು ತುಂಬ ಸಂತೋಷವೆನ್ನಿಸುತ್ತಿದೆ.

ಸುಡುಗಾಡುಸಿದ್ಧರು ಈಗಲೂ ನಮಗೆ ನೋಡಲು ಸಿಗುವ ಒಂದು ದೊಡ್ಡ ಅಲೆಮಾರಿ ಜನಾಂಗವಾಗಿದೆ. ಸುಡುಗಾಡು ಸಿದ್ಧರೆಂದರೆ ರಾತ್ರಿಹೊತ್ತಿನಲ್ಲಿ ವಿಶೇಷವಾಗಿ ಅಮವಾಸಿ, ಹುಣ್ಣಿಮೆ ಇಲ್ಲವೆ ರವಿವಾರಗಳಂದು ಸ್ಮಶಾನದಲ್ಲಿದ್ದು ಮಂತ್ರಸಿದ್ಧಿ ಮಾಡಿಕೊಳ್ಳುತ್ತಾರೆಂದು ಪ್ರತೀತಿ ಇದೆ. ಅವರ ಹೆಚ್ಚಿನ ಒಡನಾಟ ವಾಸ ಸುಡುಗಾಡಿನಲ್ಲಿ, ಹಾಗಾಗಿ ಇವರು ಸುಡುಗಾಡು ಸಿದ್ಧರೆಂದು ಪ್ರಸಿದ್ಧರು. ಇವರನ್ನು ನಿರಂಜನಯ್ಯಗಳೆಂದೂ ಕೂಡ ಕರೆಯುತ್ತಾರೆ. ಇದೊಂದು ಅಲೆಮಾರಿ ಜನಾಂಗವಾಗಿದ್ದು ಆಂಧ್ರಪ್ರದೇಶದ ಶ್ರೀ ಶೈಲದ ಕಡೆಯಿಂದ ಬಂದವರಾಗಿದ್ದಾರೆ. ಶ್ರೀ ಶೈಲಮಲ್ಲಿಕಾರ್ಜುನನ ಭಕ್ತರಾಗಿದ್ದು ಮಲ್ಲಿಕಾರ್ಜುನ ಮೂರ್ತಿಯನ್ನು ತಲೆಯಮೇಲೆ ಹೊತ್ತುಕೊಂಡು ಚರ್ಮವಾದ್ಯವನ್ನು ಬಾರಿಸುತ್ತ ಬರುವವರನ್ನು ಪರ್ವತ ಮಲ್ಲಯ್ಯನವರೆಂದು ಕರೆಯುತ್ತಾರೆ. ಇವರೆಲ್ಲ ಶಿವನಭಕ್ತರಾದ ಶೈವ ಸಂಪ್ರದಾಯದವರು ಶಿವನ ಭಯಂಕರ ರೂಪವನ್ನು ಆರಾಧಿಸುವವರು.

ಸುಡುಗಾಡಸಿದ್ಧರು ಈ ಹಿಂದೆ ತಮ್ಮ ಹೆಂಡತಿ ಮಕ್ಕಳೊಂದಿಗೆ ಊರೂರಿಗೆ ಭಿಕ್ಷೆಬೇಡಲು ಬರುತ್ತಿದ್ದರು. ಊರಿನ ಗುರುಹಿರಿಯರನ್ನು ಕಂಡು ಆ ಊರಿಗೆ ಮುಂದೆ

ಒದಗಿ ಬರಲಿರುವ ಅನಾಹುತ ಗಳನ್ನು ಈಗಲೇ ಕಂಡು ಹಿಡಿದು (ಕಾಲಜ್ಞಾನ) ಅವುಗಳ ನಿವಾರಣೆಗಾಗಿ ಪರಿಹಾರೋಪಾಯಗಳನ್ನು ತಿಳಿಸುತ್ತಿದ್ದರು. ಪೂಜೆಗೆ ಬೇಕಾಗುವ ಸಾಮಗ್ರಿಗಳನ್ನು ಕೊಡಿಸಿಕೊಡುವುದಲ್ಲದೆ, ಕಾಣಿಕೆ ಮತ್ತು ಬಟ್ಟೆಬರೆಗಳನ್ನು ಕೊಡಿಸುತ್ತಿದ್ದರು. ಊರಿಗೆ ಹೊರಡುವಾಗ ದವಸಧಾನ್ಯಗಳನ್ನು ಮನೆ-ಮನೆಗೆ ಹೋಗಿ ಭಿಕ್ಷೆಬೇಡಿ ಎತ್ತಿಕೊಳ್ಳುತ್ತಿದ್ದರು. ಬುಡಬುಡಿಕೆಯವರು ಕೂಡ ಹೀಗೆ ಮಾಡುತ್ತಾರಾದರೂ, 'ಬುಡಬುಡಿಕೆಯವನ ಮಾತು ಬುಡತನಕ ಸುಳ್ಳು' ಎಂದು ಸುಡುಗಾಡುಸಿದ್ಧರಿಗೆ ಹೆಚ್ಚಿನ ಗೌರವ ಕೊಡುತ್ತಾರೆ. ಸುಡುಗಾಡು ಸಿದ್ಧರ ಹೆಣ್ಣುಮಕ್ಕಳು ಈಚಲು ಗರಿಗಳಿಂದ ಚ್ಯಾಪೆ ಹೆಣೆಯುತ್ತ ಒಂದು ಜೋಳಿಗೆಯಲ್ಲಿ ದವಸಧಾನ್ಯಗಳನ್ನು, ಇನ್ನೊಂದು ಜೋಳಿಗೆಯಲ್ಲಿ ಊಟಮಾಡಲು ಅನ್ನವನ್ನು ನೀಡಿಸಿಕೊಳ್ಳುತ್ತಾರೆ. ಊರಿನ ಗುಡಿ-ಗುಂಡಾರ, ಮಸೀದಿ ಇಲ್ಲವೆ ಧರ್ಮಛತ್ರಗಳಲ್ಲಿ ಇಳಿದುಕೊಳ್ಳುತ್ತಾರೆ.

ಈಗ ನನ್ನ ೬೫ನೆಯ ವಯಸ್ಸಿನಲ್ಲಿ ನಾನು ಬಾಲ್ಯದಲ್ಲಿ ಕಂಡ ಸುಡುಗಾಡು ಸಿದ್ಧರು-ನಿರಂಜನಯ್ಯ ಗಳನ್ನು ಈಗಲೂ ನೆನಪಿಸಿಕೊಳ್ಳುತ್ತೇನೆ. ನಮ್ಮೂರು ಮುಂದಿನ ದೊಡ್ಡ ಬಯಲಿನ ಮಧ್ಯದಲ್ಲಿ ಒಂದು ಬಸಿರಿಮರದ ಕಟ್ಟೆ, ಚೌಕೀ ಕಟ್ಟೆ ಇದೆ. ಅದಕ್ಕೆ ಸ್ವಲ್ಪು ದೂರದಲ್ಲಿ ಚಾವಡಿ, ಅದರ ಪಕ್ಕದಲ್ಲಿ ದನಗಳ ದೊಡ್ಡಿ, ಮಸೀದಿ, ಮರುಳಸಿದ್ಧನ ಗುಡಿ, ಬಸವಣ್ಣನ ಗಡಿ ಇವುಗಳ ಬೆನ್ನು ಹಿಂದೆ ಶಾಲೆ. ಶಾಲೆಯ ಆವರಣ ಅದರ ಹಿಂದೆ ಹನುಮಪ್ಪನ ಗುಡಿ, ಬಗಲಲ್ಲಿ ಕಲ್ಲೇಶ್ವರನ ಗುಡಿ ಎದುರಲ್ಲಿ ಗ್ರಾಮದೇವಿ ದ್ಯಾಮವ್ವನ ಗುಡಿ. ನಮ್ಮೂರಿಗೆ ಮಳೆಗಾಲವೊಂದನ್ನು ಬಿಟ್ಟು ಉಳಿದ ಚಳಿಗಾಲ ಹಾಗೂ ಬೇಸಿಗೆ ಕಾಲದಲ್ಲಿ ಯಾವಾಗಲೂ ಅಲೆಮಾರಿ ಜನಗಳು ಬಯಲಲ್ಲಿ, ಗುಡಿಗಳಲ್ಲಿ, ಗುಡಿಯ ಅಂಗಳದಲ್ಲಿ ಬೀಡು ಬಿಟ್ಟಿರುತ್ತಿದ್ದರು. ಶಿವರಾತ್ರಿಯಲ್ಲಿ ಬರುವ ಮರುಳಸಿದ್ಧನ ಜಾತ್ರೆ, ಯುಗಾದಿ, ಪಂಚಮಿ, ದಸರಾ, ದೀಪಾವಳಿ, ಉರುಸು ಮುಂತಾದವು ಬಂದರೆ, ಬುಧವಾರ ನಡೆಯುವ ನಮ್ಮೂರ ಸಂತೆಯ ದಿನ ಇವರೆಲ್ಲ ನೋಡಲು ಸಿಗುತ್ತಿದ್ದರು. ಬಯಲಾಟ, ನಾಟಕಗಳು, ತೊಗಲುಗೊಂಬೆಯಾಟ, ಗೀಗೀ ಮೇಳದವರು ಕೂಡ ಇರುತ್ತಿದ್ದರು. ಇಂಥದರಲ್ಲಿ ದುರಗಮುರಗಿಯುವರು, ಸುಡುಗಾಡುಸಿದ್ಧರು (ನಿರಂಜನಯ್ಯನವರು), ಬುಡಬುಡಕಿ ಯುವರು, ಎಣ್ಣೆ ಜೋಗಪ್ಪನವರು, ಜೋಗತಿಯವರು, ಜೋಗಪ್ಪನವರು, ಕೌಲೆತ್ತಿನವರು, ಗಂಗೆಗೌರಿ ಆಡಿಸುವವರು ವೇಷಗಾರರು, ಗೊಂದಲಿಗರು, ಹಿರಿನ್ ಶಿಕಾರಿಗಳು, ಚೆಂಚರು ಮೊದಲಾದವರು ಸರತಿಯಂತೆ ಬಂದು ಹೋಗುತ್ತಿದ್ದರು. ವೃತ್ತಿನಿರತರಾದ ಜೋಗೇರು, ಸಿಲಾವರ ಭಾಂಡೆಯವರು, (ಗೊಂದಲಿಗರು) ಜಮಖಾನೆ-ಗುಡಾರ ತಾಡಪಲ್ ಮಾರಾಟಗಾರರು, ಬೀಸುವಕಲ್ಲು ಅವಕ್ಕೆ ಹೊಳೆಹಾಕುವವರು ಇವರೆಲ್ಲ ಹಿಂಡು ಹಿಂಡಾಗಿ ಬರುತ್ತಿದ್ದರು.

ಇವರಲ್ಲಿ ನಿರಂಜನಯ್ಯವರು, ಸುಡುಗಾಡು ಸಿದ್ಧರು ವಿಶಿಷ್ಟ ಭಿಕ್ಷುಕರು. ಇವರು ತಮ್ಮ ವಿಚಿತ್ರ ವೇಷ ಭೂಷಣ, ಬಣ್ಣ ಬಣ್ಣದ ನಿಲುವಂಗಿ, ಬಣ್ಣ ಬಣ್ಣದ ರುಮಾಲು

ಅದಕ್ಕೆ ಸಿಕ್ಕಿಸಿಕೊಂಡ ನವಿಲುಗರಿ ವಿವಿಧ ಬಣ್ಣದ ಹಕ್ಕಿ ಗರಿ, ಮುಳ್ಳುಗಳು, ಹಣೆಯಲ್ಲಿ ಢಾಳವಾಗಿ ಹಚ್ಚಿಕೊಂಡ ವಿಭೂತಿ, ಕಣ್ಣಿಗೆ ಹಚ್ಚಿದ ಕಾಡಿಗೆ ಕಣ್ಣಿನ ಸುತ್ತ ವರ್ತುಳವಾಗಿ ಹಚ್ಚಿಕೊಂಡ ವಿಭೂತಿ, ಕುಂಕುಮ ಭಂಡಾರದ ಗೆರೆಗಳು, ಮುಖಕ್ಕೆ ಮಾಡಿಕೊಂಡ ಅಲಂಕಾರ ಇವರನ್ನು ಕಂಡರೆ ಮಕ್ಕಳಿಗೆ ಭಯ, ಹೆಣ್ಣುಮಕ್ಕಳಿಗೆ ಭಯಮಿಶ್ರಿತ ಭಕ್ತಿ ಹಾಗೂ ಹಿರಿಯರಿಗೆ ಭಯ ಉಕ್ಕುತ್ತಿತ್ತು. ಹೆಗಲಲ್ಲಿ ಇಟ್ಟ ಬಿದಿರು ಪಟ್ಟಿಕೋಲು ಅದಕ್ಕೆ ಬೆನ್ನು ಹಿಂದೆ ಹಾಕಿಕೊಂಡ ಜೋಳಿಗೆ, ಮುಂದೆ ಹಿತ್ತಾಳೆ ಸರಪಣಿಗೆ ಕಟ್ಟಿದ ಮಿರಮಿರನೆ ಮಿಂಚುವ ಹಿತ್ತಾಳೆ ಘಂಟೆ, ಬಲಗೈಯ್ಯಲ್ಲೊಂದು ನಾಲ್ಕೈದು ಅಡಿಯ ಬಿದಿರು ಕೋಲು, ಗುನುಗುನು ಹಾಡುತ್ತ ಬರುಬರುತ್ತ ನಮ್ಮ ಗ್ರಾಮದ, ಸುತ್ತಮುತ್ತಲಿನ ಹಾಗೂ ದೇವ-ದೇವತೆಗಳ ಹೆಸರನ್ನು ರಾಗವಾಗಿ, ಗಟ್ಟಿಯಾಗಿ ಉಚ್ಚರಿಸುತ್ತ ಎಲ್ಲ ದೇವರುಗಳು ಈ ಊರಿಗೆ ಕಲ್ಯಾಣವನ್ನು, ಸುಖವನ್ನು, ಭೋಗ ಭಾಗ್ಯಗಳನ್ನುಂಟುಮಾಡಲೆಂದು ಜನಸಂತತಿ ಬೆಳೆಯಲೆಂದು ಹರಕೆ ಬೇಡುತ್ತ ಓಣಿ ಓಣಿಯಲ್ಲಿ ಗ್ರಾಮಪ್ರದಿಕ್ಷಣೆ ಮಾಡುತ್ತಿದ್ದರು. ತಿಂಥಿಣಿ ಮೌನಪ್ಪಯ್ಯ ಕೊಪ್ಪಳ ಸಿರಸಪ್ಪಯ್ಯ, ಕ್ಯಾದಿಗಪ್ಪಯ್ಯ, ಕೊಪ್ಪಳ ಗವಿಸಿದ್ಧೇಶ್ವರ, ಮುಂಡರಗಿ ಅನ್ನದಾನೇಶ್ವರ ಹೀಗೆ ನನಗೆ ಶರಣರ ಹೆಸರುಗಳ ಗೊತ್ತಾದದ್ದೇ ಈ ನಿರಂಜನಯ್ಯರಿಂದ, ಸುಡುಗಾಡು ಸಿದ್ಧರಿಂದ. ಬೆಳಗಿನ ಜಾವದಲ್ಲಿ ಶಂಖ ಊದುತ್ತ ಗಂಟೆ ಬಾರಿಸುತ್ತ ಊರು ಊರಿನ ಕೇರಿ ಕೇರಿಗಳಲ್ಲಿ ಜನರಿಗೆ ಭಕ್ತಿ ಬೀಜ ಬಿತ್ತುತ್ತಾರೆ.

ಕೆಲವರು ಸುಡುಗಾಡು ಸಿದ್ಧರು ತಮ್ಮ ವಿಶೇಷ ಊಡುಗೆ ತೊಡಿಗೆಯಲ್ಲಿ ಮನೆ ಮನೆಗೆ ಹೋಗಿ ವಿಶಾಲ ಮನೆಯ ಎದುರಿಗೆ ತಮ್ಮ ಕೈ ಚಳಕದ ಆಟ, ಜೊತೆಗೆ ಗುಂಡು ನುಂಗುವುದು, ಆ ಬೆನಕಪ್ಪಗಳನ್ನು ಗಬ್ಬಗ ಗಂಟಲಲ್ಲಿಟ್ಟು ಕೊಂಡು ಬಾಯಿಂದ ಹೊರಗೆ ತೆಗೆಯುವುದು, ಜೋಳಿಗೆಯಿಂದ ಒಂದು ವಸ್ತುವನ್ನು ಎತ್ತಿಕೊಂಡು ಮುಷ್ಟಿಯಲ್ಲಿ ಹಿಡಿದು ಮಂತ್ರದಂಡ ಸುತ್ತಾಡಿಸಿ ಮುಷ್ಟಿ ತೆರೆದಾಗ ಅದು ಮಾಯ ಮಾಡುವುದು ಮತ್ತೆ ಮಂತ್ರ ದಂಡ ಆಡಿಸಿ ಮುಷ್ಟಿಯಲ್ಲಿ ಆ ವಸ್ತುವನ್ನು ಬರಿಸುವುದು ಮತ್ತೆ ಜೋಳಿಗಿಗೆ ನೀ ನಡಿ, ನೀ ನಡಿ ಒಳಗ ನಡಿ ಎಂದು ಜೋಳಿಗಿಗೆ ಎಸೆಯುವುದು. (ಜ್ಯಾ ಜ್ಯಾ ಜ್ಯಾ) ಯಾವು ಯಾವುದೋ ಹೆಸರಿನಿಂದ ಆ ಗೊಂಬೆಗಳಿಗೆ, ಆ ವಸ್ತುಗಳಿಗೆ ಕರೆದು ಚಿಂವ್ ಚಿಂವ್ ಚಿಂವ್ ಚಿಂವಕ್ ಎಂದೆನ್ನಿಸುತ್ತ ಆ ಗೊಂಬೆಗಳ ಕುತ್ತಿಗೆ ಮುರಿದಿಡಿತ್ತಾನೋ ಅದಕ್ಕೆ ಆ ಗೊಂಬೆಗಳು ಚಿಂವ್ ಗೊಡುತ್ತವೆಯೋ ಎಂಬಂತೆ ಬಡಿಬಡಿದು ಜ್ಯಾಜ್ಯಾ-ಜ್ಯಾಜಾ ಎಂದು ಸಂತೈಸುವುದು ಇದರಿಂದ ಸುತ್ತ ನೆರದವರಿಗೆ ಕೈ ಚಳಕದಿಂದ ಸುಡುಗಾಡ ಸಿದ್ಧ ತನ್ನ ವಿಶಿಷ್ಟವಾದ ಮಾತಿನಿಂದ ನಗಿಸುವುದು ಮೋಜಿನ ಕೈಚಳಕದಾಟವೇ ಸರಿ. ಇವರಿಂದಲೇ ಕೈಚಳಕದ ಇಂದ್ರ ಜಾಲ ವಿಕಾಸಗೊಂಡಿರಬೇಕು. ಇದನ್ನೆಲ್ಲ ಕಂಡು ಭಿಕ್ಷೆನೀಡುವರು. ಭಿಕ್ಷೆ ಎನ್ನುವುದಕ್ಕೆ ತಮ್ಮ ಕಲೆ ಪ್ರದರ್ಶಿಸಿ ಅದಕ್ಕೆ ದವಸಧಾನ್ಯ ಹಾಗೂ ಬಟ್ಟೆ-ಬರೆ, ಅನ್ನ-ಆಹಾರ ಪಡೆಯುವರು. ಇದು ತಮ್ಮ ಪ್ರದರ್ಶನಕ್ಕೆ ಪಡೆಯುವ ಪ್ರತಿಫಲ. ಇದನ್ನು ದಾನವೆನ್ನಲಾಗದು.

ಈ ಜನಾಂಗ ಇತ್ತೀಚಿತ್ತಲಾಗಿ ಕಂದಾಯ ಗ್ರಾಮಗಳಲ್ಲಿ ಬೀಡುಬಿಟ್ಟು ಜಮೀನು ಪಡೆದು ಗಂಗಾಯೋಜನೆ ಅಡಿಯಲ್ಲಿ ಬೋರುಹಾಕಿಸಿಕೊಂಡು ನೀರಾವರಿ ಮಾಡುತ್ತಾ ತಮ್ಮ ಕುಲಕಸಬನ್ನು ಕೈಬಿಟ್ಟಿದ್ದಾರೆ. ಶಾಲೆ ಕಾಲೇಜುಗಳಿಗೆ ಹೋಗಿ ವಿದ್ಯಾವಂತರಾಗಿ ನೌಕರಿಯಲ್ಲಿದ್ದಾರೆ. ಗ್ರಾಮ ಪಂಚಾಯಿತಿ, ತಾಲೂಕಾ ಪಂಚಾಯಿತಿ ಸದಸ್ಯರಾಗಿದ್ದಾರೆ. ಹೀಗೆ ನಾಗರಿಕ ಜಗತ್ತಿನಲ್ಲಿ ಪ್ರವೇಶಿಸಿ ಅಲೆಮಾರಿ ಜನಾಂಗವಾಗದೆ ನಾಗರಿಕರೇ ಆಗಿದ್ದಾರೆ. ಇನ್ನು ಕೆಲವರು ಬೀದಿ ಬದಿಯಲ್ಲಿ ಜ್ಯೋತಿಷ್ಯ ಹೇಳುವುದು ಗಿಡಮೂಲಿಕೆ ಮಾರುವುದು, ಯಂತ್ರ ಮಂತ್ರ ತಾಯಿತ ಕಟ್ಟುವ ಕಾಯಕವನ್ನು ಮುಂದುವರಿಸಿರುವುದನ್ನು ಕಾಣಬಹುದು.

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅಧ್ಯಕ್ಷರಾದ ಶ್ರೀ ಕೆರೆಮನೆ ಶಂಭು ಹೆಗಡೆಯವರು, ಅಕಾಡೆಮಿ ಸದಸ್ಯರಾದ ಶ್ರೀ ಗವೀಶ ಹಿರೇಮಠರವರು ಸಂಚಾಲಕರಾಗಿ ತುಂಬ ಅಚ್ಚುಕಟ್ಟಾಗಿ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದಾರೆ. ಈ ದಿನ ವಿಚಾರ ಸಂಕಿರಣವನ್ನು ಕೊಪ್ಪಳ ಜಿಲ್ಲಾ ಸುಡುಗಾಡುಸಿದ್ಧರು ಸಂಘದವರು ಸೇರಿಕೊಂಡು ನಡೆಯಿಸಿಕೊಂಡು ಬಂದ ಕಾರ್ಯಕ್ರಮ, ಈ ಜನಾಂಗದ ಅಭಿವೃದ್ಧಿ ಹಾಗೂ ಏಳಿಗೆಗೆ ಸಂಘಟನೆಗೆ ಸಹಾಯಕಾರಿಯಾಗಿದೆಯೆಂದು ಭಾವಿಸಿದ್ದೇನೆ. ಇಲ್ಲಿ ಪ್ರಥಮ ಬಾರಿಗೆ ಹಿರಿಯ ಸುಡುಗಾಡು ಸಿದ್ಧರಿಂದ ಅವರ ಕೈಚಳಕದ ಆಟದ ಪ್ರಾತ್ಯಕ್ಷಿಕೆ ಏರ್ಪಡಿಸಿದ್ದು ವಿಶೇಷವಾಗಿತ್ತು. ಈ ಜನಾಂಗದ ಮೂಲ ನೆಲೆ ಅವರ ಭಿಕ್ಷಾಟನೆ ಕೈ ಚಳಕದ ಆಟ, ಜಾನಪದ ಕಲೆಗಳು, ಸ್ತ್ರೀ ಸಂವೇದನೆ ಹಾಗೂ ನ್ಯಾಯ ಪಂಚಾಯಿತಿಗಳು ಕುರಿತು ತಿಳಿದುಕೊಳ್ಳಲು ವಿಚಾರಸಂಕಿರಣದಿಂದ ಸಾಧ್ಯವಾಗಿದೆ. ಇದಕ್ಕಾಗಿ ಸಂಘಟಕರಿಗೆ ವಿಶೇಷವಾಗಿ ಸಂಚಾಲಕರಾದ ಗವೀಶ ಹಿರೇಮಠ ಎಂ. ಎಸ್. ಗಂಟಿ ಹಾಗೂ ಜಿಲ್ಲಾ ಸಂಘದ ಅಧ್ಯಕ್ಷರಾದ ಸಣ್ಣಶಿವಪ್ಪ ಒಂಟೆತ್ತಿನವನ್ನು ಅಭಿನಂದಿಸಬೇಕಾಗಿದೆ. ಈ ವಿಚಾರಗೋಷ್ಠಿಗೆ ಅಧ್ಯಕ್ಷನನ್ನಾಗಿ ಆಹ್ವಾನಿಸಿ ಗೌರವಿಸಿದ್ದಕ್ಕೆ ಅಕಾಡೆಮಿ ಅಧ್ಯಕ್ಷರಿಗೆ, ಸಂಚಾಲಕರಿಗೆ ಸುಡುಗಾಡು ಸಿದ್ಧರ ಸಂಘದ ಅಧ್ಯಕ್ಷರಿಗೆ ಕೃತಜ್ಞತೆ ಹೇಳುತ್ತ ನನ್ನ ನಾಲ್ಕು ಮಾತು ಮುಗಿಸುತ್ತೇನೆ. ಎಲ್ಲರಿಗೂ ಮತ್ತೊಮ್ಮೆ ಧನ್ಯವಾದಗಳು.



ಸುಡುಗಾಡು ಸಿದ್ಧರು ಸಂಸ್ಕೃತಿಯ ವಿವಿಧ ಮಜಲುಗಳನ್ನು ಪ್ರತಿಬಿಂಬಿಸುವ ಇಲ್ಲಿನ ಪ್ರಬಂಧಗಳು ಹೊಸರೀತಿಯ ಆಲೋಚನೆಗಳಿಗೆ ದಾರಿಮಾಡಿಕೊಟ್ಟಿವೆ.

ಸುಡುಗಾಡು ಸಿದ್ಧರ ರೀತಿ, ನೀತಿ, ನ್ಯಾಯ, ಧರ್ಮ ಹೀಗೆ ವಿವಿಧ ವಿಷಯಗಳನ್ನೊಳಗೊಂಡಿರುವ ಇಲ್ಲಿಯ ಪ್ರಬಂಧಗಳನ್ನು ಗಮನಿಸಿದಾಗ ಈ ಜನಾಂಗದ ಸಮಗ್ರ ಜೀವನವಿಧಾನ ತಿಳಿದು ಬರುತ್ತಿದೆ. ಈ ಹಿನ್ನಲೆಯಲ್ಲಿ ಪ್ರಬಂಧಕಾರರ ಅಧ್ಯಯನದ ಶ್ರಮ ಸ್ಪಷ್ಟವಾಗುತ್ತಿದೆ.

ಕನ್ನಡ ಜಾನಪದದಲ್ಲಿ ವಿಶೇಷವಾಗಿ ಬುಡಕಟ್ಟು ಅಧ್ಯಯನಕ್ಕೆ ಸಂಬಂಧಿಸಿದಂತೆ ತುಂಬ ನಿರೀಕ್ಷೆಗಳನ್ನಿರಿಸಿಕೊಂಡ ನನಗೆ ಈ ಕೃತಿಯ ಪ್ರಕಟಣೆ ಸಂತೋಷವನ್ನುಂಟುಮಾಡಿದೆ. ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಈ ನಿಟ್ಟಿನಲ್ಲಿ ಚಿಂತಿಸುತ್ತ ವಿಶೇಷವಾಗಿ ಬುಡಕಟ್ಟು ಜನಾಂಗದ ಕಲಾಪ್ರದರ್ಶನ, ವಿಚಾರ ಸಂಕಿರಣ ಹಾಗೂ ಪ್ರಕಟನೆಯ ಕಾರ್ಯವನ್ನು ಕೈಗೆತ್ತಿಕೊಂಡಿರುವುದು ಸ್ವಾಗತಾರ್ಹ.

ತಮ್ಮ ಸಂಘಟನಾ ಸಾಮರ್ಥ್ಯದಿಂದ ಹಲವು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಗುರುತಿಸಿಕೊಂಡಿರುವ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಸದಸ್ಯರಾದ ಆತ್ಮೀಯ ಗೆಳೆಯ ಶ್ರೀ ಗವೀಶ ಹಿರೇಮಠ ಅವರು ಕೊಪ್ಪಳದಲ್ಲಿ ಜರುಗಿದ ಸುಡುಗಾಡು ಸಿದ್ಧರು ವಿಚಾರ ಸಂಕಿರಣದ ಪ್ರಬಂಧಗಳನ್ನು ಸಂಗ್ರಹಿಸಿ ಪ್ರಕಟಣೆಗೆ ಸಿದ್ಧಪಡಿಸಿ ತಮ್ಮ ಸಂಪಾದಕತ್ವದಲ್ಲಿ ಇದನ್ನು ಹೊರತರುತ್ತಿರುವುದು ನನಗೆ ಅವರ ಬಗ್ಗೆ ಹೆಚ್ಚಿನ ಅಭಿಮಾನವನ್ನುಂಟುಮಾಡಿದೆ. ಅವರಿಂದ ಇನ್ನೂ ಇಂತಹ ಕೃತಿಗಳು ಹೊರಬರಲೆಂದು ಆಶಿಸುತ್ತೇನೆ.

ಡಾ. ಪಿ. ಕೆ. ಖಂಡೋಬಾ
ಕನ್ನಡ ಪ್ರಾಧ್ಯಾಪಕರು,
ಗುಲಬರ್ಗಾ ವಿಶ್ವವಿದ್ಯಾಲಯ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ,
ಬೆಂಗಳೂರು-೫೬೦ ೦೦೨

